# ವಿದ್ಯಾರ್ಥಿ



**ಗಾದೆ ಮಾತುಗಳ ವಿಸ್ತರಣೆ**

**ಪ್ರಬಂಧ ಬರೆಹಗಳು**

**ಪತ್ರ ಬರೆಹಗಳು**

**ಬಸವರಾಜ.ಟಿ.ಎಂ**

# ವಿದ್ಯಾರ್ಥಿ

## ಗಾದೆಮಾತುಗಳ ವಿಸ್ತರಣೆ – ಪ್ರಬಂಧಬರೆಹಗಳು – ಪತ್ರಬರೆಹಗಳು


ಲೇಖಕರು

**ಬಸವರಾಜ.ಟಿ.ಎಂ** (ಎಂ.ಎ ಬಿಇಡಿ)

**ಕನ್ನಡ ಭಾಷಾ ಶಿಕ್ಷಕರು**

**ಸರ್ಕಾರಿ ಪ್ರೌಢಶಾಲೆ, ರೂಪನಗುಡಿ**

**ಬಳ್ಳಾರಿ ಪೂರ್ವವಲಯ ಬಳ್ಳಾರಿ ಜಿಲ್ಲೆ**




| ಕ್ರ.ಸಂ | ಪರಿವಿಡಿ | ಪುಟಸಂಖ್ಯೆ |
|---|---|---|
| | **ಗಾದೆಮಾತುಗಳ ವಿಸ್ತರಣೆ** | **6–13** |
| 1 | ತಾಳಿದವನು ಬಾಳಿಯಾನು | 6 |
| 2 | ಮನಸಿದ್ದರೆ ಮಾರ್ಗ. | 6 |
| 3 | ಕೈ ಕೆಸರಾದರೆ ಬಾಯಿ ಮೊಸರು | 6 |
| 4 | ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ | 6 |
| 5 | ಮಾಡಿದ್ದುಣ್ಣೋ ಮಹಾರಾಯ. | 7 |
| 6 | ಕೂಡಿಬಾಳಿದರೆ ಸ್ವರ್ಗ ಸುಖ. | 7 |
| 7 | ಕಟ್ಟುವುದು ಕಠಿಣ; ಕೆಡಹುವುದು ಸುಲಭ. | 7 |
| 8 | ಹೆತ್ತ ತಾಯಿ; ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು. | 8 |
| 9 | ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ | 8 |
| 10 | ಆಳಾಗಬಲ್ಲವನು; ಅರಸಾಗಬಲ್ಲನು. | 9 |
| 11 | ಮಾತೇ ಮುತ್ತು ; ಮಾತೇ ಮೃತ್ಯು | 9 |
| 12 | ಚಿಂತೆಯೇ ಮುಪ್ಪು – ಸಂತೋಷವೇ ಯೌವನ | 9 |
| 13 | ಅತಿಯಾಸೆ ಗತಿ ಗೇಡು | 10 |
| 14 | ಊಟ ಬಲ್ಲವನಿಗೆ ರೋಗವಿಲ್ಲ ಮಾತು ಬಲ್ಲವನಿಗೆ ಜಗಳವಿಲ್ಲ | 10 |
| 15 | ಕೋಪದಲ್ಲಿ ಕೊಯ್ದ ಮೂಗು ಮತ್ತೆ ಬಂದಿತೇ | 10 |
| 16 | ಉಪ್ಪಿಗಿಂತ ರುಚಿಯಿಲ್ಲ; ತಾಯಿಗಿಂತ ಬಂಧುವಿಲ್ಲ | 11 |
| 17 | ಶಕ್ತಿಗಿಂತ ಯುಕ್ತಿ ಮೇಲು | 11 |
| 18 | ಬೆಕ್ಕಿಗೆ ಆಟ ಇಲಿಗೆ ಪ್ರಾಣ ಸಂಕಟ | 11 |
| 19 | ಅರಮನೆಗಿಂತ ನೆರೆಮನೆ ಲೇಸು | 12 |
| 20 | ಗಿಡವಾಗಿ ಬಗ್ಗದು ಮರವಾಗಿ ಬಗ್ಗೀತೆ | 12 |
| 21 | ಉಪ್ಪು ತಿಂದ ಮನೆಗೆ ಎರಡು ಬಗೆಯ ಬೇಡ | 12 |
| 22 | ದೇಶ ಸುತ್ತಿ ನೋಡು ಕೋಶ ಓದಿ ನೋಡು | 13 |
| 23 | ದುಡಿಮೆಯೇ ದುಡ್ಡಿನ ತಾಯಿ | 13 |
| 24 | ಗುಣ ನೋಡಿ ಗೆಳೆತನ ಮಾಡು | 13 |
| 25 | ಹಾಸಿಗೆ ಇದ್ದಷ್ಟು ಕಾಲು ಚಾಚು | 13 |


********************

| | ಪ್ರಬಂಧಗಳು | 15–28 |
|---|---|---|
| 1 | ರಾಷ್ಟ್ರೀಯ ಹಬ್ಬಗಳ ಆಚರಣೆ ಮತ್ತು ಮಹತ್ವ ಮಹತ್ವ | 15 |
| 2 | ಗ್ರಂಥಾಲಯಗಳ ಮಹತ್ವ ಅಥವಾ ಶಾಲಾ ಗ್ರಂಥಾಲಯಗಳ ಸದ್ಬಳಕೆ | 15 |
| 3 | ಸಾಮಾಜಿಕ ಪಿಡುಗುಗಳು | 16 |
| 4 | ಸ್ವಚ್ಛಭಾರತ ಅಭಿಯಾನ | 16 |
| 5 | ಪ್ರಾಚ್ಯ ಸ್ಮಾರಕಗಳ ಸಂರಕ್ಷಣೆ | 17 |
| 6 | ರಾಷ್ಟ್ರೀಯ ಭಾವೈಕ್ಯ | 17 |
| 7 | ಗ್ರಾಮ ಸ್ವರಾಜ್ಯ | 18 |
| 8 | ತ್ಯಾಜ್ಯವಸ್ತು ನಿರ್ವಹಣೆ | 18 |
| 9 | ಮಹಿಳಾ ಸಬಲೀಕರಣ | 19 |
| 10 | ಅಕ್ಷರ ದಾಸೋಹ ಮತ್ತು ಕ್ಷೀರ ಭಾಗ್ಯಗಳ ಸಾಮಾಜಿಕ ಮಹತ್ತ್ವ | 20 |
| 11 | ವರದಕ್ಷಿಣೆ ಒಂದು ಸಾಮಾಜಿಕ ಪಿಡುಗು | 20 |
| 12 | ರೈತರ ಆತ್ಮಹತ್ಯಗೆ ಕಾರಣಗಳು ಮತ್ತು ಪರಿಹಾರೋಪಾಯಗಳು | 21 |
| 13 | ಸಮೂಹ ಮಾಧ್ಯಮಗಳು | 21 |
| 14 | ಮೂಢನಂಬಿಕೆಗಳು | 22 |
| 15 | ಭಯೋತ್ಪಾದನೆ | 22 |
| 16 | ಪತ್ರಿಕೆಗಳ ಮಹತ್ವ | 23 |
| 17 | ಕಂಪ್ಯೂಟರ್ ಶಿಕ್ಷಣ | 23 |
| 18 | ಕ್ರೀಡೆಗಳ ಮಹತ್ವ | 24 |
| 19 | ಪರಿಸರ ಸಂರಕ್ಷಣೆ | 24 |
| 20 | ಆನಸಂಖ್ಯಾ ಸ್ಫೋಟ | 25 |
| 21 | ದೂರದರ್ಶನ ಅಥವಾ ದೂರದರ್ಶನದ ಒಳಿತು ಕೆಡುಕುಗಳು | 25 |
| 22 | ಆರೋಗ್ಯ ಮತ್ತು ನೈರ್ಮಲ್ಯ | 26 |
| 23 | ಬಾಲ್ಯವಿವಾಹ ಒಂದು ಸಾಮಾಜಿಕ ಪಿಡುಗು | 26 |
| 24 | ಮೇಕ್ ಇನ್ ಇಂಡಿಯಾ | 27 |
| 25 | ಪರಿಸರ ಮಾಲಿನ್ಯ | 27 |
| 26 | ಕರ್ನಾಟಕದ ನದಿ ನೀರಿನ ಸಮಸ್ಯೆ | 28 |
| 27 | ವಿದ್ಯಾರ್ಥಿಗಳ ಜ್ಞಾನಾಭಿವೃದ್ಧಿಯಲ್ಲಿ ಸಾಮಾಜಿಕ ಜಾಲತಾಣಗಳ ಮಹತ್ವ | 28 |
| | **ಮಾದರಿ ಪತ್ರಬರೆಹಗಳು** | **30–36** |

# ಗಾದೆಮಾತುಗಳ ವಿಸ್ತರಣೆ

## 1.ತಾಳಿದವನು ಬಾಳಿಯಾನು

ಗಾದೆ ವೇದಗಳಿಗೆ ಸಮಾನ , ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. **ತಾಳಿದವನು ಬಾಳಿಯಾನು** ಎಂಬ ಈ ಮೇಲಿನ ಗಾದೆಯು ಪ್ರಸಿದ್ಧವಾಗಿದೆ.

ತಾಳುವಿಕೆಗಿಂತ ಬೇರೊಂದು ತಪಸ್ಸು ಇಲ್ಲ ,ತಾಳ್ಮೆಯೇ ನಿಜವಾದ ತಪಸ್ಸು. ತಲ್ಲಣಿಸದಿರು ಕಂಡ್ಯ ತಾಳು ಮನವೆ ಎಂದಿದ್ದಾರೆ ಕನಕದಾಸರು. ಶಬರಿ ತಾಳ್ಮೆಯಿಂದ ಸಾಕಷ್ಟು ವರ್ಷಗಳು ಕಾದಿದದ್ದಕ್ಕೆ ಶ್ರೀರಾಮನ ದರ್ಶನದಿಂದ ಮುಕ್ತಿ ದೊರೆಯಿತು. ತಾಳ್ಮೆಯಿಂದ ಯೋಚಿಸಿದ ಧರ್ಮಬುದ್ಧಿ ಸತ್ಯವನ್ನು ತೋರಿಸಿದನು. ಆದ್ದರಿಂದ ತಾಳ್ಮೆ ಬಹಳ ಮುಖ್ಯವಾದ ವಸ್ತು ಇದ್ದ ಹಾಗೆ. ಗಿಡ ನೆಟ್ಟ ಕೂಡಲೇ ಮರವಾಗಿ ಫಲ ಬಿಡಬೇಕು ಎಂದರೆ ಸಾಧ್ಯವಿಲ್ಲ. ಸಂಗೀತಾಭ್ಯಾಸ ಮಾಡಿದರೆ ಒಂದೇ ತಿಂಗಳಿನಲ್ಲಿ ಕಛೇರಿ ನೀಡುವಂತಾಗಬೇಕು ಎನ್ನುವುದು ಸಾಧ್ಯವಿಲ್ಲ. ಪ್ರತಿಯೊಂದು ಸಾಧನೆಯಲ್ಲೂ ತಾಳ್ಮೆ ಬೇಕು. ತಾಳ್ಮೆ ಎಂದರೆ ಆಮೆಗತಿಯಲ್ಲಿ ಸಾಗುವುದು ಎಂದರ್ಥವಲ್ಲ ಯಾವ ಸಾಧನೆಗೆ ಎಷ್ಟು ಸಮಯ ಮತ್ತು ಪ್ರಯತ್ನಗಳು ಬೇಕೋ ಅವನ್ನು ಪೂರ್ಣತೆಯಿಂದ ಮಾಡಲು ಬೇಕಾಗುವ ಶಕ್ತಿಯೇ ತಾಳ್ಮೆ; ತಾಳ್ಮೆಯಿಂದ ಕಟ್ಟಿದ್ದು ಮತ್ತು ಪಡೆದಿದ್ದು ದೀರ್ಘಕಾಲ ಬಾಳುತ್ತದೆ. ತಾಳ್ಮೆಗೆಟ್ಟು ಕೋಪದ ಕೈಯಲ್ಲಿ ನಮ್ಮ ಮನಸ್ಸನ್ನು ನೀಡಿದರೆ ಅನಾಹುತವಾಗುವುದರಲ್ಲಿ ಸಂದೇಹವಿಲ್ಲ. ತಾಳ್ಮೆಯಿಂದ ಯೋಚಿಸಿದಾಗ ಒಳ್ಳೆಯ ಕಾರ್ಯಗಳು ಫಲಪ್ರದವಾಗುತ್ತವೆ. ಮಾಡಬೇಕಾದ ಕಾರ್ಯಗಳಿಗೆ ಯೋಜನೆಗಳು ಹೊಳೆಯುತ್ತವೆ.

ಆದ್ದರಿಂದ ತಾಳ್ಮೆ ಪ್ರತಿಯೊಬ್ಬರಲ್ಲಿ ಇರಬೇಕಾದ ಅತ್ಯಮೂಲ್ಯವಾದ ಸಂಪತ್ತು ಎಂದೇ ಭಾವಿಸಿಕೊಂಡು ತಾಳ್ಮೆಯಿಂದ ಬಾಳಬೇಕು ಎಂದು ಹೇಳಬಹುದು.

## 2. ಮನಸಿದ್ದರೆ ಮಾರ್ಗ.

ಗಾದೆ ವೇದಗಳಿಗೆ ಸಮಾನ , ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಈ ಮೇಲಿನ **ಮನಸಿದ್ದರೆ ಮಾರ್ಗ** ಎಂಬ ಗಾದೆಯು ಪ್ರಸಿದ್ಧವಾಗಿದೆ.

ನಮ್ಮ ಒಳಿತು ಕೆಡುಕುಗಳಿಗೆ ಮನಸ್ಸೆ ಕಾರಣ ಆದ್ದರಿಂದ ನಮ್ಮ ಮನಸ್ಸನ್ನು ಒಳಿತಿಗೋಸ್ಕರ ಉಪಯೋಗಿಸಬೇಕು. ಮನಸ್ಸು ಮಾಡಿದರೆ ನಾನು ಇದನ್ನು ಮಾಡಬಲ್ಲೆ ಎಂಬವವರ ಮಾತನ್ನು ಕೇಳಿದಾಗ ಮನಸ್ಸಿನ ಕೆಲಸ ಎಂತಹದ್ದು ಎಂಬುದು ಅರಿವಾಗುತ್ತದೆ. ನಾವು ಯಾವುದೇ ಒಂದು ಕೆಲಸವನ್ನು ಸರಿಯಾಗಿ ಮಾಡಲು ಮನದಲ್ಲಿ ಆಸಕ್ತಿ ಉಂಟಾಗಬೇಕು. ಹಾಗೆ ಆಸಕ್ತಿ ಮೂಡಲು ಮನಸ್ಸು ಮಾಡಬೇಕು. ಹಾಗೆ ಆ ಕೆಲಸದಲ್ಲಿ ಮನಸ್ಸಿಟ್ಟು ಮಾಡಿದಾಗ ಕೆಲಸಗಳು ಯಶಸ್ವಿಯಾಗುತ್ತದೆ. ಡಾ.ರಾಜಕುಮಾರವರ ಹಾಡು

" **ಕೈಲಾಗದು ಎಂದು ಕೈಕಟ್ಟಿ ಕುಳಿತರೆ ಸಾಗದು ಕೆಲಸವು ಮುಂದೆ ಮನಸೊಂದಿದ್ದರೆ ಮಾರ್ಗವು ಉಂಟು ಕೆಚ್ಚದೆ ಇರಬೇಕೆಂದು** " ಎಂದು ಹೇಳಿರುವುದು ಗಮನಿಸಬಹುದು. ನನ್ನ ಕೈಯಲ್ಲಿ ಆಗುವುದಿಲ್ಲ ಎಂದು ಯೋಚಿಸುವುದರಿಂದ ಯಾವ ಕೆಲಸವೂ ಸಾಧ್ಯವಾಗುವುದಿಲ್ಲ. ಬದಲಾಗಿ ಮಾಡಿಯೇ ತೀರುತ್ತೇನೆ ಎಂದು ಮನಸ್ಸು ಮಾಡಿದರೆ ಎಂಥ ಕೆಲಸವಾದರೂ ಮಾಡಲು ಸಾಧ್ಯ ಎಂಬುದು ಈ ಗಾದೆ ಸೂಚಿಸುತ್ತದೆ.

## 3.ಕೈ ಕೆಸರಾದರೆ ಬಾಯಿ ಮೊಸರು

ಗಾದೆ ವೇದಗಳಿಗೆ ಸಮಾನ , ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಈ ಮೇಲಿನ **ಕೈ ಕೆಸರಾದರೆ ಬಾಯಿ ಮೊಸರು** ಎಂಬ ಗಾದೆಯು ಪ್ರಸಿದ್ಧವಾಗಿದೆ.

ಕರ್ಮವಿದ್ದಷ್ಟು ಫಲ ಎಂಬುದೊಂದು ಮಾತಿನಂತೆ ಕಷ್ಟಪಟ್ಟು ದುಡಿದರೆ ಮಾತ್ರ ಸುಖವಾಗಿ ಬಾಳು ಸಾಗಿಸಬಹುದು. ಮಂತ್ರದಿಂದ ಹಣ್ಣು ಉದುರಲು ಸಾಧ್ಯವಿಲ್ಲ. ಶಕ್ತಿ ಇಲ್ಲದೆ ನೆಡೆಯಲು ಸಾಧ್ಯವಿಲ್ಲ.ಹಾಗೆಯೇ ಕೈಮುಟ್ಟಿ ದುಡಿಯದಿದ್ದರೆ ಹೊಟ್ಟೆ ತುಂಬುವುದಿಲ್ಲ. ಕಷ್ಟಪಟ್ಟು ದುಡಿದರೆ ಹೊಟ್ಟೆ ತುಂಬುತ್ತದೆ. ರೈತನೊಬ್ಬ ಜಮೀನಿನಲ್ಲಿ ಕಷ್ಟಪಟ್ಟು ದುಡಿಯುತ್ತಾನೆ. ಬಂದಾಗ ಹಾಯಾಗಿ ಕುಳಿತು ಊಟ ಮಾಡಬಹುದು. ಅವನು ದುಡಿಯದಿದ್ದರೆ ಹೊಟ್ಟೆಗೆ ತಣ್ಣೀರರ ಬಟ್ಟೆಯೇ ಗತಿ. ವಿದ್ಯಾರ್ಥಿಗಳು ಆಸಕ್ತಿಯಿಂದ ಕಷ್ಟಪಟ್ಟು ಓದಿದರೆ ಉತ್ತಮ ಅಂಕಗಳನ್ನು ಗಳಿಸಬಹುದೆಂದು ಹೇಳಬಹುದು. ಒಟ್ಟಿನಲ್ಲಿ ಕಷ್ಟಪಟ್ಟವರಿಗೆ ಸುಖಬಾಳು ಎಂಬುದನ್ನು ಮರೆಯಬಾರದು.

## 4. ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ

ಗಾದೆ ವೇದಗಳಿಗೆ ಸಮಾನ , ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಈ ಮೇಲಿನ **ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ** ಎಂಬ ಗಾದೆಯು ಪ್ರಸಿದ್ಧವಾಗಿದೆ.

ಯಾವುದೇ ಕೆಲಸವನ್ನು ಸರಿಯಾಗಿ ಮಾಡಬೇಕಾದರೆ ಕಷ್ಟಪಡಬೇಕು. ಆದರೆ ಹಾಳು ಮಾಡಲು ಕಷ್ಟ ಪಡಬೇಕಾಗಿಯೂ ಇಲ್ಲ. " ಕಟ್ಟುವುದು ಕಠಿಣ ಕೆಡವುಹುದು ಸುಲಭ " ಎಂಬ ಗಾದೆಯು ಇದೆ ಅರ್ಥವನ್ನು ಹೋಲುತ್ತದೆ. ಒಬ್ಬ ಕುಂಬಾರ ಮಡಕೆಗಳನ್ನು ಮಾಡಲು ಮಣ್ಣು ತಂದು ಅರಳನ್ನು ಬೇರ್ಪಡಿಸಿ ಮಣ್ಣನ್ನು ಹದಮಾಡಿ ಕಷ್ಟಪಟ್ಟು ಮಡಿಕೆಯನ್ನು ಮಾಡುತ್ತಾನೆ. ಆದರೆ ಆ ಮಡಿಕೆಯನ್ನು ಒಡೆಯಲು ಒಂದು ದೊಣ್ಣೆ ಪೆಟ್ಟು ಸಾಕು. ಯಾವುದೇ ಒಂದು ಉತ್ತಮ ಕೆಲಸ ಮಾಡುವುದು ತುಂಬಾ ಕಠಿಣ. ಆದರೆ ಅದೇ ಕೆಲಸವನ್ನು ಹಾಳು ಮಾಡುವುದು ಸುಲಭ. ಪ್ರಾಚೀನ ಭಾರತೀಯರು ಕಠಿಣ ಶ್ರಮವಹಿಸಿ ಭಾರತದ ಪ್ರಾಚೀನ ವಾಸ್ತುಶಿಲ್ಪಗಳನ್ನು ನಿರ್ಮಿಸಿದರು. ಆದರೆ ವಿದೇಶಿಯರು ಒಂದು ಕ್ಷಣಮಾತ್ರದಲ್ಲಿ ವಾಸ್ತುಶಿಲ್ಪಗಳನ್ನು ಕೆಡವಿ ಹಾಕಿದರು. ಹಾಗೆಯೇ ಮನುಷ್ಯ ತನ್ನ ಉತ್ತಮವಾದ ಜೀವನದ ಭವಿಷ್ಯವನ್ನು ,ವ್ಯಕ್ತಿತ್ವವನ್ನು ನಿರ್ಮಿಸಿಕೊಳ್ಳಲು ಜೀವನವೆಲ್ಲ ಕಷ್ಟಪಡಬೇಕು. ಆದರೆ ವ್ಯಕ್ತಿತ್ವ ಹಾಳು ಮಾಡಿಕೊಳ್ಳುವುದಕ್ಕೆ ಒಂದರಗಳಿಗೆ ಸಾಕು. ಒಂದು ಕೊಡ ಹಾಲು ಕೆಡಲು ತೊಟ್ಟು ಹುಳಿ ಸಾಕಲ್ಲವೇ? ಆದ್ದರಿಂದ ಮಾನವ ತನ್ನ ಘನತೆಯನ್ನರಿತು ಕಾರ್ಯನಿರ್ವಹಿಸಬೇಕು ಎಂಬುದನ್ನು ಪ್ರಸ್ತುತ ಗಾದೆಯು ತಿಳಿಸುತ್ತದೆ.

## 5. ಮಾಡಿದ್ದುಣ್ಣೋ ಮಹಾರಾಯ.

ಗಾದೆ ವೇದಗಳಿಗೆ ಸಮಾನ , ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಈ ಮೇಲಿನ **ಮಾಡಿದ್ದುಣ್ಣೋ ಮಾರಾಯ** ಎಂಬ ಗಾದೆಯು ಪ್ರಸಿದ್ಧವಾಗಿದೆ.

ಮಾಡಿದವನಿಗೆ ನೀಡು ಭಿಕ್ಷೆ ಎಂಬ ಮಾತೊಂದಿದೆ. ನಾವು ಎಂತಹ ಕೆಲಸ ಮಾಡುತ್ತೇವೆಯೋ ಅಂತಹ ಫಲ ದೊರೆಯುತ್ತದೆ. ಅಂದರೆ ಪ್ರತಿಯೊಬ್ಬರೂ ಮಾಡುವ ಕರ್ಮಕ್ಕೆ ಅವರ ಕರ್ಮಕ್ಕನುಸಾರವಾಗಿ ಫಲ ದೊರೆಯುತ್ತದೆ. ಭತ್ತ ಬಿತ್ತಿದರೆ, ಭತ್ತ ಬೆಳೆಯುತ್ತದೆ. ಬೇವಿನ ಬೀಜ ಬಿತ್ತಿದರೆ ಬೇವಿನ ಗಿಡ ಬೆಳೆಯುತ್ತದೆ. ಏನಾದರೂ ಕೆಟ್ಟ ಕೆಲಸ ಮಾಡಿ ಅದರಿಂದ ಕೆಟ್ಟ ಫಲವನ್ನು ಅನುಭವಿಸುವಾಗ ಸಂಕಟಪಡುವುದಕ್ಕಿಂತ ಮಾಡುವ ಕೆಲಸವನ್ನು ಒಳ್ಳೆಯದಾಗಿ ಫಲವನ್ನು ಅನುಭವಿಸಬೇಕು ನಾವು ಮಾಡುವ ಒಳ್ಳೆಯ ಕಾರ್ಯಗಳು ನಮ್ಮ ಒಳ್ಳೆಯ ವ್ಯಕ್ತಿತ್ವವನ್ನು ತೋರಿಸುತ್ತವೆ. ನಾವು ಮಾಡುವ ಕಾರ್ಯ ಸಮಾಜಕ್ಕೆ ಒಳ್ಳೆಯದಾಗಬೇಕು ಆದ್ದರಿಂದ ನಿರ್ಮಲ ಮನಸ್ಸಿನಿಂದ ಒಳ್ಳೆಯ ಕಾರ್ಯಗಳನ್ನು ಮಾಡಿ ನಮ್ಮ ಜನ್ಮವನ್ನು ಸಾರ್ಥಕಪಡಿಸಿಕೊಳ್ಳಬೇಕು. ನಾವು ಮಾಡುವ ಕೆಟ್ಟ ಕೆಲಸದಿಂದ ಕೆಟ್ಟ ಪರಿಣಾಮವನ್ನು ಅನುಭವಿಸಬೇಕಾಗುತ್ತದೆ. ನಾವು ಮತ್ತೊಬ್ಬರಿಗೆ ಕೆಟ್ಟದ್ದು ಮಾಡಿದರೆ ಬೇರೆ ಯಾವ ರೀತಿಯಿಂದಲಾದರೂ, ನಮಗೆ ಕೆಟ್ಟದ್ದೇ ಆಗುತ್ತದೆ. ಯಾವಾಗಲೂ ಪರದ್ರೋಹ ಕೆಟ್ಟದ್ದೇ.

ಆದ್ದರಿಂದ ಸದಾ ಒಳ್ಳೆಯ ರೀತಿಯಲ್ಲಿ ಜೀವನವನ್ನು ಸಾಗಿಸಬೇಕು. ಒಳ್ಳೆಯ ಕಾರ್ಯಗಳನ್ನು ಒಳ್ಳೆಯ ಯೋಚನೆಗಳನ್ನು ಮಾಡಿದರೆ ದೇವರು ಸಹ ಮೆಚ್ಚುತ್ತಾನೆ.

## 6. ಕೂಡಿಬಾಳಿದರೆ ಸ್ವರ್ಗ ಸುಖ.

ಗಾದೆ ವೇದಗಳಿಗೆ ಸಮಾನ , ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಈ ಮೇಲಿನ **ಕೂಡಿಬಾಳಿದರೆ ಸ್ವರ್ಗ ಸುಖ** ಎಂಬ ಗಾದೆಯು ಪ್ರಸಿದ್ಧವಾಗಿದೆ.

ವಸುದೈವ ಕುಟುಂಬಂ ಎಂಬ ಮಾತನ್ನು ನೆನೆದರೆ ಸಾಕು ಈ ಗಾದೆ ಅರ್ಥ ಪರಿಪೂರ್ಣವಾಗುತ್ತದೆ. ಮನುಷ್ಯ ಸಂಘಜೀವಿ. ಅವನು ಒಬ್ಬಂಟಿಯಾಗಿ ಬದುಕುವುದು ಬಲು ಕಷ್ಟ. ಆದ್ದರಿಂದ ಎಲ್ಲರ ಸಮೂಹದಲ್ಲಿ ಸುಖವಾಗಿ ಬಾಳುತ್ತಾನೆ. ಹನಿ ಹನಿ ಕೂಡಿ ಹಳ್ಳ ತೆನೆ ತೆನೆ ಕೂಡಿ ಬಳ್ಳ ಎನ್ನುವ ಹಾಗೆ ಕುಟುಂಬದ , ಸಮಾಜದ ಎಲ್ಲಾ ಜನರು ಒಟ್ಟಾಗಿ ಕೂಡಿ ಬಾಳಿದರೆ ಸ್ವರ್ಗ ಸುಖವನ್ನು ಅನುಭವಿಸಬಹುದು. ಸ್ವರ್ಗಸುಖ ಬೇರೆಲ್ಲೂ ಇಲ್ಲ ನಮ್ಮ ಹೊಂದಾಣಿಕೆಯಲ್ಲಿದೆ. ಒಗ್ಗಟ್ಟಿನಲ್ಲಿದೆ. ಸಮೂಹವಾಗಿ ಕೂಡಿ ಬಾಳುವುದರಲ್ಲಿದೆ.ಒಂದು ಕಾಡಿನಲ್ಲಿ ವಿವಿಧ ಜಾತಿಯ ಪ್ರಾಣಿಗಳು ಒಗ್ಗಟ್ಟಾಗಿದ್ದವು. ಅವುಗಳು ಒಗ್ಗಟ್ಟಾಗಿದ್ದಾಗ ಕಾಡು ಬಹು ಸುಂದರವಾಗಿ, ಹಚ್ಚಹಸುರಿನಿಂದ ಕಂಗೊಳಿಸುತ್ತಿತ್ತು. ಯಾವುದೋ ಕಾರಣದಿಂದ ಬೇರೆ ಬೇರೆಯಾಗಿ ದೂರ ದೂರವಾದವು.ಈ ಸಮಯವನ್ನು ನೋಡಿದ ಮನುಷ್ಯ ಕಾಡನ್ನು ಕಡಿಯಲು ಪ್ರಾರಂಭಿಸಿದನು. ಇದರಿಂದ ಪ್ರಾಣಿಗಳಿಗೆ ಆಹಾರದ ಕೊರತೆಯುಂಟಾಯಿತು.ಇದನ್ನು ಅರಿತ ಪ್ರಾಣಿಗಳು ನಾವು ಹೀಗೆ ಬೇರೆ ಬೇರೆಯಾಗಿದ್ದರೆ ಮುಂದೆ ನಮ್ಮ ಆಹಾರಕ್ಕೆ ಸಂಪೂರ್ಣ ಕುತ್ತು ಬರುವುದೆಂದು ತಿಳಿದು ಮತ್ತೆ ಎಲ್ಲವೂ ಒಂದಾಗಲು ಪ್ರಾರಂಭಿಸಿದವು.ಇದರಿಂದ ಮನುಷ್ಯ ಅವುಗಳಿಗೆ ಹೆದರಿ ಕಾಡಿನಿಂದ ಓಡಿಹೋದನು. ಮತ್ತೆ ಸ್ವಲ್ಪ ದಿನಕ್ಕೆ ಕಾಡು ಸಮೃದ್ಧವಾಯಿತು. ಪ್ರಾಣಿಗಳೆಲ್ಲವೂ ಮತ್ತೆ ಎಂದಿನಂತೆ ಸುಖವಾಗಿದ್ದವು.ಇದರಿಂದ ಎಲ್ಲರೂ ಒಟ್ಟಾಗಿ ಬಾಳಿದರೆ ಸುಖವಾಗಿ ಇರಬಹುದು ಎಂದು ತಿಳಿಯಿತು.ಆದ್ದರಿಂದ ನಾವೆಲ್ಲರೂ ಅವರಿವರು ಎನ್ನದೇ ಕೂಡಿ ಬಾಳಿದರೆ ಸ್ವರ್ಗ ಸುಖವನ್ನು ಕಾಣಬಹುದು ಎಂದು ಹೇಳಬಹುದು.

## 7. ಕಟ್ಟುವುದು ಕಠಿಣ; ಕೆಡಹುವುದು ಸುಲಭ.

ಗಾದೆ ವೇದಗಳಿಗೆ ಸಮಾನ , ಗಾದೆ ಹಿರಿಯರು ಹೇಳಿದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. **ಕಟ್ಟುವುದು ಕಠಿಣ; ಕೆಡಹುವುದು ಸುಲಭ** ಎಂಬ ಈ ಮೇಲಿನ ಗಾದೆಯು ಪ್ರಸಿದ್ಧವಾಗಿದೆ.

ಯಾವುದೇ ಕೆಲಸವನ್ನು ಸರಿಯಾಗಿ ಮಾಡಬೇಕಾದರೆ ಕಷ್ಟಪಡಬೇಕು. ಆದರೆ ಹಾಳು ಮಾಡಲು ಕಷ್ಟ ಪಡಬೇಕಾಗಿಯೂ ಇಲ್ಲ. "ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ" ಎಂಬ ಗಾದೆಯು ಇದೆ ಅರ್ಥವನ್ನು ಹೋಲುತ್ತದೆ. ಒಬ್ಬ ಕುಂಬಾರ ಮಡಕೆಗಳನ್ನು ಮಾಡಲು ಮಣ್ಣು ತಂದು ಅರಳನ್ನು ಬೇರ್ಪಡಿಸಿ ಮಣ್ಣನ್ನು ಹದಮಾಡಿ ಕಷ್ಟಪಟ್ಟು ಮಡಿಕೆಯನ್ನು ಮಾಡುತ್ತಾನೆ. ಆದರೆ ಆ ಮಡಿಕೆಯನ್ನು ಒಡೆಯಲು ಒಂದು ದೊಣ್ಣೆ ಪೆಟ್ಟು ಸಾಕು. ಯಾವುದೇ ಒಂದು ಉತ್ತಮ ಕೆಲಸ ಮಾಡುವುದು ತುಂಬಾ ಕಠಿಣ. ಆದರೆ ಅದೇ ಕೆಲಸವನ್ನು ಹಾಳು ಮಾಡುವುದು ಸುಲಭ. ಪ್ರಾಚೀನ ಭಾರತೀಯರು ಕಠಿಣ ಶ್ರಮವಹಿಸಿ ಭಾರತದ ಪ್ರಾಚೀನ ವಾಸ್ತುಶಿಲ್ಪಗಳನ್ನು ನಿರ್ಮಿಸಿದರು. ಆದರೆ ವಿದೇಶಿಯರು ಒಂದು ಕ್ಷಣಮಾತ್ರದಲ್ಲಿ ವಾಸ್ತುಶಿಲ್ಪಗಳನ್ನು ಕೆಡವಿ ಹಾಕಿದರು. ಹಾಗೆಯೇ ಮನುಷ್ಯ ತನ್ನ ಉತ್ತಮವಾದ ಜೀವನದ ಭವಿಷ್ಯವನ್ನು ,ವ್ಯಕ್ತಿತ್ವವನ್ನು ನಿರ್ಮಿಸಿಕೊಳ್ಳಲು ಜೀವನವೆಲ್ಲ ಕಷ್ಟಪಡಬೇಕು. ಆದರೆ ವ್ಯಕ್ತಿತ್ವ ಹಾಳು ಮಾಡಿಕೊಳ್ಳುವುದಕ್ಕೆ ಒಂದರಗಳಿಗೆ ಸಾಕು. ಒಂದು ಕೊಡ ಹಾಲು ಕೆಡಲು ತೊಟ್ಟು ಹುಳಿ ಸಾಕಲ್ಲವೇ? ಆದ್ದರಿಂದ ಮಾನವ ತನ್ನ ಘನತೆಯನ್ನರಿತು ಕಾರ್ಯನಿರ್ವಹಿಸಬೇಕು ಎಂಬುದನ್ನು ಪ್ರಸ್ತುತ ಗಾದೆಯು ತಿಳಿಸುತ್ತದೆ.

## 8. ಹೆತ್ತ ತಾಯಿ; ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು.

ಗಾದೆ ವೇದಗಳಿಗೆ ಸಮಾನ , ಗಾದೆ ಹಿರಿಯರು ಹೇಳಿದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. **ಹೆತ್ತ ತಾಯಿ; ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು** ಎಂಬ ಈ ಮೇಲಿನ ಗಾದೆಯು ಪ್ರಸಿದ್ಧವಾಗಿದೆ.

'ಜನನಿ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸೀ' ಇದು ವಾಲ್ಮೀಕಿ ರಾಮಾಯಣದಲ್ಲಿ ಬರುವ ಒಂದು ಮಾತು. ಇದರ ಅನುವಾದವೇ ಮೇಲಿನ ಹೇಳಿಕೆ. ಇದರಲ್ಲಿ ತಾಯಿ ಮತ್ತು ನಾಡಿನ ಮಹತ್ವ ಅಡಗಿದೆ. ಹೆತ್ತ ತಾಯಿ ಹೊತ್ತ ನಾಡು ಎರಡು ಒಂದೇ. ನಮ್ಮನ್ನು ಹೆತ್ತು ಹೊತ್ತು ಸಾಕಿ ಸಲುಹಿದ ತಾಯಿಯ ಮಡಿಲು ಸ್ವರ್ಗಕ್ಕಿಂತಲೂ ಮಿಗಿಲಾದ ಸುಖವನ್ನು ನೀಡುತ್ತದೆ ಎನ್ನುವುದು ಅನುಭವಿಗಳ ಹೇಳಿಕೆ. ಅಂತೆಯೇ ಹೊತ್ತನಾಡು ನಮ್ಮನ್ನು ಜೀವನ ಪೂರ್ತಿ ತನ್ನ ಮಡಿಲಲ್ಲಿಟ್ಟು ಪೋಷಿಸುತ್ತದೆ. ನಮ್ಮ ಜೀವನಕ್ಕೆ ಅಗತ್ಯವಾದಂತಹ ಅನ್ನ, ನೀರು, ಬಟ್ಟೆ, ವಸತಿ, ಹಾಗೂ ಇನ್ನಿತರ ಎಲ್ಲಾ ಅವಶ್ಯಕತೆಗಳನ್ನು ಪೂರೈಸುವಂತಹ ಜನ್ಮ ಭೂಮಿಯನ್ನು ತಾಯಿಗೆ ಹೋಲಿಸಿರುವುದು ಶ್ರೇಷ್ಠವಾಗಿದೆ.

ಮಕ್ಕಳ ಪಾಲನೆಗಾಗಿ ತಾಯಿ ತನ್ನ ಸುಖವನ್ನೆಲ್ಲ ಮರೆತು ಆಹಾರ ನಿದ್ರೆಗಳನ್ನು ತೊರೆದು ಮಗುವಿನ ಲಾಲನೆ ಪೋಷಣೆಗಳಲ್ಲಿಯೇ ಸುಖವನ್ನು ಕಾಣುತ್ತಾಳೆ. ತಾಯಿಯಂತೆಯೇ ನಾವು ಹುಟ್ಟಿದ ನಾಡು ಕೂಡ. ಆ ನೆಲದಲ್ಲಿ ಆಡುತ್ತೇವೆ, ಅಗೆಯುತ್ತೇವೆ. ಬೆಳೆಯನ್ನು ಬೆಳೆಯುತ್ತೇವೆ, ಬೆಳೆದುದನ್ನು ತಿಂದು ಬದುಕುತ್ತೇವೆ. ತಾಯಿಯಂತೆ ನಾಡು ನಮ್ಮನ್ನು ಪೋಷಿಸುತ್ತದೆ. ಅದ್ದರಿಂದ ಜನ್ಮಭೂಮಿಯನ್ನು ಮರೆತವರು ತಾಯಿಯನ್ನು ಮರೆತಂತೆಯೇ ಸರಿ. ಆದುದರಿಂದ ಹೆತ್ತತಾಯಿ ಹೊತ್ತನಾಡಿನ ಋಣವನ್ನು ಮರೆಯದೇ ಅವರ ಹಿರಿಮೆಯನ್ನು ಎತ್ತಿಹಿಡಿಯಬೇಕಾದದ್ದು ಪ್ರತಿಯೊಬ್ಬನ ಆದ್ಯಕರ್ತವ್ಯವಾಗಿದೆ ಎಂಬುದನ್ನು ಈ ಗಾದೆ ಮಾತು ಅರ್ಥೈಸುತ್ತದೆ.

## 9. ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ

ಗಾದೆ ವೇದಕ್ಕೆ ಸಮಾನ , ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ. ಗಾದೆ ಹಿರಿಯರು ಹೇಳಿದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. **ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ** ಎಂಬ ಈ ಮೇಲಿನ ಗಾದೆಯು ಪ್ರಸಿದ್ಧವಾಗಿದೆ.

ಸತ್ಯ ಸದಾ ಜೀವಂತವಾದುದು; ಸುಳ್ಳು ಎಂದು ಸುಖವನ್ನು ಕೊಡಲಾರದು ಎನ್ನುವುದು ಈ ಗಾದೆಯ ಅರ್ಥ. ಸತ್ಯ ಶಾಶ್ವತವಾದದ್ದು ಆ ದೃಷ್ಟಿಯಿಂದಲೆ ನಮ್ಮ ರಾಷ್ಟ್ರೀಯ ಲಾಂಛನದಲ್ಲಿ(ಅಶೋಕ ಚಕ್ರ)'ಸತ್ಯಮೇವ ಜಯತೇ'ಎಂಬ ಬರಹ ಕಲ್ಪಾಂತರಸ್ಥಾಯಿಯಾಗಿ ರಾರಾಜಿಸುತ್ತದೆ. ' ಸತ್ಯಕ್ಕೆ ಜಯ ' ಸತ್ಯವಂತರಿಗೆ ಎಂದಿದ್ದರೂ ಜಯವಿದ್ದೇ ಇದೆ ಎಂದು ಎಲ್ಲಾ ಧರ್ಮಗಳಿಂದ ತಿಳಿದು ಬಂದಿದೆ. ಸತ್ಯ ಹರಿಶ್ಚಂದ್ರ ಜೀವನವೆಲ್ಲ ಸತ್ಯಕ್ಕಾಗಿ ಹೋರಾಡಿ ಶಾಶ್ವತವಾದ ಕೀರ್ತಿಯನ್ನು ಪಡೆದನು. ಗಾಂಧೀಜಿ, ಸ್ವಾಮಿ ವಿವೇಕಾನಂದ ಮೊದಲಾದ ಮಹಾತ್ಮರು ಸತ್ಯ ಜೀವನವನ್ನು ನಡೆಸಿದರು. ಸತ್ಯವನ್ನೆ ನುಡಿಯಿರಿ, ಪ್ರಿಯವಾದದ್ದನ್ನೆ ಹೇಳಿರಿ ಎಂಬ ನೀತಿವಾಕ್ಯವು ಸತ್ಯ ನಿತ್ಯವೆಂಬುದನ್ನು ಸಾರುತ್ತದೆ.

ಸುಳ್ಳಿಗೆ ಸುಖವಿಲ್ಲ ,ಸುಳ್ಳಿನ ಒಡನಾಟ ಕೆಸರೊಳಗೆ ಮುಳ್ಳು ತುಳಿದಂತೆ. ಸುಳ್ಳು ಹೇಳಿ ಆ ಸುಳ್ಳು ಬಯಲಾದಾಗ ಮನುಷ್ಯ ತನ್ನ ಗೌರವ ಅಂತಸ್ತು ,

ನಂಬಿಕೆ ಕಳೆದು ಕೊಳ್ಳುವುದರ ಜೊತೆಗೆ ಮಾನಸಿಕವಾಗಿ ನೆಮ್ಮದಿಯನ್ನು ಹಾಳುಮಾಡಿಕೊಳ್ಳ ಬೇಕಾಗುತ್ತದೆ. ಸುಳ್ಳು ಒಂದು ಬಲೆ ಇದ್ದಹಾಗೆ ಅದರಲ್ಲಿ ಸಿಕ್ಕಿಬಿದ್ದರೆ ಹೊರಬರುವುದು ಕಷ್ಟ. ಆದುದರಿಂದ ಸುಳ್ಳಿನ ದಾಸರಾಗಿ ಜೀವನವನ್ನು ಹಾಳುಮಾಡಿಕೊಳ್ಳುವ ಬದಲು ಸತ್ಯವೆಂಬ ಬೆಳಕಿನ ಹಾದಿಯಲ್ಲಿ ನಡೆದು ಜೀವನ ಸಾರ್ಥಕಗೊಳಿಸಿಕೊಳ್ಳ ಬೇಕು.ಸತ್ಯವೇ ಬೆಳಕು , ಸುಳ್ಳೇ ಕತ್ತಲು, ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ ಎಂಬ ಮಾತನ್ನು ಎಂದಿಗೂ ಯಾರು ಮರೆಯಬಾರದು.

## 10. ಆಳಾಗಬಲ್ಲವನು; ಅರಸಾಗಬಲ್ಲನು.

ಗಾದೆ ವೇದಗಳಿಗೆ ಸಮಾನ , ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಈ ಮೇಲಿನ "**ಆಳಾಗಬಲ್ಲವನು; ಅರಸಾಗಬಲ್ಲನು** " ಎಂಬ ಗಾದೆಯು ಪ್ರಸಿದ್ಧವಾಗಿದೆ.

ಆಳಾಗಿ ದುಡಿದರೆ ಅರಸನಂತೆ ಉಣ್ಣಬಹುದು. ಹಾಗೆಯೇ ಕಾರ್ಮಿಕನಾಗಿ ದುಡಿದವನು ಮುಂದೊಂದು ದಿನ ಯಜಮಾನನಾಗಬಹುದು. ಕೈ ಕೆಸರಾದರೆ ಬಾಯಿ ಮೊಸರು ಎಂಬ ಗಾದೆ ಮಾತಿನಂತೆ ಆಳಾಗಿ ದುಡಿದರೆ ಮುಂದೊಂದು ದಿನ ಹಾಯಾಗಿ ಕುಳಿತು ಜೀವನ ಸಾಗಿಸಬಹುದು. ಆದ್ದರಿಂದ ಕಾಯಕದ ಘನತೆಯನ್ನು ಅರಿತು ಕಾರ್ಯ ನಿರ್ವಹಿಸಬೇಕು. ಯಾರೇ ಆಗಲಿ ಏಕಾ ಏಕಿ ಶ್ರೀಮಂತನಾಗಲು ಸಾಧ್ಯವಿಲ್ಲ. ಕಷ್ಟಪಟ್ಟು ದುಡಿದರೆ ಮಾತ್ರ ಉನ್ನತ ಸ್ಥಾನಕ್ಕೆ ಏರಬಲ್ಲನು. ಸಾಮಾನ್ಯ ಮನುಷ್ಯ ತನ್ನ ದುಡಿಮೆಯ ಬಲದಿಂದ ಎತ್ತರಕ್ಕೆ ಏರಿರುವ ಉದಾಹರಣೆಗಳು ಸಾಕಷ್ಟಿವೆ. ಕಾಯಕವೇ ಕೈಲಾಸ ಎಂಬ ವಚನಕಾರರ ಮಾತು ನಿತ್ಯ ಸ್ಮರಿಸುವಂತಹದ್ದು. ಆದ್ದರಿಂದ ಮೊದಲು ನಾವು ಆಳಾಗಿ ದುಡಿಯಬೇಕು ಅನಂತರ ಅರಸನಂತೆ ಸುಖವಾಗಿ ಬಾಳಬಹುದು ಎಂಬುದನ್ನು ಈ ಗಾದೆಯು ತಿಳಿಸುತ್ತದೆ.

## 11. ಮಾತೇ ಮುತ್ತು ; ಮಾತೇ ಮೃತ್ಯು

ಗಾದೆ ವೇದಗಳಿಗೆ ಸಮಾನ , ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಅಂತೆಯೇ " **ಮಾತೇ ಮುತ್ತು ; ಮಾತೇ ಮೃತ್ಯು** " ಎಂಬ ಗಾದೆಯು ಪ್ರಸಿದ್ಧವಾಗಿದೆ.

ಈ ಗಾದೆಯು ನಿಮ್ಮ ಮಾತಿನ ಮಹತ್ವವನ್ನು ತಿಳಿಸುತ್ತದೆ. ಮಾತು ನಮ್ಮ ವ್ಯಕ್ತಿತ್ವದ ಕನ್ನಡಿಯಾಗಿದೆ. ನಮ್ಮ ಬೇಕು ಬೇಡಗಳನ್ನು ಅಭಿಪ್ರಾಯಗಳನ್ನು ಬೇರೆಯವರಿಗೆ ಮಾತುಗಳ ಮೂಲಕ ತಿಳಿಸುತ್ತೇವೆ ಹಾಗೇ ಅವರಿಂದ ತಿಳಿಯುತ್ತೇವೆ. "ಮಾತು ಬಲ್ಲವ ಮಾಣಿಕ್ಯ ತಂದ, ಮಾತರಿಯದವ ಜಗಳ ತಂದ, ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು, ಮಾತು ಬಲ್ಲವನಿಗೆ ಜಗಳವಿಲ್ಲ" ಎಂಬ ಗಾದೆ ಮಾತುಗಳು ಕೂಡ ಮಾತಿನ ಮಹತ್ವವನ್ನು ತಿಳಿಸುತ್ತದೆ. ಅಂತೆಯೇ ಬಸವಣ್ಣನವರು "ನುಡಿದರೆ ಮುತ್ತಿನ ಹಾರದಂತಿರಬೇಕು________ಲಿಂಗಮೆಚ್ಚಿ ಅಹುದಹುದೆನಬೇಕು ಎಂದು ಹೇಳಿದ್ದಾರೆ. ಹಾಗೆಯೇ ಪಂಪ ಕವಿ "ಹಿತ ಮಿತ ಮೃದು ವಚನಂ" ಎಂದು ಹೇಳಿರುವುದನ್ನು ಸ್ಮರಿಸಬಹುದು.

ಮಾತು ಹಿತ-ಮಿತವಾಗಿ ಕೇಳುಗರಿಗೆ ಮಧುರವಾಗಿ ಮುತ್ತಿನಂತಿರಬೇಕು. ನಯವಾದ ವಿನಯ ಪೂರ್ವಕವಾದ ಮಾತು ಕೇಳುಗರಿಗೆ ಸಂತೋಷವನ್ನುಂಟು ಮಾಡುತ್ತದೆ. ಒರಟಾದ ಮಾತು ಅಸಂತೋಷವನ್ನುಂಟು ಮಾಡುತ್ತದೆ. ಹಾಗೆ ಜಗಳಕ್ಕೆ ಕಾರಣವಾಗಬಹುದು. ಕಠೋರವಾದ ಮಾತುಗಳು ಇತರರಿಗೆ ನೋವನ್ನು ತರಬಲ್ಲವು. ಆದ್ದರಿಂದ ಮಾತು ಮುತ್ತಿನಂತಿರಬೇಕು. ಒಳ್ಳೆಯ ಮಾತು ಸ್ನೇಹ ಸಂಬಂಧವನ್ನು ಬೆಳೆಸಿದರೆ ಕೆಟ್ಟಮಾತು ಒಡಕನ್ನು ಹುಟ್ಟುಹಾಕುತ್ತದೆ. ಅದಕ್ಕಾಗಿಯೇ ಸರ್ವಜ್ಞ ಕವಿಯು 'ಮಾತಿನಿಂ ನಗೆನುಡಿಯು ಮಾತಿನಿಂ ಹಗೆ ಹತಿಯು ಮಾತಿನಿಂ ಸರ್ವಸಂಪದವು ಲೋಕಕ್ಕೆ ಮಾತೆ ಮಾಣಿಕವು" ಎಂದಿದ್ದಾನೆ. ಅದುದರಿಂದ ಮಾತು ಮೃದುವಾಗಿದ್ದರೆ ಮುತ್ತಿನಂತ ಮಾತು ಎಂದು ಮಾತು ಒರಟಾಗಿದ್ದರೆ ಮೃತ್ಯುವನ್ನು ತರಬಲ್ಲದು ಎಂದು ಎಚ್ಚರಿಯಿಂದ ಮಾತನಾಡಬೇಕು ಎಂಬ ಅರ್ಥವನ್ನು ಸ್ಪುರಿಸುತ್ತದೆ.

## 12. ಚಿಂತೆಯೇ ಮುಪ್ಪು – ಸಂತೋಷವೇ ಯೌವನ

ಗಾದೆ ವೇದಕ್ಕೆ ಸಮಾನ , ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ. ಗಾದೆ ಹಿರಿಯರು ಹೇಳಿದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಈ ಮೇಲಿನ **ಚಿಂತೆಯೇ ಮುಪ್ಪು – ಸಂತೋಷವೇ ಯೌವನ** ಎಂಬ ಗಾದೆಯು ಪ್ರಸಿದ್ಧವಾಗಿದೆ.

'ಚಿಂತೆಯು ಆಯುಷ್ಯವನ್ನು ತಿನ್ನುತ್ತದೆ ' ಎನ್ನುವ ಮಾತಿನಂತೆ, ಮಾನಸಿಕ ಚಿಂತೆ ಮನುಷ್ಯರಿಗೆ ಅಕಾಲದ ಮುಪ್ಪನ್ನು ತರುತ್ತದೆ. ಚಿಂತೆಗೂ ಚಿತೆಗೂ ವ್ಯತ್ಯಾಸ ಸೊನ್ನೆ. ಆದರೆ ಚಿಂತೆ ಬದುಕಿದವರನ್ನು ಸುಟ್ಟರೆ, ಚಿತೆ ನಿರ್ಜೀವ ವಸ್ತುವನ್ನು ಸುಡುತ್ತದೆ. ಚಿಂತೆಯು ನಮ್ಮ ಮನಸ್ಸಿನ ಸಂತೋಷವನ್ನು ಹಾಳುಮಾಡುತ್ತದೆ. ಮನುಷ್ಯನನ್ನು ನಿರುತ್ಸಾಹಿಯಾಗಿ ಮಾಡಿ, ದುಡಿಯುವ ಶಕ್ತಿ, ಚೈತನ್ಯವನ್ನು ಕುಗ್ಗಿಸುತ್ತದೆ. ಚಿಂತಿಸುತ್ತಾ ಹೋದರೆ ಅದು ನಮ್ಮ ಆಯುಷ್ಯವನ್ನು ತಿಂದು ಅಕಾಲ

ವೃದ್ಧಾಪ್ಯವನ್ನುಂಟುಮಾಡಿ ಬದುಕನ್ನು ನಶ್ವರಗೊಳಿಸುತ್ತದೆ. ಆದ್ದರಿಂದ ಚಿಂತಿಸುವುದನ್ನು ಬಿಟ್ಟು ಬದುಕಿರುವಷ್ಟು ಕಾಲ ಸುಖಃ ಸಂತೋಷದಿಂದ ಜೀವನವನ್ನು ಕಳೆಯಬೇಕು. ಮನಸ್ಸಿನ ಸಂತೋಷ ವೃದ್ಧನಲ್ಲೂ ಯೌವನವನ್ನು ಮೂಡಿಸುತ್ತದೆ.ಶಕ್ತಿಯನ್ನು ತುಂಬುತ್ತದೆ.

ಯಾರ ಬದುಕಿನಲ್ಲಿ ಸಂತೋಷ ಇರುವುದೋ ಅವರು ಆರೋಗ್ಯದಿಂದ ಬಾಳುತ್ತಾರೆ. ಬದುಕಬೇಕು, ಸಾಧಿಸಬೇಕು, ಗೆಲ್ಲಬೇಕು ಎಂಬ ಛಲವನ್ನು ಹೊಂದಿರುತ್ತಾರೆ. ಆದ್ದರಿಂದ ನಾವು ನಗುನಗುತಾ ಸಂತೋಷದಿಂದ ಬಾಳಬೇಕು. ಚಿಂತೆಯಿಂದ ದೂರ ಇರಬೇಕು.ಸಂತೋಷವು ಯೌವನಾವಸ್ಥೆಯ ಸಾಮರ್ಥ್ಯವನ್ನು ತಂದು ಕೊಡುತ್ತದೆ.

## 13. ಅತಿಯಾಸೆ ಗತಿ ಗೇಡು

ಗಾದೆ ವೇದಗಳಿಗೆ ಸಮಾನ , ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಈ ಮೇಲಿನ **ಅತಿಯಾಸೆ ಗತಿ ಗೇಡು** ಎಂಬ ಗಾದೆಯು ಪ್ರಸಿದ್ಧವಾಗಿದೆ.

ಮನುಷ್ಯನಿಗೆ ಆಸೆ ಇರಬೇಕು. ಆಸೆ ಮನುಷ್ಯನ ಸಹಜ ಪ್ರವೃತ್ತಿ. ಆಸೆ ಇಲ್ಲದವ ಬದುಕಲಾರ. ಅಸೆಯೇ ಉತ್ಸಾಹದ ಜನನಿ. ಅದು ಜೀವನದ ಸಂಚಾಲಕಶಕ್ತಿ. ಆಸೆಯ ಆಸರೆ ಇಲ್ಲದಿದ್ದರೆ ಮನುಷ್ಯ ಕಾಡುಪ್ರಾಣಿಯಂತೆ ಜೀವಿಸುತ್ತಿದ್ದ. ಆದರೆ ಆಸೆಯು ಹಿತಮಿತವಾಗಿರಬೇಕು. ಅತಿಯಾದ ಆಸೆ ದುಃಖಕ್ಕೆ ಮೂಲ ಎಂದು ಬುದ್ಧ ಹೇಳಿದ್ದಾನೆ. ಅತಿಯಾದರೆ ಅಮೃತವೂ ಕೂಡ ವಿಷವಾಗುತ್ತದೆ. ಅತಿಯಾಸೆಯಿಂದ ಮನುಷ್ಯ

ನೆಮ್ಮದಿಯನ್ನು ಕಳೆದುಕೊಳ್ಳಬೇಕಾಗುತ್ತದೆ. ಪ್ರತಿದಿನ ಚಿನ್ನದ ಮೊಟ್ಟೆ ಇಡುತ್ತಿದ್ದ ಕೋಳಿಯನ್ನು ಪಡೆದ ರೈತನೊಬ್ಬನು ಒಂದೇ ಬಾರಿಗೆ ಶ್ರೀಮಂತನಾಗಬೇಕೆಂಬ ಅತಿ ಆಸೆಯಿಂದ ಕೋಳಿಯ ಹೊಟ್ಟೆಯನ್ನು ಸೀಳಿ ಒಂದೂ ಸಿಗದೆ ನಿರಾಶೆಯಾದನು.

ಮುಟ್ಟಿದೆಲ್ಲಾ ಚಿನ್ನವಾಗಬೇಕೆಂದು ವರವನ್ನು ಪಡೆದ ಮೈದಾಸ ತನ್ನ ಮಗಳನ್ನು ಚಿನ್ನದ ಗೊಂಬೆಯನ್ನಾಗಿಸಿ ದುಃಖಪಡುತ್ತಾನೆ ಆಸೆಯೆಂಬುದು ಬಹಳ ಕೆಟ್ಟದ್ದು. ಮನುಷ್ಯನು ಮುಪ್ಪನಪ್ಪಿದರೂ ಆಸೆಯು ಬಿಡದು. ಹೀಗೆ ಅತಿ ಆಸೆ ಯಾರಿಗೂ ಎಂದಿಗೂ ಒಳ್ಳೆಯದಲ್ಲ. ಆದ್ದರಿಂದ ಅತಿ ಆಸೆ ಪಡಬಾರದು ಇಲ್ಲವಾದರೆ ಅತಿಆಸೆ ಗತಿಕೆಡಿಸುತ್ತದೆ.

## 14. ಊಟ ಬಲ್ಲವನಿಗೆ ರೋಗವಿಲ್ಲ ಮಾತು ಬಲ್ಲವನಿಗೆ ಜಗಳವಿಲ್ಲ

ಗಾದೆ ವೇದಗಳಿಗೆ ಸಮಾನ , ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಊಟ ಬಲ್ಲವನಿಗೆ ರೋಗವಿಲ್ಲ ಮಾತು ಬಲ್ಲವನಿಗೆ ಜಗಳವಿಲ್ಲ ಎಂಬ ಈ ಮೇಲಿನ ಗಾದೆಯು ಪ್ರಸಿದ್ಧವಾಗಿದೆ.
ಈ ಗಾದೆಯು ಊಟದ ಇತಿಮಿತಿಯನ್ನು ಮಾತಿನ ಮಹತ್ವವನ್ನು ತಿಳಿಸುತ್ತದೆ. ನಾವು ವೇಳೆಗೆ ಸರಿಯಾಗಿ ಹಿತ-ಮಿತವಾದ ಆಹಾರವನ್ನು ಸೇವಿಸುವುದರಿಂದ ಉತ್ತಮ ಆರೋಗ್ಯವನ್ನು ಪಡೆಯಬಹುದು. ಅದೇ ರೀತಿ ಮಾತು ಹಿತಮಿತವಾಗಿದ್ದರೆ ಎಲ್ಲರಿಗೂ ಹಿತವಾಗುತ್ತದೆ. ಬಿಟ್ಟಿ ಊಟ ಸಿಕ್ಕಾಗ ಗೋಣಿಚೀಲ ತುಂಬಿದಂತೆ ಊಟಮಾಡಿದರೆ ಅಜೀರ್ಣ ಉಂಟಾಗಿ ಆರೋಗ್ಯ ಹದಗೆಡುತ್ತದೆ. ಅದೇರೀತಿ ಮಾತು ಪುಕ್ಕಟೆಯೆಂದು ತಿಳಿದಂತೆ ನುಡಿದರೆ ಜಗಳಕ್ಕೆ ಕಾರಣವಾಗಬಹುದು. ಅಂತೆಯೇ ಮಾತೇ ಮಾಣಿಕ್ಯ ಮಾತೇ ಮೃತ್ಯು ಎಂಬ ಗಾದೆಯು ಪ್ರಚಲಿತದಲ್ಲಿರಬೇಕು. ಬಸವಣ್ಣನವರು ಹೇಳಿದಂತೆ ಮಾತು ನುಡಿದರೆ ಮುತ್ತಿನಹಾರದಂತಿರಬೇಕು. ಅದಕ್ಕಾಗಿ ಡಿ.ವಿ.ಜಿಯವರು ಹಿತವಿರಲಿ ವಚನದಲಿ ಎಂದು ಕಗ್ಗದಲ್ಲಿ ಹೇಳಿದ್ದಾರೆ.

ಒಟ್ಟನಲ್ಲಿ ಮಾತುಬಲ್ಲವ ಮಾಣಿಕ್ಯ ತಂದ ಮಾತರಿಯದವ ಜಗಳ ತಂದ ಎಂಬ ಗಾದೆ ಮಾತಿನಂತೆ ಊಟಬಲ್ಲವನಿಗೆ ರೋಗವಿಲ್ಲ ಮಾತು ಬಲ್ಲವನಿಗೆ ಜಗಳವಿಲ್ಲ ಎಂಬ ಗಾದೆಯು ವ್ಯಕ್ತಿ ಮಿತಹಾರಿ ಯಾಗಿರಬೇಕೆಂಬುದನ್ನು. ಮತ್ತು ಅವನ ಮಾತು ಮಿತ ಹಿತವಾಗಿರಬೇಕೆಮದು ಸಾದರಪಡಿಸುತ್ತದೆ.

## 15.ಕೋಪದಲ್ಲಿ ಕೊಯ್ದ ಮೂಗು ಮತ್ತೆ ಬಂದಿತೇ

ಗಾದೆ ವೇದಗಳಿಗೆ ಸಮಾನ , ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಗಾದೆಗಳು ಜೀವನದನುಭವಕ್ಕೆ ಹಿಡಿದ ಕನ್ನಡಿಯಾಗಿವೆ. ಆದುದರಿಂದ ಗಾದೆಗಳು ಸತ್ಯಕ್ಕೆ ಬಹಳ ಹತ್ತಿರವಾಗಿವೆ. ಇಂತಹ ಗಾದೆಗಳಲ್ಲಿ ಒಂದಾದ **ಕೋಪದಲ್ಲಿ ಕೊಯ್ದ ಮೂಗು ಮತ್ತೆ ಬಂದಿತೇ** ಎಂಬುದು ನೀತಿ ಬೋಧಕವಾಗಿದೆ.

ಕೋಪವೆಂಬುದು ಅನರ್ಥಕಾರಿ ಸಾಧನವಾಗಿದೆ. ಕೋಪಕ್ಕೆ ಒಳಗಾದ ಮನುಷ್ಯನು ಏನು ಮಾಡುತ್ತಿದ್ದೇನೆ ಎಂಬುದನ್ನು ಮರೆತಿರುತ್ತಾನೆ. ಕ್ರೋಧ ಬುದ್ಧಿಯನ್ನು

ತಿನ್ನುತ್ತದೆ ಅನ್ನುವ ಹಾಗೆ ಅತಿಯಾದ ಕೋಪ ಮನುಷ್ಯನ ಬುದ್ಧಿಯನ್ನು ಕೆಡಿಸುತ್ತದೆ.

ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ 'ಕೋಪದಿಂದ ಬುದ್ಧಿ ನಾಶ' ಎಂದಿದ್ದಾನೆ. ಅದೇ ರೀತಿ ಬಸವಣ್ಣ 'ತನುವಿನ ಕೋಪ ತನ್ನ ಹಿರಿತನದ ಕೇಡು, ಮನದ ಕೋಪ ತನ್ನ ಅರಿವಿನ ಕೇಡು' ಎಂದಿದ್ದಾರೆ. ಕೋಪ ಬಂದಾಗ ಆಗುವ ಅನಾವುತಗಳು ಅನೇಕ ಕೋಪದಲ್ಲಿ ಮೂಗನ್ನು ಕೊಯ್ದು ಕೊಂಡರೆ ಮತ್ತೇ ಬೇಕೆಂದರೂ ಪಡೆಯಲು ಸಾಧ್ಯವಿಲ್ಲ.ಇದಕ್ಕೆ ಮುಂಗುಸಿ ನಾರಿಯ ಕಥೆಯೆ ಸಾಕ್ಷಿ ಆದ್ದರಿಂದ ಶಿವಶರಣೆ ಅಕ್ಕಮಹಾದೇವಿ ಹೇಳುವಂತೆ 'ಕೋಪ ತಾಳದೆ ಸಮಧಾನಿಯಾಗಿರ ಬೇಕು' ಇಲ್ಲವಾದರೆ ಕೋಪದ ಕೈಯಲ್ಲಿ ಬುದ್ಧಿಯನ್ನು ಕೊಟ್ಟರೆ ಮಂಗನಿಗೆ ಹೆಂಡ ಕುಡಿಸಿದಂತಾಗುತ್ತದೆ.

ಒಟ್ಟಿನಲ್ಲಿ ಗೀತೆಯು ಹೇಳುವಂತೆ ಕೋಪದಿಂದ ಬುದ್ಧಿನಾಶ,ಬುದ್ಧಿನಾಶವಾದ ಮನುಷ್ಯನು ಸಂಪೂರ್ಣವಾಗಿ ನಾಶವಾಗುತ್ತಾನೆ. ಆದ್ದರಿಂದ ಕೋಪ ಮಾಡಿಕೊಳ್ಳದೆ ಸಮಧಾನಿಯಾಗಿರ ಬೇಕು.

### 16.ಉಪ್ಪಿಗಿಂತ ರುಚಿಯಿಲ್ಲ: ತಾಯಿಗಿಂತ ಬಂಧುವಿಲ್ಲ.

ಗಾದೆ ವೇದಗಳಿಗೆ ಸಮಾನ , ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಗಾದೆಗಳು ಜೀವನದನುಭವಕ್ಕೆ ಹಿಡಿದ ಕನ್ನಡಿಯಾಗಿವೆ. ಆದುದರಿಂದ ಗಾದೆಗಳು ಸತ್ಯಕ್ಕೆ ಬಹಳ ಹತ್ತಿರವಾಗಿವೆ. **ಉಪ್ಪಿಗಿಂತ ರುಚಿಯಿಲ್ಲ; ತಾಯಿಗಿಂತ ಬಂಧುವಿಲ್ಲ** ಎಂಬ ಈ ಮೇಲಿನ ಗಾದೆಯು ಪ್ರಸಿದ್ಧವಾಗಿದೆ.

ಉಪ್ಪಿಲ್ಲದಿದ್ದರೆ ಯಾವುದೇ ಊಟವು ರುಚಿಸದು.ಉಪ್ಪು ಎಲ್ಲಾ ಪಾಕ ವೈವಿದ್ಯಗಳಿಗೂ ಪ್ರಧಾನ. ಅದೇ ರೀತಿ ತಾಯಿಯು ಕೂಡ. ಉಪ್ಪಿಲ್ಲದಿದ್ದರೆ ಊಟ ಹೇಗೆ ರುಚಿಸುವುದಿಲ್ಲವೋ, ಅದೇ ರೀತಿ ತಾಯಿ ಇರದಿದ್ದರೆ ಜೀವನವೇ ಅಂಧಕಾರವಾಗಿರುವುದು. ತಾಯಿ ನಮ್ಮನ್ನು ಕತ್ತಲಿನಿಂದ ಬೆಳಕಿನೆಡೆಗೆ ನಡೆಸುವ ಗುರುವಿದ್ದಮತೆ, ಅಡುಗೆಗೆ ಬಲಸುವ ಸಾಸಿವೆ,ಜೀರಿಗೆ, ಮೆಂತ್ಯ,ಕೊತ್ತಂಬರಿ,ಮೆಣಸಿನಕಾಯಿ ಇತ್ಯಾದಿ ವಸ್ತುಗಳು ಬೇರೆ ಬೇರೆ ರುಚಿಯನ್ನು ಕೊಡುವದಿಲ್ಲ. ಹಾಗೆಯೇ ಮನೆಯಲ್ಲಿ ತಂದೆ, ಅಣ್ಣ, ಅಕ್ಕ, ತಂಗಿ, ಮಾವ, ಅತ್ತೆ ಮುಂತಾಗಿ ನಾನಾ ರೀತಿಯ ಬಂಧುಗಳಿದ್ದರೂ ತಾಯಿಯಷ್ಟು ಮಿಗಿಲಾದ ಬಂಧುಗಳಿಲ್ಲ. ಆದ್ದರಿಂದಲೇ ಜನಪದ ತ್ರಿಪದಿಯಲ್ಲಿ ಗರತಿ "ಯಾರೂ ಆದರೂ ಹೆತ್ತ ತಾಯಂತೆ ಆದಾರೋ ಸಾವಿರ ಸೌದೆಒಲೆಯಲ್ಲಿ ಉರಿದಾರೂ ದೀವಿಗೆಯಂತೆ ಬೆಳಕುಂಟೆ" ಎಂದು ತಾಯಿ ಮಹಿಮೆಯನ್ನು ಹಾಡಿ ಹೊಗಳಿದ್ದಾಳೆ.

ಹೆತ್ತತಾಯಿ ದೇವರು ನಮಗೆ ನೀಡಿರುವ ಅಮೂಲ್ಯ ಆಸ್ತಿ. ಆ ಆಸ್ತಿಯನ್ನು ಜೋಪಾನವಾಗಿ ಕಾಪಾಡಬೇಕಾದದ್ದು, ನಮ್ಮೆಲ್ಲರ ಕರ್ತವ್ಯವಾಗಿದೆ.

ಎಂಥಹ ಕಷ್ಟ ಬಂದರೂ ಇತರ ಬಂಧುಗಳು ನಮ್ಮಿಂದ ದೂರವಾದರೂ ನಮ್ಮನ್ನು ಅವಳು ಕೈಬಿಡಳು. ಆದ್ದರಿಂದ "ತಾಯಿಗಿಂತ ಬಂಧುವಿಲ್ಲ". ಎಂಬ ಮಾತು ಅಕ್ಷರಶಃ ಅರ್ಥವತ್ತಾದುದಾಗಿದೆ.

### 17. ಶಕ್ತಿಗಿಂತ ಯುಕ್ತಿ ಮೇಲು

ಗಾದೆ ವೇದಗಳಿಗೆ ಸಮಾನ , ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಗಾದೆಗಳು ಜೀವನದನುಭವಕ್ಕೆ ಹಿಡಿದ ಕನ್ನಡಿಯಾಗಿವೆ. ಆದುದರಿಂದ ಗಾದೆಗಳು ಸತ್ಯಕ್ಕೆ ಬಹಳ ಹತ್ತಿರವಾಗಿವೆ. **ಶಕ್ತಿಗಿಂತ ಯುಕ್ತಿ ಮೇಲು** ಎಂಬ ಈ ಮೇಲಿನ ಗಾದೆಯು ಪ್ರಸಿದ್ಧವಾಗಿದೆ.

"ಚತುರನ ಯುಕ್ತಿಯು ಸಾವಿರಾರು ತೋಳ್ಬಲವನ್ನು ಸೋಲಿಸಬಲ್ಲದೆಂದು" ಸುಭಾಷಿತವೊಂದು ಹೇಳಿದೆ. ಅಂತೆಯೇ ಶಕ್ತಿಯಿಂದ ಸಾಧ್ಯವಾಗದದ್ದನ್ನು ಯುಕ್ತಿಯಿಂದ ಸಾಧಿಸುವ ನಿಟ್ಟಿನಲ್ಲಿ "ಶಕ್ತಿಗಿಂತ ಯುಕ್ತಿ ಮೇಲು" ಎಂಬ ಗಾದೆ ಸೃಷ್ಟಗೊಂಡಿದೆ.

ಶಕ್ತಿಯಿಂದ ಸಾಧಿಸಲಾಗದ ಕೆಲಸವನ್ನು ಯುಕ್ತಿಯಿಂದ ಸಾಧಿಸಬೇಕು. ಯುಕ್ತಿಗೆ ಎಲ್ಲಾ ಕಡೆಯೂ ಗೆಲುವಿರುತ್ತದೆ. ಸಂಧರ್ಭೋಚಿತ ಉಪಾಯದಿಂದ ಎಂತಹ ಶತ್ರುವನ್ನಾದರೂ ಸೋಲಿಸಬಹುದು. ಉದಾ: ಧೀರ್ಘಕರ್ಣನೆಂಬ ಮೊಲ ಶಕ್ತಿಯಿಂದ ಸಾಧಿಸಲಾಗದ ಕೆಲಸವನ್ನು ಯುಕ್ತಿಯಿಂದ ಸಿಂಹವು ಬಾಯಿಗೆ ಬೀಳುವಂತೆ ಮಾಡಿ ತನ್ನ ಮಿತ್ರರನ್ನೆಲ್ಲರನ್ನು ರಕ್ಷಿಸಿತು. ಬೀರಬಲ್ಲನು ಅಕ್ಬರನಿಗೆ, ತೆನಾಲಿ ರಾಮಕೃಷ್ಣನು ಕೃಷ್ಣದೇವರಾಯನಿಗೆ ಪ್ರಿಯವಾದದ್ದು ಅವರ ಯುಕ್ತಿಯಿಂದ ಎಂದು ಹೇಳಬಹುದು. ಆದ್ದರಿಂದ ಶಕ್ತಿಗಿಂತ ಯುಕ್ತಿಯೇ ಮೇಲು ಎಂದು ಹೇಳಬಹುದು.

### 18. ಬೆಕ್ಕಿಗೆ ಆಟ ಇಲಿಗೆ ಪ್ರಾಣಸಂಕಟ

ಗಾದೆ ವೇದಗಳಿಗೆ ಸಮಾನ , ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಗಾದೆಗಳು ಜೀವನದನುಭವಕ್ಕೆ ಹಿಡಿದ ಕನ್ನಡಿಯಾಗಿವೆ. ಆದುದರಿಂದ ಗಾದೆಗಳು ಸತ್ಯಕ್ಕೆ ಬಹಳ ಹತ್ತಿರವಾಗಿವೆ. **ಬೆಕ್ಕಿಗೆ ಆಟ ಇಲಿಗೆ ಪ್ರಾಣ ಸಂಕಟ** ಎಂಬ ಈ ಮೇಲಿನ ಗಾದೆಯು ಪ್ರಸಿದ್ಧವಾಗಿದೆ.
ಬಲಶಾಲಿಗಳು ಶ್ರೀಮಂತರ ಹುಡುಗಾಟ ದುರ್ಬಲರಿಗೆ, ಕೆಳವರ್ಗದವರಿಗೆ ಬಡವರಿಗೆ ಸಂಕಟವನ್ನು

ಉಂಟುಮಾಡುತ್ತದೆ ಎಂಬ ಅರ್ಥವನ್ನು ಈ ಗಾದೆ ನೀಡುತ್ತದೆ. ಇಲ್ಲಿ ಬೆಕ್ಕು ಹಾಗೂ ಇಲಿ ಎಂಬ ಪ್ರಾಣಿಗಳ ಹೆಸರನ್ನು ಬಳಸಿದ್ದರೂ, ಇವುಗಳ ಹಾಗೆ ವರ್ತಿಸುವ ಮನುಷ್ಯರಿಗೆ ಅನ್ವಯಿಸುತ್ತದೆ. ಬೆಕ್ಕು ಇಲಿಯನ್ನು ಬೇಟೆಯಾಡಿದ ತಕ್ಷಣ ತಿನ್ನದೆ ಅದಕ್ಕೆ ಹಿಂಸೆ ಕೊಟ್ಟು ಚೆಲ್ಲಾಟವಾಡುತ್ತದೆ. ಅದೇ ರೀತಿಯಲ್ಲಿ ಕೆಲವು ಮನುಷ್ಯರಿಗೆ ಇದೆ ಬುದ್ದಿ ಇರುತ್ತದೆ. ಇವರು ಇತರರು ಕಷ್ಟಪಡುವುದನ್ನು ಕಂಡು ಸಂತೋಷಪಡುತ್ತಾರೆ. ತಮಗೆ ಆಗದವರಿಗೆ ಏನಾದರೂ ಆಪತ್ತು ಸಂಭವಿಸಿದರೆ ಅದನ್ನುಕಂಡು ಹಾಲು ಕುಡಿದಷ್ಟು ಸಂತೋಷವಾಗುತ್ತದೆ. ಹೀಗೆ ಅನೇಕರು ಇತರರಿಗೆ ಕಷ್ಟಕೊಟ್ಟು ಚೆಲ್ಲಾಟವಾಡುತ್ತಾರೆ.

## 19. ಆರಮನೆಗಿಂತ ನೆರಮನೆ ಲೇಸು.

ಗಾದೆ ವೇದಗಳಿಗೆ ಸಮಾನ , ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಗಾದೆಗಳು ಜೀವನದನುಭವಕ್ಕೆ ಹಿಡಿದ ಕನ್ನಡಿಯಾಗಿವೆ. ಆದುದರಿಂದ ಗಾದೆಗಳು ಸತ್ಯಕ್ಕೆ ಬಹಳ ಹತ್ತಿರವಾಗಿವೆ. **ಅರಮನೆಗಿಂತ ನೆರೆಮನೆ ಲೇಸು** ಎಂಬ ಈ ಮೇಲಿನ ಗಾದೆಯು ಪ್ರಸಿದ್ಧವಾಗಿದೆ.

ಇಲ್ಲಿ ಅರಮನೆ ಎಂದಿರುವುದು ಹಣ ಅಂತಸ್ತು, ಅಧಿಕಾರ ಎಂದು ಮೆರೆದಾಡುವ ಶ್ರೀಮಂತಜನರ ಮನೆ ಎಂದರ್ಥ. ಇಂತಹ ಶ್ರೀಮಂತರ ಮನೆಯವರಿಗೆ ಬಡವರ ಕಷ್ಟ ಅರ್ಥವಾಗುವುದಿಲ್ಲ. ಬಡವರನ್ನು ಇವರು ತಮ್ಮ ನೆರಮನೆಯವರಾಗಿ ನೋಡಲು ಇಷ್ಟಪಡುವುದಿಲ್ಲ. ಬಡವರಿಗೆ ಕಷ್ಟ, ಚಿಂತೆ, ನೋವುಗಳ ಅನುಭವವಿರುವುದರಿಂದ ಕಷ್ಟದಲ್ಲಿರುವ ನೆರೆಮನೆಯವರ ಕಷ್ಟ ಸುಖಗಳಲ್ಲಿ ಭಾಗಿಯಾಗುತ್ತಾರೆ. ಆದ್ದರಿಂದ ಸರ್ವಜ್ಞ ಕವಿ "ಹಂಗಿನ ಅರಮನೆಗಿಂತ ವಿಂಗಡದ ಗುಡಿ ಲೇಸು" ಎಂದಿದ್ದಾನೆ. ಶ್ರೀಮಂತರು ಹಂಗಿಸಿ ಬಡವರನ್ನು ತಮ್ಮ ದಾಸ್ಯದಲ್ಲಿರಿಸಿಕೊಳ್ಳತ್ತಾರೆ. ಅವರ ಮೇಲೆ ದಬ್ಬಾಳಿಕೆ ಮಾಡುತ್ತಾರೆ. ಆದರೆ ನೆರೆಮನೆಯು ಸ್ನೇಹ ಸೌಹಾರ್ದದ ಸಂಕೇತವಾಗಿದೆ. "ಸಿರಿವಂತರಲ್ಲಿ ನೋಟ–ಬಡವರಲ್ಲಿ ಊಟ" ಎನ್ನುವ ಮಾತು ಇದೆ ಅರ್ಥವನ್ನು ನೀಡುತ್ತದೆ.

## 20.ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ

ಗಾದೆ ವೇದಗಳಿಗೆ ಸಮಾನ , ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಗಾದೆಗಳು ಜೀವನದನುಭವಕ್ಕೆ ಹಿಡಿದ ಕನ್ನಡಿಯಾಗಿವೆ. ಆದುದರಿಂದ ಗಾದೆಗಳು ಸತ್ಯಕ್ಕೆ ಬಹಳ ಹತ್ತಿರವಾಗಿವೆ. **ಗಿಡವಾಗಿ ಬಗ್ಗದು ಮರವಾಗಿ ಬಗ್ಗೀತೆ** ಎಂಬ ಈ ಮೇಲಿನ ಗಾದೆಯು ಪ್ರಸಿದ್ಧವಾಗಿದೆ.

ಯಾವುದೇ ಗಿಡಗಳನ್ನು ಚಿಕ್ಕದಿದ್ದಾಗಲೆ ಬೇಕಾದ ರೀತಿಯಲ್ಲಿ ಬಗ್ಗಿಸಿಕೊಳ್ಳಬಹುದು. ಆದರೆ ಮರವಾಗಿ ಬೆಳೆದು ನಿಂತಾಗ ಬಗ್ಗಿಸಲು ಸಾಧ್ಯವಾಗುವುದಿಲ್ಲ. ಚಿಕ್ಕವರಿದ್ದಾಲೆ ಮಕ್ಕಳಿಗೆ ಒಳ್ಳೆಯ ಬುದ್ಧಿ ಸಂಸ್ಕಾರವನ್ನು ಕೊಟ್ಟಾಗ ಅದು ಕಲಿತು ಮುಂದೆ ಉಳಿಸಿಕೊಂಡು ಹೋಗುತ್ತದೆ. ದೊಡ್ಡವನಾಗಿ ಬೆಳೆದಾಗ ಅವರು ಕಲಿಯದೇ ಹೋಗಬಹುದು. ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬ ಇನ್ನೊಂದು ಗಾದೆಯು ಇದೆ ಅರ್ಥವನ್ನು ಹೋಲುತ್ತದೆ. ಬಾಲ್ಯದಲ್ಲಿ ಕಲಿಯಲು ಆಸಕ್ತಿ ತೋರಿದಷ್ಟು ಯೌವನಾವಸ್ಥೆಗೆ ಬಂದಾಗ ಕಲಿಸಲು ಕಷ್ಟಪಡಬೇಕಾಗುತ್ತದೆ. ಆದ್ದರಿಂದ ಬಾಲ್ಯದಲ್ಲಿದ್ದಾಗಲೆ ಮಕ್ಕಳಿಗೆ ಸರಿಯಾದ ತರಬೇತಿಯನ್ನು ನೀಡಬೇಕು. ಕಾದಾಗಲೆ ಕಬ್ಬಿಣವನ್ನು ಬೇಕಾದ ರೀತಿಯಲ್ಲಿ ಬಗ್ಗಿಸಿಕೊಳ್ಳಬಹುದು. ಅದೆ ರೀತಿ ಯಾವುದೇ ಸಮಸ್ಯೆಗಳು, ನೋವುಗಳು ಇತ್ಯಾದಿಗಳನ್ನು ಸಣ್ಣವಾಗಿದ್ದಾಗಲೆ ಬಗೆಹರಿಸಿಕೊಂಡರೆ ಒಳಿತಾಗುತ್ತದೆ ಎಂದು ಹೇಳಬಹುದು.

## 21. ಉಪ್ಪು ತಿಂದ ಮನೆಗೆ ಎರಡು ಬಗೆಯಬೇಡ

ಗಾದೆ ವೇದಗಳಿಗೆ ಸಮಾನ , ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಗಾದೆಗಳು ಜೀವನದನುಭವಕ್ಕೆ ಹಿಡಿದ ಕನ್ನಡಿಯಾಗಿವೆ. ಆದುದರಿಂದ ಗಾದೆಗಳು ಸತ್ಯಕ್ಕೆ ಬಹಳ ಹತ್ತಿರವಾಗಿವೆ. **ಉಪ್ಪು ತಿಂದ ಮನೆಗೆ ಎರಡು ಬಗೆಯು ಬೇಡ** ಎಂಬ ಈ ಮೇಲಿನ ಗಾದೆಯು ಪ್ರಸಿದ್ಧವಾಗಿದೆ.

ನಾವು ಯಾರಿಂದಲಾದರೂ ಏನನ್ನಾದರೂ ಸಹಾಯ ಪಡೆದಾಗ ಕೃತಘ್ನತೆ ಸಲ್ಲಿಸುವುದು ನಮ್ಮ ಕರ್ತವ್ಯವಾಗಬೇಕು. ಅದೇ ರೀತಿ ನಮಗೆ ಅನ್ನ , ನೀರು ಇತ್ಯಾದಿ ಸೌಲಭ್ಯಗಳನ್ನು ಕೊಟ್ಟವರಿಗೆ ದ್ರೋಹ ಬಗೆಯಬಾರದು. ಬೇಕಾದ ಸಹಾಯವನ್ನು ಪಡೆದು ಸಹಾಯವನ್ನು ನೀಡಿದವರಿಗೆ ಮೋಸ ಮಾಡುವುದು ತಪ್ಪು . ಇದು ಸಜ್ಜನರ ಲಕ್ಷಣವಲ್ಲ. ಕೆಲವರು ನಮ್ಮ ದೇಶದಲ್ಲಿ ನೆಲಸಿ,ಇಲ್ಲಿಯ ಎಲ್ಲಾ ಸೌಲಭ್ಯಗಳನ್ನು ಪಡೆದು ಕೊಂಡು ನಮ್ಮ ದೇಶದ ವಿರುದ್ಧ ಮಾತನಾಡುವವರನ್ನು ನೋಡಬಹುದು. ಇಂತವರೆ ಉಪ್ಪು ತಿಂದ ಮನೆಗೆ ಎರಡು ಬಗೆಯುವವರು.

ಆದಕಾರಣ ನಾವು ನೆರವಾದವರಿಗೆ ಧನ್ಯವಾದಗಳನ್ನು ಅರ್ಪಿಸುವುದು ಮರೆಯಬಾರದು. ಮರೆತರೆ ಮಾನವ ಅರಿತರೆ ಶರಣ ಎನ್ನುವ ಹಾಗೆ ಮಾನವೀಯತೆ ಇರುವ ಶರಣರಂತೆ ನಾವು ಆಗಬೇಕು.

## 22.ದೇಶ ಸುತ್ತಿ ನೋಡು ಕೋಶ ಓದಿ ನೋಡು

ಗಾದೆ ವೇದಗಳಿಗೆ ಸಮಾನ , ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಗಾದೆಗಳು ಜೀವನದನುಭವಕ್ಕೆ ಹಿಡಿದ ಕನ್ನಡಿಯಾಗಿವೆ. ಆದುದರಿಂದ ಗಾದೆಗಳು ಸತ್ಯಕ್ಕೆ ಬಹಳ ಹತ್ತಿರವಾಗಿವೆ. **ದೇಶ ಸುತ್ತಿ ನೋಡು ಕೋಶ ಓದಿ ನೋಡು** ಎಂಬ ಈ ಮೇಲಿನ ಗಾದೆಯು ಪ್ರಸಿದ್ಧವಾಗಿದೆ.

ನಾವು ಜ್ಞಾನವನ್ನು ಸಂಪಾದನೆ ಮಾಡಿಕೊಳ್ಳಬೇಕಾದರೆ ದೇಶದ ವಿವಿಧ ಮಹತ್ವದ ಸ್ಥಳಗಳಿಗೆ ನೇರವಾಗಿ ಬೇಟಿ ನೀಡಿ ಪಡೆದುಕೊಳ್ಳಬಹುದು.ಅದೇ ರೀತಿಯಾಗಿ ಕೋಶಗಳನ್ನು ಅಂದರೆ ವಿವಿಧ ಪುಸ್ತಕಗಳನ್ನು ಓದಿ ಕೂಡ ಜ್ಞಾನವನ್ನು ಸಂಪಾದಿಸಿಕೊಳ್ಳಬಹುದು. ಕೆಲವೊಂದು ವಿಷಯಗಳನ್ನು ಕೇವಲ ಓದುವುದರಿಂದ ಆಸ್ವಾಧಿಸಲು ಸಾಧ್ಯವಾಗುವುದಿಲ್ಲ. ಅಂತಹ ಸಂದರ್ಭಗಳಲ್ಲಿ ನೇರವಾಗಿ ವಿಷಯಗಳಿರುವ ಸ್ಥಳಕ್ಕೆ ಹೋಗಿ ತಿಳಿಯಬಹುದಾಗಿದೆ. ಜೇನು ಸವಿದರೆ ಮಾತ್ರ ಅದರ ಸಿಹಿ ಗುಣ ಗೊತ್ತಾಗುತ್ತದೆ. ಅದಕ್ಕಾಗಿ ಜ್ಞಾನ ಸಂಪಾದಿಸಲು ವಿದ್ಯಾರ್ಥಿಗಳಿಗೆ ಪ್ರವಾಸಗಳನ್ನು ಏರ್ಪಡಿಸಲಾಗುತ್ತದೆ. ಉದ್ದೇಶಪೂರ್ವಕವಾಗಿ ದೇಶವನ್ನು ಸುತ್ತುವುದರಿಂದ ಜ್ಞಾನವಿಕಾಸದ ಅನುಭವವಾಗುತ್ತದೆ. ಅದೇ ರೀತಿ ನಮ್ಮವರು ತಾವು ಕಂಡ ಅನುಭವಗಳನ್ನೊಳಗೊಂಡ ಸಾಹಿತ್ಯವನ್ನು ಬರೆದುಕೊಟ್ಟು ಹೋಗಿದ್ದಾರೆ. ಅಂತಹ ಸಾಹಿತ್ಯವನ್ನು ಓದುವುದರಿಂದಲೂ ಜ್ಞಾನವನ್ನು ಪಡೆದುಕೊಳ್ಳಬಹುದು. ಒಟ್ಟಿನಲ್ಲಿ ಜ್ಞಾನವಿಕಾಸಕ್ಕಾಗಿ ದೇಶದ ವಿವಿಧ ಸ್ಥಳಗಳಿಗೆ ಹೋಗಬಹುದು,ಇಲ್ಲವೇ ವಿವಿಧ ಕೋಶಗಳನ್ನು ಓದಬೇಕು.

## 23. ದುಡಿಮೆಯೇ ದುಡ್ಡಿನ ತಾಯಿ

ಗಾದೆ ವೇದಗಳಿಗೆ ಸಮಾನ , ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಗಾದೆಗಳು ಜೀವನದನುಭವಕ್ಕೆ ಹಿಡಿದ ಕನ್ನಡಿಯಾಗಿವೆ. ಆದುದರಿಂದ ಗಾದೆಗಳು ಸತ್ಯಕ್ಕೆ ಬಹಳ ಹತ್ತಿರವಾಗಿವೆ. **ದುಡಿಮೆಯೇ ದುಡ್ಡಿನ ತಾಯಿ** ಎಂಬ ಈ ಮೇಲಿನ ಗಾದೆಯು ಪ್ರಸಿದ್ಧವಾಗಿದೆ.

ಮನುಷ್ಯರು ಸುಖ-ಸಂತೋಷದಿಂದ ಬಾಳಬೇಕಾದರೆ ಸಂಪತ್ತು ಕೂಡ ಬಹಳ ಮುಖ್ಯವೆನಿಸುತ್ತದೆ. ಅಂತಹ ಸಂಪತ್ತನ್ನು ಗಳಿಸಲು ಕಷ್ಟಪಟ್ಟು ದುಡಿಯಬೇಕು. ಈಗಿನ ಕಾಲದಲ್ಲಿ ದುಡ್ಡು ಎಲ್ಲದಕ್ಕೂ ತಾಯಿ ಎನಿಸಿಕೊಂಡು ಬಿಟ್ಟಿದೆ. ರೈತನೊಬ್ಬ ಉಳುಮೆ ಮಾಡಿ ಬೆಳೆತೆಗೆಯಬಹುದು. ಹಾಗೆಯೇ ವಿದ್ಯಾರ್ಥಿಯೊಬ್ಬ ಓದಿನಲ್ಲಿ ಕಷ್ಟಪಟ್ಟು ಜ್ಞಾನ ಸಂಪಾದಿಸಿ ಮುಂದೆ ಒಳ್ಳೆಯ ಉದ್ಯೋಗವನ್ನು ಪಡೆದು ದುಡ್ಡನ್ನು ಗಳಿಸಬಹುದು. ರೈತ ಜಮೀನಲ್ಲಿ ದುಡಿದ , ವಿದ್ಯಾರ್ಥಿ ಜ್ಞಾನಸಂಪಾದಿಸಿ ಉದ್ಯೋಗವನ್ನು ಪಡೆದು ದುಡ್ಡನ್ನು ಸಂಪಾದಿಸಿದರು. ಇದು ಅವರವರಿಗೆ ತಾಯಿ ಎನಿಸಿಕೊಳ್ಳಬಹುದೆಂದು ಹೇಳಬಹುದು.

ಒಟ್ಟನಲ್ಲಿ ದುಡಿತಕ್ಕೆ ತಕ್ಕ ಪ್ರತಿಫಲ ದೊರೆತು, ದುಡ್ಡಿನ ರೂಪದಲ್ಲಿರುವ(ಸಂಪತ್ತು) ಎಲ್ಲವೂ ತಾಯಿಯಾಗುತ್ತವೆ ಎಂದು ಅರ್ಥೈಸಬಹುದಾಗಿದೆ.

## 24. ಗುಣ ನೋಡಿ ಗೆಳೆತನ ಮಾಡು

ಗಾದೆ ವೇದಗಳಿಗೆ ಸಮಾನ , ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಗಾದೆಗಳು ಜೀವನದನುಭವಕ್ಕೆ ಹಿಡಿದ ಕನ್ನಡಿಯಾಗಿವೆ. ಆದುದರಿಂದ ಗಾದೆಗಳು ಸತ್ಯಕ್ಕೆ ಬಹಳ ಹತ್ತಿರವಾಗಿವೆ. **ಗುಣ ನೋಡಿ ಗೆಳೆತನ ಮಾಡು** ಎಂಬ ಈ ಮೇಲಿನ ಗಾದೆಯು ಪ್ರಸಿದ್ಧವಾಗಿದೆ.

ಜೀವನದಲ್ಲಿ ಯಾವುದೇ ವ್ಯಕ್ತಿ ಅಥವಾ ವಸ್ತುಗಳಿಗೆ ಗುಣ ಮುಖ್ಯ . ಗುಣವಿಲ್ಲದಿದ್ದರೆ ಯಾವುದೇ ವ್ಯಕ್ತಿಯ ಸ್ನೇಹ ಮಾಡಲಾಗದು. ಗುಣಮಟ್ಟವಿಲ್ಲದ ವಸ್ತುಗಳನ್ನು ಕೂಡ ಕೊಂಡುಕೊಳ್ಳಲಾಗದು. ಗುಣಮಟ್ಟವಿರುವ ವಸ್ತುಗಳನ್ನು ಬಯಸುವಾಗ ಗುಣವಂತನಾದ ಗೆಳೆಯನನ್ನು ಬಯಸುವುದು ಸಹಜ.ಆದ್ದರಿಂದ ಗೆಳೆತನ ಮಾಡುವಾಗ ಗುಣ ನೋಡಿ ಗೆಳೆತನ ಮಾಡಬೇಕು.ಸಜ್ಜನರ ಸಂಘ ಹೆಜ್ಜೇನು ಸವಿದಂತೆ ಎಂಬ ಮಾತಿನಂತೆ ಗುಣವಂತನಾದ ಗೆಳೆಯನ ಸಹವಾಸ ಅಮೃತವಿದ್ದಂತೆ ಅದರ ಸವಿರುಚಿ ಬಲ್ಲವನೆ ಬಲ್ಲ. ಗುಣವಂತರಾದ ಗೆಳೆಯರಲ್ಲಿ ಚಂಚಲತೆ ಇರುವುದಿಲ್ಲ, ವಂಚನೆಯೂ ಇರುವುದಿಲ್ಲ. ಆದ್ದರಿಂದ ನೀವು ಗುಣವಂತರಾಗಿ ಮತ್ತು ಗುಣವಂತರಾದವರನ್ನು ಗೆಳೆಯರನ್ನಾಗಿ ಮಾಡಿಕೊಂಡು ಚೆನ್ನಾಗಿರಬಹುದು.

## 25. ಹಾಸಿಗೆ ಇದ್ದಷ್ಟು ಕಾಲು ಚಾಚು

ಗಾದೆ ವೇದಗಳಿಗೆ ಸಮಾನ , ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಗಾದೆಗಳು ಜೀವನದನುಭವಕ್ಕೆ ಹಿಡಿದ ಕನ್ನಡಿಯಾಗಿವೆ. ಆದುದರಿಂದ ಗಾದೆಗಳು ಸತ್ಯಕ್ಕೆ ಬಹಳ ಹತ್ತಿರವಾಗಿವೆ. **ಹಾಸಿಗೆ ಇದ್ದಷ್ಟು ಕಾಲು ಚಾಚು** ಎಂಬ ಈ ಮೇಲಿನ ಗಾದೆಯು ಪ್ರಸಿದ್ಧವಾಗಿದೆ.

"ಇರುವ ಭಾಗ್ಯವ ನೆನೆದು ಬಾರೆನೆಂಬುದ ಬಿಡು ಹರುಷಕ್ಕಿದೆ ದಾರಿ" ಎಂಬ ಡಿ.ವಿ.ಜಿ.ಯವರ ಮಾತಿನಂತೆ ಇದ್ದುದ್ದರಲ್ಲಿಯೇ ಸಂತೃಪ್ತಿಯನ್ನು

ಕಾಣಬೇಕು. ಅದನ್ನು ಬಿಟ್ಟು ಇರಲಾರದ್ದನ್ನು ಬೇಕೆಂಬ ಆಸೆ ಮಾನವರಿಗೆ ಸಲ್ಲದು. ಮಲಗುವಾದ ಹಾಸಿಗೆ ಎಷ್ಟು ಇರುತ್ತದೆಯೋ ಅಷ್ಟಕ್ಕೆ ಮಾತ್ರ ಕಾಲನ್ನು ಚಾಚಿದರೆ ಒಳ್ಳೆದು ಇಲ್ಲವಾದರೆ ಕಾಲುಗಳು ನೆಲದ ಮೇಲೆ ಹೋಗುತ್ತವೆ. ಹಾಗೆಯೇ ನಮ್ಮಲ್ಲಿ ಎಷ್ಟು ಸಂಪತ್ತು ಇರುತ್ತದೆಯೋ ಅಷ್ಟನ್ನು ಮಾತ್ರ ಖರ್ಚುಮಾಡದರೆ ಒಳ್ಳೆದು ಅದಕ್ಕೂ ಮೀರಿ ಖರ್ಚುಮಾಡಿದರೆ ಸಂಪತ್ತು ಇರುವುದಿಲ್ಲ. ನಮ್ಮಿಂದ ಎಷ್ಟು ಕೆಲಸ ಮಾಡಲು ಸಾಧ್ಯವೋ ಅಷ್ಟನ್ನು ಮಾತ್ರ ಮಾಡಬೇಕು. ಆಗದ ಕೆಲಸ ಮಾಡಲು ಸಾಧ್ಯವಿಲ್ಲ.

ಒಟ್ಟಿನಲ್ಲಿ ನಮಗೆ ಎಷ್ಟು ಕಾರ್ಯಮಾಡಲು ಸಾಧ್ಯವೋ ಅಷ್ಟೆ ಮಾಡಿದರೆ ಫಲ. ಅತಿಯಾದರೇ ಅಮೃತವೂ ವಿಷವಾಗುತ್ತದೆ ಎಂಬುದನ್ನು ಮರೆಯಬಾರದು.

---

# ಪ್ರಬಂಧಗಳು

## 1) ರಾಷ್ಟ್ರೀಯ ಹಬ್ಬಗಳ ಆಚರಣೆ ಮತ್ತು ಮಹತ್ವ
ಅಥವಾ
## ಭಾವೈಕ್ಯತೆಯನ್ನು ಮೂಡಿಸುವಲ್ಲಿ ರಾಷ್ಟ್ರೀಯ ಹಬ್ಬಗಳ ಪಾತ್ರ

**ಪೀಠಿಕೆ** : ಒಂದು ದೇಶದ ಐಕ್ಯತೆಯನ್ನು ಕಾಪಾಡುವ ನಿಟ್ಟಿನಲ್ಲಿ ರಾಷ್ಟ್ರೀಯ ಹಬ್ಬಗಳು ಬಹಳ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತವೆ. ಭಾರತದಂತಹ ವೈವಿಧ್ಯತೆಯುಳ್ಳ ರಾಷ್ಟ್ರಗಳಲ್ಲಿ ಏಕತೆಯನ್ನು ತರುವುದು ಇಂತಹ ರಾಷ್ಟ್ರೀಯ ಹಬ್ಬಗಳ ಮೂಲಕ ಸಾಧ್ಯವಿದೆ. ಇಡಿ ರಾಷ್ಟ್ರದ ಜನರೆಲ್ಲರೂ ಯಾವುದೇ ಭೇಧಭಾವವಿಲ್ಲದೆ, ಜಾತಿ, ಧರ್ಮ, ಪ್ರಾದೇಶಿಕ ಭಿನ್ನತೆಯನ್ನು ತೊರೆದು ಒಟ್ಟಾಗಿ ಆಚರಿಸುವ ಹಬ್ಬಗಳೇ ರಾಷ್ಟ್ರೀಯ ಹಬ್ಬಗಳು ಎಂದು ಕರೆಯಬಹುದು. ನಮ್ಮದೇಶದಲ್ಲಿ ಮೂರು ರಾಷ್ಟ್ರೀಯ ಹಬ್ಬಗಳೆಂದು ಘೋಸಿಸಲಾಗಿದೆ.ಅವುಗಳೆಂದರೆ 1) ಸ್ವಾತಂತ್ರ್ಯ ದಿನಾಚರಣೆ 2) ಗಣರಾಜ್ಯೋತ್ಸವ 3) ಗಾಂಧಿ ಜಯಂತಿ.

**ವಿಷಯ ವಿವರಣೆ** : **1) ಸ್ವಾತಂತ್ರ್ಯ ದಿನಾಚರಣೆ**: ಭಾರತ ಸುಮಾರು ಎರಡು ನೂರು ವರ್ಷಗಳ ಕಾಲ ಬ್ರಿಟೀಷರ ಆಳ್ವಿಕೆಗೆ ಒಳಪಟ್ಟಿತ್ತು.ವ್ಯಾಪಾರದ ಉದ್ದೇಶದಿಂದ ಬಂದ ಬ್ರಿಟೀಷರು ಭಾರತೀಯ ಅರಸರುಗಳು ದೌರ್ಬಲ್ಯಗಳನ್ನು ಉಪಯೋಗಿಸಿಕೊಂಡು ಭಾರತ ದೇಶದ ಆಡಳಿತ ಚುಕ್ಕಾಣಿ ಹಿಡಿದಿದ್ದರು.ಭಾರತಿಯರಿಗೆ ಸ್ವಾತಂತ್ರ ಎನ್ನವುದೇ ಇರಲಿಲ್ಲ.ಹಾಗಾಗಿ ಭಾರತೀಯರೆಲ್ಲರೂ ಒಟ್ಟಾಗಿ ಬ್ರಿಟೀಷರ ವಿರುದ್ಧ ಸ್ವಾತಂತ್ರ್ಯ ಹೋರಾಟದ ರಣಕಹಳೆಯನ್ನು ಊದಿ ಕೊನೆಗೆ 1947 ನೇ ಆಗಸ್ಟ್ 15 ರಂದು ಸ್ವಾತಂತ್ರ ವನ್ನು ಪಡೆದರು.ಆ ದಿನವನ್ನು ಪ್ರತಿವರ್ಷ ಭಾರತೀಯರೆಲ್ಲರೂ ಒಟ್ಟಾಗಿ ರಾಷ್ಟ್ರೀಯ ಹಬ್ಬವನ್ನಾಗಿ ಆಚರಿಸಿ ರಾಷ್ಟ್ರೀಯ ಐಕ್ಯತೆಯನ್ನು ಮೆರೆಯುತ್ತಾರೆ.ಅಂದು ಶಾಲಾ-ಕಾಲೇಜು-ಕಛೇರಿಗಳಲ್ಲಿ ರಾಷ್ಟ್ರೀಯ ಧ್ವಜವನ್ನು ಹಾರಿಸಿ ದೇಶಭಕ್ತಿ ಸಾರುವ ಕಾರ್ಯಕ್ರಮಗಳನ್ನು ಆಚರಿಸಿ ಒಗ್ಗಟ್ಟನ್ನು ಪ್ರದರ್ಶಿಸುತ್ತಾರೆ.

**2) ಗಣರಾಜ್ಯೋತ್ಸವ** :
ಭಾರತದೇಶವು ಸ್ವಾತಂತ್ರ್ಯವನ್ನು ಪಡೆದ ನಂತರ ಆಡಳಿತದ ರೂಪುರೇಷಗಳನ್ನು ಸಿದ್ಧಪಡಿಸಲಾಗುತ್ತದೆ. ಆ ರೂಪುರೇಷಗಳನ್ನು ಒಳಗೊಂಡಿರುವುದೇ ನಮ್ಮ ಸಂವಿಧಾನ. ಎಲ್ಲ ರಾಜ್ಯಗಳನ್ನು ಗಣಗಳನ್ನಾಗಿ ಮಾಡಿ (ಒಟ್ಟುಗೂಡಿಸಿ) ಉತ್ತಮವಾದ ಆಡಳಿತ ನಡೆಸಲು ಕಾನೂನುರೂಪ ಪಡೆದ ಸಂವಿಧಾನವನ್ನು ಜಾರಿಗೆ ತಂದ ದಿನವೇ ಗಣರಾಜ್ಯ ದಿನ. ಇದನ್ನು ಕೂಡ ನಮ್ಮ ದೇಶದ ಪ್ರಜೆಗಳೆಲ್ಲರೂ ಒಟ್ಟಾಗಿ ಸೇರಿ ಆಚರಿಸುತ್ತಾರೆ.ಈ ದಿನದಲ್ಲಿ ರಾಷ್ಟ್ರಧ್ವಜವನ್ನು ಆರಿಸಿ ಸಂವಿಧಾನದ ನಿರ್ಮಾತೃಗಳು ಹಾಗೂ ತತ್ವಗಳನ್ನು ಸ್ಮರಿಸಿಕೊಳ್ಳತ್ತಾರೆ. ಪ್ರತಿಯೊಬ್ಬರು ಸಂವಿಧಾನ ಪಾಲಿಸುವ ಮನೋಧರ್ಮವನ್ನು ಬೆಳೆಸಿಕೊಳ್ಳುವ ಆಶಯವನ್ನು ಪಡೆಯುತ್ತಾರೆ. ಹಾಗೆಯೇ ದೇಶಭಕ್ತಿ ಸಾರುವ ಕಾರ್ಯಕ್ರಮಗಳನ್ನು ಆಚರಿಸಿ ಒಗ್ಗಟ್ಟನ್ನು ಪ್ರದರ್ಶಿಸುತ್ತಾರೆ.

**3) ಗಾಂಧಿ ಜಯಂತಿ** : ಯಾವುದೇ ಒಂದು ದೇಶದ ಜನರೆಲ್ಲರೂ ಒಟ್ಟಾಗಿ ಸೇರಲು ನಾಯಕತ್ವ ಬೇಕು. "ನಾಯಕರಿಲ್ಲದ ನಾವೆ ದಡಸೇರಲಾರದು" ಅಂತೆಯೇ ನಮ್ಮ ದೇಶದ ಸ್ವಾತಂತ್ರ್ಯ ಪಡೆಯಲು ಬಹುಮುಖ್ಯ ನಾಯಕತ್ವವಹಿಕೊಂಡವರು ನಮ್ಮ ದೇಶದ ರಾಷ್ಟ್ರಪಿತ ಎನಿಸಿಕೊಂಡ ಮಹಾತ್ಮ ಗಾಂಧೀಜಿಯವರು. ಅವರ ಹುಟ್ಟಿದ ದಿನವೇ ಅಕ್ಟೋಬರ್ 2. ಆ ದಿನವನ್ನು ಗಾಂಧಿಜಯಂತಿಯೆಂದು ರಾಷ್ಟ್ರೀಯ ಹಬ್ಬವನ್ನಾಗಿ ಆಚರಿಸಲಾಗುತ್ತದೆ.ಏಕೆಂದರೆ ಗಾಂಧೀಜಿವರು ಸ್ವಾತಂತ್ರ್ಯ ಚಳುವಳಿಯ ಮುಂದಾಳತ್ವವನ್ನು ವಹಿಸಿಕೊಂಡು ಸ್ವಾತಂತ್ರ್ಯವನ್ನು ತಂದುಕೊಡುವಲ್ಲಿ ಪ್ರಾಮುಖ್ಯತೆಯನ್ನು ಪಡೆದುಕೊಂಡರು. ಆದ್ದರಿಂದ ಅವರ ಆದರ್ಶಗಳನ್ನು ನೆನೆಯುತ್ತ,ಅವರನ್ನು ಸ್ಮರಿಸುತ್ತಾ ಸ್ವಾತಂತ್ರ್ಯದ ಮಹತ್ವದಬಗ್ಗೆ ಕೊಂಡಾಡುವ ದಿನವಾಗಿದೆ.

**ಉಪಸಂಹಾರ** : ಭಾರತದಲ್ಲಿ ರಾಷ್ಟ್ರೀಯ ಹಬ್ಬಗಳನ್ನು ಆಚರಿಸುವುದರಿಂದ ಪ್ರತಿಯೊಬ್ಬ ನಾಗರಿಕರಲ್ಲಿ ಏಕತೆ. ದೇಶಭಕ್ತಿ, ಸಂವಿಧಾನದ ಮಹತ್ವ, ನಾಯಕತ್ವದ ಮಹತ್ವ ಮುಂತಾದ ವಿಚಾರಗಳನ್ನು ತಿಳಿಯಲು ಮತ್ತು ನಾವು ಅದೇ ರೀತಿ ನೆಡೆದುಕೊಳ್ಳಲು ನೆರವಾಗುತ್ತದೆ ಎಂಬ ಆಶಯವನ್ನು ಇಟ್ಟುಕೊಳ್ಳೋಣ.

## 2) ಗ್ರಂಥಾಲಯಗಳ ಮಹತ್ವ
ಅಥವಾ
## ಶಾಲಾ ಗ್ರಂಥಾಲಯಗಳ ಸದ್ಬಳಕೆ

**ಪೀಠಿಕೆ** : "ಗ್ರಂಥಗಳಿಲ್ಲದ ಕೋಣೆ ಆತ್ಮವಿಲ್ಲದ ದೇಹವಿದ್ದಂತೆ" ಎಂಬ ನಾಣ್ಣುಡಿಯಂತೆ ಪ್ರತಿಯೊಬ್ಬರು ಗ್ರಂಥಗಳನ್ನು ಹೊಂದಿ ತಮ್ಮಲ್ಲಿ ಆತ್ಮವನ್ನು ಇಟ್ಟುಕೊಳ್ಳಬೇಕು. ಇಂದಿನ ಯುಗದಲ್ಲಿ ಜ್ಞಾನವೃದ್ಧಿಗೆ ಮತ್ತು ಅಮೂಲ್ಯವಾದ ಸಮಯ ಸದುಪಯೋಗಕ್ಕೆ ಗ್ರಂಥಾಲಯಗಳು ಬಹಳ ಮುಖ್ಯ ಎಸುತ್ತವೆ. ಜ್ಞಾನಾರ್ಜನೆಗೆ ಅಗತ್ಯವಾದ ಗ್ರಂಥಗಳಿರುವ ಆಲಯವೇ ಗ್ರಂಥಾಲಯ. ಅದಕ್ಕೆಂದೆ ಶಾಲಾ - ಕಾಲೇಜುಗಳಲ್ಲಿ ಮತ್ತು ಸಾರ್ವಜನಿಕ ಗ್ರಂಥಾಲಯಗಳು ತೆರೆಯಲ್ಪಟ್ಟಿವೆ.

**ವಿಷಯ ವಿವರಣೆ** : ಮಾನವನ ಜೀವನದಲ್ಲಿ ಪುಸ್ತಕಗಳು ಪ್ರಮುಖ ಪಾತ್ರವಹಿಸುತ್ತವೆ, ಮನುಷ್ಯನ ದೇಹಕ್ಕೆ ಅನ್ನ,ನೀರು,ಗಾಳಿ ಹೇಗೆ ಮುಖ್ಯವೋ ಹಾಗೆ ಮಾನವನ ಮನಸ್ಸಿನ ವಿಕಾಸಕ್ಕೆ ಪುಸ್ತಕಗಳು

ಅವಶ್ಯಕವಾಗಿರುತ್ತವೆ. ಪುಸ್ತಕಗಳು ಆತ್ಮೀಯ ಮಿತ್ರರಿದ್ದಂತೆ ಸದಾ ಒಳ್ಳೆಯ ಯೋಚನೆಗಳಿಗೆ ದಾರಿ ಮಾಡಿಕೊಡುತ್ತವೆ. ಜ್ಞಾನವಿಕಾಸಕ್ಕಾಗಿಯೇ ಸಾರ್ವಜನಿಕವಾಗಿಯು ಮತ್ತು ಶಾಲಾ ಕಾಲೇಜುಗಳಲ್ಲಿ ಗ್ರಂಥಾಲಯಗಳನ್ನು ತೆರೆಯಲಾಗಿದೆ. ಇಲ್ಲಿ ಪ್ರತಿಯೊಂದು ವಿಷಯಗಳ ಅಂದರೆ ಸಾಹಿತ, ಇತಿಹಾಸ, ಪುರಾಣ, ವಿಜ್ಞಾನ, ತಂತ್ರಜ್ಞಾನ,ಮಕ್ಕಳ ಸಾಹಿತ್ಯ ಮೊದಲಾದ ವಿಷಯಗಳ ಗ್ರಂಥಗಳನ್ನು ಇಟ್ಟಿರುತ್ತಾರೆ. ಹಲವಾರು ಭಾಷೆಯ ಪುಸ್ತಕಗಳು ಸಹ ಇರುತ್ತವೆ. ಗ್ರಂಥಾಲಯಗಳ ಜ್ಞಾನದ ನಿಧಿಗಳಿದ್ದಂತೆ ಅಂತಹ ಜ್ಞಾನ ನಿಧಿಗೆ ಕೈಹಾಕಿ ನಮ್ಮ ವ್ಯಕ್ತಿತ್ವ ವಿಕಸನ ಮಾಡಿಕೊಳ್ಳಬೇಕು. ಗ್ರಂಥಾಲಯಗಳು ಜ್ಞಾನಾರ್ಜನೆಯ ಮೆಟ್ಟಿಲುಗಳು ಅವುಗಳಲ್ಲಿಗೆ ಹೋಗಿ ನಮ್ಮ ಜ್ಞಾನದಹಾದಿ ತುಳಿಯಬೇಕು. ಪುಸ್ತಕಗಳಿಲ್ಲದ ಮನೆ ,ಗ್ರಂಥ ಭಂಡಾರವಿಲ್ಲದ ಶಾಲಾ ಕಾಲೇಜುಗಳು ದೇವರಿಲ್ಲದ ಗುಡಿಯಂತೆ ಆದ್ದರಿಂದ ದೇವಾಲಯಗಳಂತೆ ಇರಲಿ ಎಂದು ನಮ್ಮ ಶಾಲಾ-ಕಾಲೇಜುಗಳಲ್ಲಿ ಗ್ರಂಥಾಲಯಗಳನ್ನು ಮೊದಲಿನಿಂದಲೂ ತೆರೆಯಲಾಗಿದೆ. ಓದುವ ಹವ್ಯಾಸವುಳ್ಳವರು ಗ್ರಂಥಾಲಗಳನ್ನು ದೇವಾಲಯದಂತೆ ಕಾಣುತ್ತಾರೆ. ಉನ್ನತ ವಿದ್ಯಾಭ್ಯಾಸವನ್ನು ಮಾಡುವ ವಿದ್ಯಾರ್ಥಿಗಳಿಗಂತೂ ಜ್ಞಾನದಾಸೋಹದ ಮನೆಗಳಿದ್ದಂತೆ. ಅಲ್ಲಿ ಜ್ಞಾನವೆಂಬ ಆಹಾರ ಸೇವಿಸುವವರಿಗೆ ಅದರ ರುಚಿ ಅರಿವಾಗುತ್ತದೆ. ಇಂದಿನ ತಂತ್ರಜ್ಞಾನ ಯುಗದಲ್ಲಿ ಅಂತರ್ಜಾಲದ ಮೂಲಕ ಜ್ಞಾನವನ್ನು ಗಳಿಸಿಕೊಳ್ಳಲುಬಹುದು ಅದಕ್ಕೆಂದೆ ಇ-ಟಙಊಚಿಡಿಥಿ (ಈ-ಗ್ರಂಥಾಲಯ) ಗಳನ್ನು ತೆರೆಯಲಾಗಿದೆ. ಎಲ್ಲ ಪುಸ್ತಕಗಳನ್ನು ಅಂತರ್ಜಾಲಕ್ಕೆ ಸೇರಿಸಲಾಗುತ್ತಿದೆ.

**ಉಪಸಂಹಾರ** : ಒಟ್ಟಾರೆಯಾಗಿ ಶಾಲಾ-ಕಾಲೇಜುಗಳಲ್ಲಿನ ಮತ್ತು ಸಾರ್ವಜನಿಕ ಗ್ರಂಥಾಲಯಗಳು ನಮ್ಮ ಜ್ಞಾನವಿಕಾಸಕ್ಕೆ ಅವಶ್ಯವಾದ ಮಾಹಿತಿಯನ್ನು ಒದಗಿಸಿ ಜ್ಞಾನವಂತರಾಗಲು ಸಹಾಯವಾಗುತ್ತವೆ. ಸಜ್ಜನರ ಸಂಘಮಾಡಿದಂತೆ, ಸಭ್ಯಗ್ರಂಥಗಳ ಅಧ್ಯಯನಮಾಡಿ ಜ್ಞಾನಸಾಗರವನ್ನು ಈಜಿ ದಡ ಸೇರಬಹುದು. ಗ್ರಂಥಾಲಯಗಳು ಜ್ಞಾನವಿಕಾಸದ ಗುರುವಿದ್ದಂತೆ ಎಂದು ಗುರುವಿನ ಬಳಿ ತೆರಳಿ ಅಭ್ಯಾಸ ಮಾಡುವ ಹವ್ಯಾಸ ನಮ್ಮದಾಗಬೇಕು.

## 3) ಸಾಮಾಜಿಕ ಪಿಡುಗುಗಳು

**ಪೀಠಿಕೆ** : ಸಮಾಜದ ಅಭಿವೃದ್ಧಿಗೆ ತೊಡಕನ್ನುಂಟುಮಾಡುವ ಕೆಲವು ಪದ್ಧತಿಗಳನ್ನು ಸಾಮಾಜಿಕ ಪಿಡುಗುಗಳು ಎಂದು ಗುರುತಿಸಲಾಗಿದೆ. ಇಂತಹ ಪದ್ಧತಿಗಳು ನಮ್ಮ ದೇಶವನ್ನು ಅಭಿವೃದ್ಧಿಪಥದತ್ತ ಕೊಂಡೊಯ್ಯಲು ಕಂಟಕವಾಗಿವೆ. ಇವುಗಳನ್ನು ನಿವಾರಿಸಿಕೊಂಡಾಗ ಮಾತ್ರ ಸಮಾಜ ಸ್ವಾಸ್ಥ್ಯವಾಗಿರಬಲ್ಲದು.

**ವಿಷಯ ವಿವರಣೆ** : ಪಾಚೀನ ಕಾಲದಿಂದಲೂ ನಮ್ಮ ಸಮಾಜಕ್ಕೆ ಅಂಟಿಕೊಂಡು ಬಂದಿರುವ, ಸಮಾಜದ ಅಭಿವೃದ್ಧಿಗೆ ಕಂಟಕವಾಗಿರುವ ಬಡತನ, ಅನಕ್ಷರತೆ, ಬಾಲ್ಯವಿವಾಹ, ವರದಕ್ಷಿಣೆ, ಸ್ತ್ರೀಶೋಷಣೆ, ಭಿಕ್ಷಾಟನೆ, ಜಾತೀಯತೆ, ಅಸ್ಪೃಷ್ಯತೆ, ಸತಿಪದ್ಧತಿ, ದೇವದಾಸಿ ಪದ್ಧತಿ, ಜೀತಪದ್ಧತಿ, ಪರದಾ ಪದ್ಧತಿಯಂತಹ ಸಾಮಾಜಿಕ ಪಿಡುಗುಗಳು ನಮ್ಮನ್ನು ಇಂದಿಗೂ ಕಾಡುತ್ತಿವೆ. ಇಂತಹ ಅನಿಷ್ಟಗಳನ್ನು ಹೋಗಲಾಡಿಸಿದಾಗ ಮಾತ್ರ ನಮ್ಮ ಸಮಾಜದ ಏಳಿಗೆಯಾಗಲು ಸಾಧ್ಯವಿದೆ. ಇಲ್ಲವಾದರೆ ಸಮಾಜ ಅಭಿವೃದ್ಧಿ ಕುಂಠಿತಗೊಂಡು ದಾಸ್ಯದಲ್ಲಿರಬೇಕಾಗುತ್ತದೆ. ಸಾಮಾಜಿಕ ಪಿಡುಗುಗಳನ್ನು ಹೋಗಲಾಡಿಸಲು ಸಾಕಷ್ಟು ಕಾನೂನುಗಳಿದ್ದರೂ ಪ್ರಯೋಜನವಾಗಿಲ್ಲ.ಇವುಗಳು ಹೀಗೆ ಮುಂದುವರಿದಿರಲು ಅನಕ್ಷರತೆಯೆ ಕಾರಣ ಎಂದು ಹೇಳಬಹುದು. ಅಕ್ಷರಸ್ಥರ ಸಂಖ್ಯೆ ಹೆಚ್ಚಿದಂತೆ ಕೆಲವು ಪಿಡುಗುಗಳು ದೂರವಾಗುತ್ತಿವೆ. ಅನಕ್ಷರತೆ ಎಲ್ಲಿ ತಾಂಡವವಾಡುತ್ತಿದಿಯೋ ಅಲ್ಲಿ ಇಂತಹ ಪಿಡುಗುಗಳು ಜೀವಂತವಾಗಿವೆ. ಸಾಮಾಜಿಕ ಪಿಡುಗುಗಳು ಸಮಾಜಕ್ಕೆ ಹಿಡಿದ ಗೆದ್ದಲಿನಂತೆ ಸಮಾಜವನ್ನು ವಿನಾಶದತ್ತ ಕೊಂಡೊಯ್ಯುತ್ತವೆ. ಆದ್ದರಿಂದ ನಮ್ಮ ಸರ್ಕಾರಗಳು ಇನ್ನೂ ಕಠಿಣ ಕಾನೂನುಗಳನ್ನು ಜಾರಿಗೆ ತಂದು , ಅದಕ್ಕೆ ಪೂರಕವಾದ ಅರಿವು ಮೂಡಿಸಬೇಕು. ಪ್ರತಿಯೊಬ್ಬರಲ್ಲಿ ವೈಜ್ಞಾನಿಕ ಮನೋಭಾವವನ್ನು ಮೂಡಿಸುವ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು. ಸಾಮಾಜಿಕ ಪಿಡುಗುಗಳಿಂದ ಆಗುವ ಅನಾಹುತಗಳನ್ನು ತಿಳಿಸಬೇಕು.ಅಂದಾಗ ಮಾತ್ರ ನಿವಾರಣೆಯಾಗಬಲ್ಲವು.

**ಉಪಸಂಹಾರ** : ಉತ್ತಮ ಸಮಾಜ ನಿರ್ಮಾಣ ಮಾಡಲು ಸಾಮಾಜಿಕ ಪಿಡುಗುಗಳನ್ನು ಬೇರುಸಹಿತ ಕಿತ್ತೊಗೆಯಬೇಕು. ವಿದ್ಯಾವಂತರು ಮುಂದೆ ಬಂದು ಅನಕ್ಷರಸ್ಥರಲ್ಲಿ ಅರಿವು ಮೂಡಿಸಿ ಆ ಮೂಲಕ ಸಾಮಾಜಿಕ ಪಿಡುಗುಗಳನ್ನು ನಿವಾರಿಸಿ ಸಮಾಜ ಸ್ವಾಸ್ಥ್ಯವಾಗಿರಿಸಲು ಶ್ರಮಿಸಬೇಕು. ಆಗ ಮಾತ್ರ ನಮ್ಮ ದೇಶ ಅಭಿವೃದ್ಧಿಪಥದತ್ತ ಸಾಗಲು ಸಾಧ್ಯವೆಂದು ಹೇಳಬಹುದು.

## 4) ಸ್ವಚ್ಛ ಭಾರತ್ ಅಭಿಯಾನ

**ಪೀಠಿಕೆ:** ಸ್ವಚ್ಛ ಎಂದರೆ ನಿರ್ಮಲವಾದದ್ದು, ಪರಿಶುದ್ಧವಾದದ್ದು ಎಂದರ್ಥ.ಸ್ವಚ್ಚ ಭಾರತ ಎಂದರೆ ಭಾರತ ದೇಶದ ಕಲುಷಿತ ಸ್ಥಳಗಳನ್ನು ನಿರ್ಮಲಗೊಳಿಸುವುದು ಎಂದರ್ಥ.ಸ್ವಚ್ಛ ಭಾರತ್ ಅಭಿಯಾನವು ಭಾರತ ದೇಶದ ಒಂದು ಅತ್ಯುತ್ತಮ ನೈರ್ಮಲ್ಯ ಯೋಜನೆಯಾಗಿದೆ.ಪ್ರಸ್ತುತ ಕೇಂದ್ರ ಸರ್ಕಾರದ ಮಹತ್ವಕಾಂಕ್ಷೆಯ ಯೋಜನೆಯಾಗಿದ್ದು, ಭಾರತ ದೇಶವನ್ನು ಸ್ವಚ್ಛಗೊಳಿಸುವ ನಿಟ್ಟಿನಲ್ಲಿ ಅತ್ಯಂತ ಮಹತ್ವಪೂರ್ಣ ಅಭಿಯಾನವಾಗಲಿದೆ.

**ವಿಷಯ ನಿರೂಪಣೆ**: 'ಆರೋಗ್ಯವೇ ಮಹಾಭಾಗ್ಯ' 'ಎಲ್ಲಿದೆಯೋ ಸ್ವಚ್ಛತೆ ಅಲ್ಲಿದೆ ಆರೋಗ್ಯ' ಎಂಬ ಹಿತ ನುಡಿಗಳಂತೆ ನಮ್ಮ ಸುತ್ತಮುತ್ತಲಿನ ಪ್ರದೇಶಗಳು ಸ್ವಚ್ಛವಾಗಿದ್ದರೆ ಅದು ನಮಗೆ ಆರೋಗ್ಯ ಭಾಗ್ಯವನ್ನು ತಂದು ಕೊಡುತ್ತದೆ.ಇಲ್ಲವಾದರೆ ಅನಾರೋಗ್ಯ ಉಂಟಾಗಿ ಕಾಯಿಲೆಗಳು ಉಲ್ಬಣಿಸಬಹುದು ಆದ್ದರಿಂದ ನಾವು ನಮ್ಮ ಸುತ್ತಮುತ್ತಲಿನ ಪ್ರದೇಶಗಳನ್ನು ನೈರ್ಮಲ್ಯದಿಂದ ಇರುವಂತೆ ನೋಡಿಕೊಳ್ಳಬೇಕು. ಭಾರತ ದೇಶವನ್ನು ಸ್ವಚ್ಛವಾಗಿಟ್ಟುಕೊಳ್ಳುವ ಉದ್ದೇಶದಿಂದ ದಿನಾಂಕ: 02.10.2014 ರಂದು ನಮ್ಮ ದೇಶದ ಪ್ರಧಾನ ಮಂತ್ರಿಯಾದ ಶ್ರೀನರೇಂದ್ರಮೋದಿಯವರು ಸ್ವತಃ ತಾವೇ ಭಾಗವಹಿಸುವುದರ ಮೂಲಕ ಸ್ವಚ್ಛ ಭಾರತ ಆಭಿಯಾನಕ್ಕೆ ಚಾಲನೆ ನೀಡಿದರು. ಮಹಾತ್ಮಗಾಂಧೀಜಿಯವರ ಹುಟ್ಟಿದ ದಿನ( ಅಕ್ಟೋಬರ್-2) ಈ ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದು ಗಾಂಧೀಜಿಯವರ ನಿರ್ಮಲ ಭಾರತ ಕನಸನ್ನು ನನಸು ಮಾಡುವ ನಿಟ್ಟಿನಲ್ಲಿ ಅತ್ಯುತ್ತಮ ಅಭಿಯಾನವಾಗಿದೆ. ಕೇಂದ್ರ,ರಾಜ್ಯ ಸರ್ಕಾರಿ ನೌಕರರು, ಶಾಲಾ-ಕಾಲೇಜು ವಿದ್ಯಾರ್ಥಿಗಳು,ರಾಜಕೀಯ ಮುಖಂಡರು, ಇತ್ಯಾದಿ ಭಾರತದ ನಾಗರಿಕರು ಪ್ರತಿಜ್ಞೆ ಕೈಗೊಳ್ಳುವ ಮೂಲಕ ಈ ಅಭಿಯಾನಕ್ಕೆ ಕೈಜೋಡಿಸಿದ್ದಾರೆ.

**'ಸ್ವಚ್ಛತೆ ಉತ್ತಮ ಆರೋಗ್ಯದ ತಳಹದಿ'** ಆದ್ದರಿಂದ ಸ್ವಚ್ಛತೆಯಿಂದ ಕೂಡಿದ ಸ್ಥಳ ನೋಡಲು ಸುಂದರವಾಗಿರುವಂತೆ ರೋಗಮುಕ್ತವು ಆಗಿರುತ್ತದೆ. ಆದ್ದರಿಂದ ನಾವು ಮೊದಲು ನಮ್ಮ ಮನೆ, ಬೀದಿ, ಗ್ರಾಮ, ಶಾಲಾ-ಕಾಲೇಜುಗಳನ್ನು ಸ್ವಚ್ಛವಾಗಿಟ್ಟುಕೊಂಡರೆ ಈ ಅಭಿಯಾನಕ್ಕೆ ಪ್ರೋತ್ಸಹ ನೀಡಿದಂತೆ ಆಗುತ್ತದೆ. ನಾವುಗಳು ಪ್ರತಿನಿತ್ಯ ಸ್ವಲ್ಪ ಸಮಯವನ್ನಾದರೂ ಸ್ವಚ್ಛತೆಗೆ ಮೀಸಲಿಟ್ಟು, ಸ್ವಚ್ಛತಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಆರೋಗ್ಯದಿಂದ ಇರೋಣ.

**ಉಪಸಂಹಾರ** :" ಏಕ್ ಕದಂ ಸ್ವಚ್ಛತಾ ಕಿ ಔರ್ " ಎಂಬ ಧ್ಯೇಯ ವಾಕ್ಯವನ್ನಿಟ್ಟುಕೊಂಡು ನಾವೆಲ್ಲರೂ ನಿರ್ಮಲ ಮನಸ್ಸಿನಿಂದ ನಮ್ಮ ದೇಶವನ್ನು ನೈರ್ಮಲ್ಯಗೊಳಿಸಿಕೊಳ್ಳಬೇಕು. ಈ ಅಭಿಯಾನದಲ್ಲಿ ಭಾಗವಹಿಸಿ,ಪ್ರೋತ್ಸಾಹಿಸಿ ಸ್ವಚ್ಛ,ಸುಂದರ ಪರಿಸರದಿಂದ ಕೂಡಿದ ಭಾರತವನ್ನು ನಿರ್ಮಿಸಿ ಗಾಂಧೀಜಿಯವರ ಕನಸನ್ನು ನನಸು ಮಾಡೋಣ ಎಂಬ ಆಶಯ ನಮ್ಮದಾಗಿರಲಿ.

## 5. ಪ್ರಾಚ್ಯ ಸ್ಮಾರಕಗಳ ಸಂರಕ್ಷಣೆ

**ಪೀಠಿಕೆ** : ಪ್ರಾಚೀನ ಸ್ಮಾರಕಗಳು ರಾಷ್ಟ್ರ ಪರಂಪರೆಯ ಹೆಗ್ಗುರುತುಗಳು. ನಮ್ಮ ಭವ್ಯ ಪರಂಪರೆಯ ಪ್ರತೀಕಗಳಾಗಿವೆ. ಗತಕಾಲದ ವೈಭವಗಳನ್ನು ಅರಿಯಲು ಆಧಾರವಾಗಿರುವಂತಹ ಅಮೂಲ್ಯವಾದ ಸಂಪತ್ತು ಎಂದೇ ಹೇಳಬಹುದು.

**ವಿಷಯ ನಿರೂಪಣೆ** : ಪ್ರಾಚ್ಯ ಎಂದರೆ ಪ್ರಾಚೀನವಾದದ್ದು ಎಂದರ್ಥ. ಪ್ರಾಚೀನ ಕಾಲದಲ್ಲಿ ನಮ್ಮ ಹಿರಿಯರು ವಿಜಯದ ನೆನಪಿಗಾಗಿ ವಿಜಯ ಸ್ಮಾರಕಗಳು, ಅಥವಾ ಇನ್ನಾವುದಾದರೂ ಸ್ಮರಣೆಗೋಸ್ಕರ ದೇವಾಲಯಗಳು, ಸ್ತಂಭಗಳು, ಶಾಸನಗಳು, ಬಸದಿಗಳು, ಮಸೀದಿಗಳು, ಮಹಲ್ಗಳು, ಮೂರ್ತಿಗಳು, ಅರಮನೆಗಳು, ಕೋಟೆ-ಕೊತ್ತಲುಗಳನ್ನು ನಿರ್ಮಿಸಿದ್ದಾರೆ. ಇವೇ ನಮ್ಮ ಪ್ರಾಚ್ಯ ಸ್ಮಾರಕಗಳು. ಅವುಗಳನ್ನು ಸಂರಕ್ಷಣೆ ಮಾಡಿಕೊಂಡು ಹೋಗುವುದು ನಮ್ಮ ಹೆಗ್ಗಳಿಗೆ. ಯಾಕೆಂದರೆ ನಮ್ಮ ಪ್ರಾಚೀನರ ಜೀವನ ವ್ಯವಸ್ಥೆಗಳನ್ನು, ಇತಿಹಾಸ ಪರಂಪರೆಯನ್ನು ಅರಿಯಲು ಮೂಲಭೂತವಾದ ಆಕರವಾಗಿರುವಂತವು. ಭಾರತೀಯರು ಕಲೆ-ವಾಸ್ತುಶಿಲ್ಪಗಳಿಗೆ ಹೆಸರುವಾಸಿಯಾಗಿರುವಂತವರು. ಪ್ರಾಚೀನ ಭಾರತೀಯರು ಕಠಿಣ ಶ್ರಮವಹಿಸಿ ಭಾರತದ ಪ್ರಾಚೀನ ವಾಸ್ತುಶಿಲ್ಪಗಳನ್ನು ನಿರ್ಮಿಸಿದರು. ಆದರೆ ವಿದೇಶಿಯರು ಒಂದು ಕ್ಷಣಮಾತ್ರದಲ್ಲಿ ವಾಸ್ತುಶಿಲ್ಪಗಳನ್ನು ಕೆಡವಿ ಹಾಕಿದರು. ಮತ್ತೆ ಹಾಗಾಗಬಾರದು. ನಮ್ಮ ಗತಕಾಲದ ಜೀವನದ ಮೇಲೆ ಮುಂದಿನ ಜೀವನ ನಿಂತಿರುತ್ತದೆ. ಪ್ರಾಚೀನ ಸ್ಮಾರಕಗಳ ಆಧಾರದ ಮೇಲೆ ಅಂದಿನ ಜನರ ವೈಭವದ ಜೀವನ, ರಾಜಕೀಯ, ಸಾಂಸ್ಕೃತಿಕ, ಐತಿಹಾಸಿಕ ಅಂಶಗಳನ್ನು ತಿಳಿಯಬಹುದು.ಆದ್ದರಿಂದ ಅವುಗಳನ್ನು ರಕ್ಷಿಸಬೇಕು. ಕನ್ನಡ ನಾಡಿನಲ್ಲಿ ಹಂಪೆ, ಬಾದಾಮಿ, ಐಹೊಳೆ, ಪಟ್ಟದಕಲ್ಲು, ತಲಕಾಡು, ಶ್ರವಣಬೆಳಗೊಳ, ಮೈಸೂರು,ಬೀದರ್,ಬಿಜಾಪುರ ಮುಂತಾದ ಕಡೆ ಪ್ರಾಚ್ಯ ಸ್ಮಾರಕಗಳನ್ನು ನೋಡಿದಾಗ ಅಂದಿನ ರಾಜ-ಮಹಾರಾಜರ ಇತಿಹಾಸ ಮತ್ತು ಕಲೆ,ಸಂಸ್ಕೃತಿಯನ್ನು ತಿಳಿಯಬಹುದು.

**ಉಪಸಂಹಾರ** : ಭಾರತೀಯರ ಸಂಸ್ಕೃತಿಯ ದ್ಯೂತಕವಾಗಿರುವ ,ಐತಿಹಾಸಿಕ ಮಹತ್ವವನ್ನು ತಿಳಿಸುವ ಪ್ರಾಚೀನ ಕಾಲದ ಸ್ಮಾರಕಗಳನ್ನು ಸಂರಕ್ಷಿಸಿಕೊಂಡು ಹೋಗಬೇಕಾದದ್ದು ನಮ್ಮ ನಿಮ್ಮೆಲ್ಲರ ಜವಬ್ದಾರಿಯಾಗಿದೆ.

## 6) ರಾಷ್ಟ್ರೀಯ ಭಾವೈಕ್ಯತೆ

**ಪೀಠಿಕೆ:** ಜನರು ವಾಸಮಾಡುತ್ತಿರುವ ಒಂದು ನಿರ್ಧಿಷ್ಟವಾದ ಭೌಗೋಳಿಕ ಪ್ರದೇಶವನ್ನು ದೇಶ ಎಂದು ಕರೆಯಬಹುದು. ಎಲ್ಲ ಜನರು ತಾವೆಲ್ಲ ಒಂದೇ ಎಂಬ ಭಾವನೆಗಳನ್ನು ಹೊಂದುವುದು ಐಕ್ಯತೆ. ಅದೇ ರೀತಿ ದೇಶದಲ್ಲಿ ವಾಸಿಸುತ್ತಿರುವ ಜನರೆಲ್ಲರು ತಮ್ಮ ಧರ್ಮ,ಜಾತಿ,ಕುಲ,ಭಾಷೆಗಳನ್ನು ಬದಿಗೊತ್ತಿ ಒಂದೇ ಕುಟುಂಬದ ಸದಸ್ಯರಂತೆ ವಾಸಮಾಡುವುದನ್ನು ರಾಷ್ಟ್ರೀಯ ಭಾವೈಕ್ಯತೆ ಎಂದು ಕರೆಯಬಹುದು. ಭಾರತದಂತಹ ವೈವಿಧ್ಯತೆಗಳಿಂದ ಕೂಡಿರುವ ರಾಷ್ಟ್ರದಲ್ಲಿ ಏಕತೆಯನ್ನು ಸಾಧಿಸುವುದು ಬಹಳ ಮುಖ್ಯವೆನಿಸುತ್ತದೆ.

**ವಿಷಯ ವಿವರಣೆ** : "ಜನನಿ ಜನ್ಮಭೂಮಿಶ್ಚ ಸ್ವರ್ಗಾದಪಿ ಗರಿಯಸಿ" ಎಂಬ ಮಾತಿನಂತೆ ಹೆತ್ತತಾಯಿ

ಹೊತ್ತ ಭೂಮಿಯು ಸ್ವರ್ಗವಿದ್ದಂತೆ.ಇಂತಹ ಹೊತ್ತ ಭೂಮಿಯಲ್ಲಿ ವಾಸಿಸುವ ನಾವೆಲ್ಲರೂ ಒಂದೇ ತಾಯಿಯ ಮಕ್ಕಳಂತೆ ಇದ್ದೇವೆ. ರಾಷ್ಟ್ರದ ಐಕ್ಯತೆಗೆ ರಾಷ್ಟ್ರೀಯ ಭಾವನೆಯೂ ಅಗತ್ಯವಾದದು. ಭಾರತ ಸರ್ವಧರ್ಮಗಳ ನೆಲೆಬೀಡು,ಇಲ್ಲಿ ವಿವಿಧ ಜಾತಿ,ಮತ, ಪಂಥ,ಭಾಷೆ,ಸಂಸ್ಕೃತಿಯ ಜನರು ಇದ್ದಾರೆ.ಇಂತಹ ವೈವಿಧ್ಯತೆಯಿಂದ ಕೂಡಿರುವ ಜನರಲ್ಲಿ ರಾಷ್ಟ್ರೀಯ ಭಾವೈಕ್ಯತೆಯನ್ನು ಮೂಡಿಸುವಲ್ಲಿ ರಾಷ್ಟ್ರೀಯ ಹಬ್ಬಗಳು,ರಾಷ್ಟ್ರಧ್ವಜ,ರಾಷ್ಟ್ರಲಾಂಛನ,ರಾಷ್ಟ್ರಗೀತೆಗಳು ಪ್ರಮುಖಪಾತ್ರವನ್ನು ವಹಿಸುತ್ತವೆ, ಭಾರತದ ಪ್ರತಿಯೊಬ್ಬ ಪ್ರಜೆಯು ತನ್ನ ಸಂಕೀರ್ಣತೆಯನ್ನು ತೊರೆದು ಆಚರಿಸುವ ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ, ಗಾಂಧಿಜಯಂತಿಗಳನ್ನು ಸಾಮೂಹಿಕವಾಗಿ ಆಚರಿಸಿದಾಗ ಐಕ್ಯತೆಯನ್ನು ಸಾಧಿಸಬಹುದು. ರಾಷ್ಟ್ರಗೀತೆ, ರಾಷ್ಟ್ರಧ್ವಜಕ್ಕೆ ಗೌರವವನ್ನು ನೀಡುವುದು , ರಾಷ್ಟ್ರನಾಯಕರ ಉತ್ತಮ ಆದರ್ಶಗಳನ್ನು ಬೆಳೆಸಿಕೊಳ್ಳುವುದು,ರಾಷ್ಟ್ರಕ್ಕೆ ಧಕ್ಕೆಯುಂಟಾದಾಗ ದೇಶದ ಎಲ್ಲ ಪ್ರಜೆಗಳು ಪರಸ್ಪರ ಸಹಾಯ ಸಹಕಾರದಿಂದ ನಡೆದುಕೊಂಡರೆ ರಾಷ್ಟ್ರೀಯ ಭಾವೈಕ್ಯತೆಯನ್ನು ಸಾರಬಹುದಾಗಿದೆ. ಅಲ್ಲದೆ ರಾಷ್ಟ್ರಮಟ್ಟದ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಕೂಡ ರಾಷ್ಟ್ರೀಯ ಭಾವೈಕ್ಯತೆಯನ್ನು ತರಬಲ್ಲವು.

**ಉಪಸಂಹಾರ** : ಎಲ್ಲರೂ ಎಲ್ಲರಿಗಾಗಿ ಎಂಬ ಮಂತ್ರ ದಿಂದ ,ಕಣ್ಣು ಬೇರೆಯಾದರೂ ನೋಟ ಒಂದೇ,ಭಾಷೆ ಬೇರೆಯಾದರೂ ಭಾವ ಒಂದೇ ಜಾತಿ.ಕುಲ.ಮತ,ಧರ್ಮ ಬೇರೆ ಬೇರೆಯಾದರೂ ಬಾಳುವ ದೇಶ ಒಂದೆಯಾಗಿದೆ ಎಂದ ಮೇಲೆ ನಾವೆಲ್ಲಾ ಒಂದೆ ತೊಟ್ಟಿಲಲ್ಲಿ ಬೆಳೆವ ಜನರು ನಾವು ಭಾರತೀಯರು ಐಕ್ಯತೆಯ ಮಂತ್ರ ಪಠಿಸುವವರಾಗಬೇಂಬುದು ನಮ್ಮ ನಿಮ್ಮೆಲ್ಲರ ಆಶಯವಾಗಬೇಕಿದೆ.

## 7. ಗ್ರಾಮಸ್ವರಾಜ್ಯ

**ಪೀಠಿಕೆ** : ಸ್ವರಾಜ್ಯ ಅಂದರೆ ಸ್ವತಂತ್ರ ರಾಜ್ಯ. ಗ್ರಾಮ ಸ್ವರಾಜ್ಯ ಎಂದರೆ ಸ್ವತಂತ್ರ ರಾಜ್ಯಗಳ ರೀತಿಯಲ್ಲಿ ಸ್ವತಂತ್ರಗ್ರಾಮಗಳಾಗುವುದು ಎಂದರ್ಥ. ಪ್ರತಿಯೊಂದು ಗ್ರಾಮಗಳು ಸ್ವತಂತ್ರವಾಗಿ ಸ್ವಯಂ ಆಗಿ ಆಡಳಿತದ ಕೇಂದ್ರಗಳಾಗಿ, ತಮ್ಮ ಗ್ರಾಮದ ಸಮಗ್ರ ಅಭಿವೃದ್ಧಿ ಮತ್ತು ಸುಭಿಕ್ಷತೆಗೆ ಅವಕಾಶ ಮಾಡಿಕೊಳ್ಳುವುದು ಇದರ ಪರಿಕಲ್ಪನೆಯಾಗಿದೆ.

**ವಿಷಯ ನಿರೂಪಣೆ** : ಭಾರತ ಗ್ರಾಮಗಳ ದೇಶ. ಗ್ರಾಮಗಳು ಅಭಿವೃದ್ಧಿಯಾದರೆ ದೇಶ ಅಭಿವೃದ್ಧಿಯಾದೀತು. ಆದ್ದರಿಂದ ಗ್ರಾಮಗಳ ಅಭಿವೃದ್ಧಿಗೆ ಅವಶ್ಯವಾದ ಸಂಪನ್ಮೂಲಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒದಗಿಸಿಕೊಡಬೇಕು. ಹಾಗೆಯೇ ತಮ್ಮ ತಮ್ಮ ಗ್ರಾಮಗಳ ಅಭಿವೃದ್ಧಿಗೆ ಅವಶ್ಯವಾದ ಯೋಜನೆಗಳನ್ನು ಆಯಾಯ ಗ್ರಾಮಗಳೆ ರೂಪಿಸಿಕೊಳ್ಳುವುದು ಉತ್ತಮ. ಇದಕ್ಕಾಗಿ ಸ್ಥಳಿಯವಾಗಿ ಗ್ರಾಮ ಪಂಚಾಯತಿಗಳು ಇರುವುದನ್ನು ಮನಗಾಣಬಹುದು. ಪ್ರಾಚೀನ ಕಾಲದಿಂದಲೂ ಗ್ರಾಮದ ಮುಖಂಡರು ಸೇರಿ ತಮ್ಮ ಗ್ರಾಮದ ಸಮಸ್ಯೆಗಳನ್ನು ತಾವೇ ಬಗೆಹರಿಸಿಕೊಳ್ಳುತ್ತಿದ್ದನ್ನು ಇತಿಹಾಸದಲ್ಲಿ ನೋಡಬಹುದು.

ಪ್ರತಿಯೊಂದು ಗ್ರಾಮಗಳು ಬೇರೆಯ ಆಡಳಿತ ಕೇಂದ್ರಗಳ ಮೇಲೆ ಅವಲಂಬಿತವಾಗದೆ ಸ್ವಾವಲಂಬನೆಯಿಂದ ತಮ್ಮ ಗ್ರಾಮಗಳನ್ನು ಅಭಿವೃದ್ಧಿಯತ್ತ ಕೊಂಡೊಯ್ಯಲು ಪರಿಶ್ರಮಿಸಬೇಕು. ಗ್ರಾಮದ ಜನರೆಲ್ಲ ಆಡಳಿತದಲ್ಲಿ ಪಾಲ್ಗೊಳ್ಳಬೇಕು. ಸಲಹೆ, ಸಹಕಾರ, ಸಂಪನ್ಮೂಲಗಳನ್ನು ನೀಡಬೇಕು ಮತ್ತು ಆಡಳಿತದ ಮುಖ್ಯಸ್ಥರು ಪಡೆದು ಸದುಪಯೋಗ ಮಾಡಬೇಕು ಅಂದಾಗ ಮಾತ್ರ ಗ್ರಾಮಸ್ವರಾಜ್ಯದ ಪರಿಕಲ್ಪನೆ ಅರ್ಥಪೂರ್ಣವಾಗುತ್ತದೆ. ಮಹಾತ್ಮ ಗಾಂಧೀಜಿಯವರು ಗ್ರಾಮಸ್ವರಾಜ್ಯ ಪರಿಕಲ್ಪನೆಗೆ ಬಹು ಆದ್ಯತೆ ನೀಡಿದ್ದರು. ತಮ್ಮ ತಮ್ಮ ಗ್ರಾಮದ ಸ್ವಚ್ಛತೆ, ನೀರಿನ ಸೌಕರ್ಯ, ಶಿಕ್ಷಣದ ವ್ಯವಸ್ಥೆ, ಆರೋಗ್ಯ ವ್ಯವಸ್ಥೆ, ರಸ್ತೆಗಳ ನಿರ್ಮಾಣ ಮುಂತಾದ ವ್ಯವಸ್ಥೆಗಳನ್ನು ಗ್ರಾಮದವರೆಲ್ಲ ಒಟ್ಟಾಗಿ ಮಾಡಿಕೊಂಡರೆ ಗ್ರಾಮಗಳ ಅಭಿವೃದ್ಧಿ ಸಾಧ್ಯವೆಂದು ಹೇಳಬಹುದು. ಅಲ್ಲದೆ ಸರ್ಕಾರಗಳು ಕೂಡ ಗ್ರಾಮಾಭಿವೃದ್ಧಿ ಯೋಜನೆಗಳನ್ನು ಹಾಕಿಕೊಂಡು ಸಮಗ್ರವಾಗಿ ಗ್ರಾಮಾಭಿವೃದ್ಧಿಗೆ ಸಹಾಯ ಮಾಡುವುದರಿಂದ ದೇಶದ ಅಭಿವೃದ್ಧಿ ಸಾಧ್ಯವಾಗುತ್ತದೆ.

**ಉಪಸಂಹಾರ** : ಗ್ರಾಮಗಳ ದೇಶವಾದ ಭಾರತವು ಅಭಿವೃದ್ಧಿ ಹೊಂದಿದೆ ಎಂದು ಹೇಳಬೇಕಾದರೆ ಮೊದಲು ಗ್ರಾಮಗಳು ಅಭಿವೃದ್ಧಿ ಹೊಂದಬೇಕು. ಅದಕ್ಕೆ ಗ್ರಾಮಗಳೆಲ್ಲವೂ ಸ್ವರಾಜ್ಯವಾಗಿ ಕಾರ್ಯನಿರ್ವಹಿಸಬೇಕು. ಇದಕ್ಕೆ ಗ್ರಾಮವಾಸಿಗಳ ಸಹಕಾರ ದಿಂದ ಗಾಂಧೀಜಿಯವರ ಗ್ರಾಮಸ್ವರಾಜ್ಯದ ಕನಸನ್ನು ನನಸು ಮಾಡಬಹುದೆಂದು ಹೇಳಬಹುದು.

## 8. ತ್ಯಾಜ್ಯವಸ್ತು ನಿರ್ವಹಣೆ

**ಪೀಠಿಕೆ** : ತ್ಯಾಜ್ಯವಸ್ತು ಎಂದರೆ ತ್ಯಜಿಸಿದ ವಸ್ತು ಎಂದು ಅರ್ಥೈಸಬಹುದು. ಮಾನವ ಬಳಸಿಬಿಟ್ಟ ಅನುಪಯುಕ್ತ ವಸ್ತುಗಳು ತ್ಯಾಜ್ಯವಸ್ತುಗಳಲ್ಲಿ ಸೇರ್ಪಡೆಗೊಳ್ಳುತ್ತವೆ. ಇವುಗಳನ್ನು ಸರಿಯಾದ ರೀತಿಯಲ್ಲಿ ವಿಲೇವಾರಿ ಅಥವಾ ಮರುಬಳಕೆ ಮಾಡುವುದನ್ನು ನಿರ್ವಹಣೆ ಎಂದು ಹೇಳಬಹುದು. ತ್ಯಾಜ್ಯ ವಸ್ತುಗಳು ಕೆಲವೊಂದು ಸಾರಿ ಪರಿಸರವನ್ನು ಕಲುಷಿತಗೊಳಿಸುವದರೊಂದಿಗೆ ಮಾನವ ಸೇರಿದಂತೆ ಇತರೆ ಜೀವಿಗಳ ಅನಾರೋಗ್ಯಕೆ ಕಾರಣವಾಗುತ್ತವೆ. ಆದ್ದರಿಂದ ಅವುಗಳ ಸರಿಯಾದ ನಿರ್ವಹಣೆ ಮಾಡುವುದು ಅತಿ ಅವಶ್ಯವಾದದ್ದು ಎಂದು ಹೇಳಬಹುದು.

**ವಿಷಯ ನಿರೂಪಣೆ :** ಆರೋಗ್ಯಕರ ವಾತಾವರಣಕ್ಕೆ ತ್ಯಾಜ್ಯವಸ್ತುಗಳ ನಿರ್ವಹಣೆ ಬಹಳ ಮುಖ್ಯವಾಗಿರುತ್ತದೆ. ತ್ಯಾಜ್ಯವಸ್ತುಗಳು ಕೆಲವೊಂದು ಸಾರಿ ಮರುಬಳಕೆಗೆ ಯೋಗ್ಯವಾಗಿರುತ್ತವೆ. ಅಂತಹ ವಸ್ತುಗಳನ್ನು ಮರುಬಳಕೆ ಮಾಡಿಕೊಳ್ಳಬೇಕು. ಸರ್ಕಾರಗಳು, ಸ್ಥಳೀಯ ಸಂಸ್ಥೆಗಳು ಹಾಗೂ ತ್ಯಾಜ್ಯವಸ್ತು ಉತ್ಪಾದಿಸುವ ಖಾಸಗಿ ಸಂಸ್ಥೆಗಳು, ಕೈಗಾರಿಕೆಗಳು ತ್ಯಾಜ್ಯವಸ್ತು ನಿರ್ವಹಣ ಘಟಕಗಳನ್ನು ಸ್ಥಾಪಿಸಿ ಸೂಕ್ತವಾಗಿ ನಿರ್ವಹಣೆ ಮಾಡಬೇಕು. ತ್ಯಾಜ್ಯವಸ್ತುಗಳನ್ನು ಘನ ಮತ್ತು ದ್ರವ ತ್ಯಾಜ್ಯವಸ್ತುಗಳ'ನ್ನಾಗಿ ಸೂಕ್ತ ರೀತಿಯಲ್ಲಿ ಬೇರ್ಪಡಿಸಿ ವಿಲೆವಾರಿ ಮಾಡಬೇಕು. ಸಾಧ್ಯವಾದಲ್ಲಿ ಮರುಬಳಕೆಗೆ ಮೊದಲ ಆದ್ಯತೆ ನೀಡಬೇಕು. ದೊಡ್ಡ ದೊಡ್ಡ ನಗರಗಳಲ್ಲಿ ಕಸದ ಸಮಸ್ಯೆ ದೊಡ್ಡದೆ ಆಗಿದೆ. ಪ್ಲಾಸ್ಟಿಕ್, ಫೈಬರ್, ರಬ್ಬರ್, ಗಾಜು, ಕಬ್ಬಿಣ ಮತ್ತು ಇತರ ಲೋಹದ ತ್ಯಾಜ್ಯವಸ್ತುಗಳನ್ನು ಮರುಬಳಕೆ ಮಾಡಿಕೊಂಡಲ್ಲಿ ಕಸದ ಸಮಸ್ಯೆಯನ್ನು ಸ್ವಲ್ಪಮಟ್ಟಿಗೆ ದೂರಮಾಡಬಹುದು. ತ್ಯಾಜ್ಯವಸ್ತುಗಳನ್ನು ಬಳಸಿಕೊಂಡು ಅಲಂಕಾರಿಕ ವಸ್ತುಗಳು, ಇತರೆ ಗೃಹಬಳಕೆಯ ವಸ್ತುಗಳನ್ನು ತಯಾರಿಸಬಹುದು. ಕೆಲವೊಂದು ತ್ಯಾಜ್ಯವಸ್ತುಗಳನ್ನು ಸುಡುವುದರಿಂದ , ಊತು ಹಾಕುವುದರಿಂದ ಕೆಲವು ವಿಷಕಾರಿ ರಾಸಾಯನಿಕ ಅನಿಲಗಳು ಬಿಡುಗಡೆಯಾಗಿ ಪರಿಸರ ಮಾಲಿನ್ಯ ಉಂಟಾಗಿ ಜೀವಿಗಳ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತವೆ. ಆದ್ದರಿಂದ ಹಾನಿಕಾರಕ ತ್ಯಾಜ್ಯವಸ್ತುಗಳನ್ನು ವೈಜ್ಞಾನಿಕ ರೀತಿಯಲ್ಲಿ ಪರಿಸರಕ್ಕೆ ಮತ್ತು ಜೀವಿಗಳಿಗೆ ಹಾನಿ ಮಾಡದಂತೆ ನಿರ್ವಹಣೆ ಮಾಡಿದಿರೆ ಒಳಿತು.

**ಉಪಸಂಹಾರ :** ಪ್ರತಿಯೊಬ್ಬರಲ್ಲಿ ತ್ಯಾಜ್ಯವಸ್ತುಗಳ ನಿರ್ವಹಣೆ ಹೇಗೆ ಮಾಡಬೇಕು ಎಂಬುದರ ಬಗ್ಗೆ ಅರಿವು ಮಾಡಿಸಬೇಕು ಅಂದಾಗ ಮಾತ್ರ ನಿರ್ವಹಣೆ ಸುಲಭವಾಗುತ್ತದೆ. ನಮ್ಮ ಆರೋಗ್ಯ ನಮ್ಮ ಕೈಯಲ್ಲಿ ಆದ್ದರಿಂದ ನಮ್ಮಿಂದ ಉಂಟಾಗುವ ತ್ಯಾಜ್ಯವಸ್ತುಗಳನ್ನು ಸೂಕ್ತ ರೀತಿಯಲ್ಲಿ ಮರುಬಳಕೆ ಮತ್ತು ವಿಲೇವಾರಿ ಮಾಡಿದ್ದಲ್ಲಿ ಪರಿಸರ ಸಂರಕ್ಷಣೆ ನಮ್ಮ ನಮ್ಮ ಆರೋಗ್ಯ ರಕ್ಷಣೆ ಎಂದು ಹೇಳಬಹುದು.

## 9. ಮಹಿಳಾ ಸಬಲೀಕರಣ

**ಪೀಠಿಕೆ :** ಮಹಿಳೆಯರಲ್ಲಿ ಮಾನಸಿಕವಾಗಿ , ಬೌದ್ಧಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಸಬಲತೆವನ್ನು ಹೆಚ್ಚಿಸಿ ಅವರು ಆತ್ಮ ವಿಶ್ವಾಸವನ್ನು ಹೊಂದುವಂತೆ ಮಾಡುವುದೇ ಮಹಿಳಾ ಸಬಲೀಕರಣ ಎಂದು ಹೇಳಬಹುದು. ಇಂದು ಪುರುಷರಷ್ಟೆ ಮಹಿಳೆಯರು ಸಮಾನರಾಗಿದ್ದು ಪ್ರತಿಯೊಂದು ಕ್ಷೇತ್ರಗಳಲ್ಲಿ ಪುರುಷರಷ್ಟೆ ಸಾಧನೆಯನ್ನು ಮಾಡುವ ಸಾಮರ್ಥ್ಯ ಹೊಂ ದಿದ್ದಾರೆ. ಸಮಾನತೆ ಎನ್ನುವುದು ಮಹಿಳೆಯರಿಗೂ ಅನ್ವಯಿಸುತ್ತದೆ.

**ವಿಷಯ ನಿರೂಪಣೆ :** ಯಾವುದೇ ರೀತಿಯ ಶೋಷಣೆ , ಅಸಮಾನತೆಗೆ ಒಳಗಾಗದೆ ಶಿಕ್ಷಣ, ಉದ್ಯೋಗ, ವಿವಾಹ ಜೀವನ, ಸಾಮಾಜಿಕ, ರಾಜಕೀಯ ಮತ್ತು ಆಡಳಿತದಲ್ಲಿ ಪಾಲ್ಗೊಂಡು ಆತ್ಮ ವಿಶ್ವಾಸದಿಂದ ಬಾಳುವ ಶಕ್ತಿಯೇ ಮಹಿಳಾ ಸಬಲತೆ. ನಾಲ್ಕು ಗೋಡೆಗಳ ಮಧ್ಯೆ ಬಿಟ್ಟು ಎಲ್ಲರ ಜೊತೆಯಾಗಿ ಬೆರೆತು ಕಾರ್ಯನಿರ್ವಹಿಸುವ ಸಾಮರ್ಥ್ಯವನ್ನು ಇಂದಿನ ಮಹಿಳೆಯರು ಹೊಂದಿರುವುದು ಮಹಿಳಾ ಸಬಲೀಕರಣವನ್ನು ಎತ್ತಿ ತೋರಿಸುತ್ತದೆ. ಮೊದಲು ಮಹಿಳೆಯರು ಶೈಕ್ಷಣಿಕವಾಗಿ ಸಬಲರಾಗಬೇಕು. ಈ ಉದ್ದೇಶದಿಂದ ಉಚಿತ ಶಿಕ್ಷಣವನ್ನು ನೀಡಲಾಗುತ್ತಿದೆ. ಮಹಿಳೆಯರ ಶಿಕ್ಷಣಕ್ಕಾಗಿ ಆದ್ಯತೆ ನೀಡಲಾಗಿದೆ. ಮಹಿಳೆಯರ ವಿಕಾಸವಾದಲ್ಲಿ ಮನೆಯಲ್ಲಿನ ಮಕ್ಕಳು ಸಂಸ್ಕಾರವಂತರಾಗಲು ಸಾಧ್ಯವಿದೆ. ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ಸ್ಥಾಪಿತ ಸರ್ಕಾರಗಳು ಸಾಕಷ್ಟು ಯೋಜನೆಗಳನ್ನು ಜಾರಿಗೆ ತಂದಿರುವುದನ್ನು ನೋಡಬಹುದು. ಸ್ತ್ರೀಶಕ್ತಿ ಯೋಜನೆ, ಮಹಿಳಾ ಸ್ವಸಹಾಯ ಸಂಘಗಳು ಇವೆ. ಮಹಿಳೆಯರಿಗಾಗಿ ಸೂಕ್ತವಾದ ಮತ್ತು ಮಾನವೀಯತೆಯಿಂದ ಕೂಡಿದ ಕೆಲಸದ ವಾತಾವರಣವನ್ನು ಮತ್ತು ಮಾತೃತ್ವದ ಸವಲತ್ತುಗಳನ್ನು ನೀಡುವಂತಹ ಅವಕಾಶಗಳನ್ನು ಕಲ್ಪಿಸಲಾಗಿದೆ.

ಸಾಮಾಜಿಕವಾಗಿ ಮುಂದುವರಿಯಲು ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಅವಕಾಶ ನೀಡಲಾಗಿದೆ. ಸಮಾಜದ ಅರಿವು ಅವರಿಗಾಗಿ ಎಲ್ಲ ಕಾರ್ಯಗಳಲ್ಲಿ ತೊಡಗುವಂತಾಗಬೇಕು. ಲಿಂಗ ತಾರತಮ್ಯವನ್ನು ಹೋಗಲಾಡಿಸಿ ಪ್ರತಿಯೊಂದು ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಅವಕಾಶ ನೀಡಲಾಗಿದೆ. ಕೆಲವೊಂದು ಸಾಂಪ್ರದಾಯಿಕ ಕಾರಣಗಳಿಂದ ಮಹಿಳೆಯರು ಹಿಂದುಳಿ ದಿದ್ದಾರೆ ಎನ್ನುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಆದ್ದರಿಂದ ಅನವಶ್ಯಕವೆನಿಸಿದ ಸಾಂಪ್ರದಾಯಕ ಚೌಕಟ್ಟನ್ನು ಮೀರಿ ಇಂದಿನ ಮಹಿಳೆಯರು ಸಬಲರಾಗಬೇಕಾಗುತ್ತದೆ. ಮಹಿಳೆಯರ ಪರವಾಗಿ ಕಾಯಿದೆ–ಕಾನೂನುಗಳು ರೂಪುಗೊಂಡಿವೆ. ಮಹಿಳೆಯರ ಸ್ವಾವಲಂಬನೆ ಮತ್ತು ಕಲ್ಯಾಣಕ್ಕಾಗಿ ಇಲಾಖೆಯೇ ಇದೆ. ಮಹಿಳೆಯರ ರಕ್ಷಣೆಗಾಗಿ ಬೇಟಿ ಬಚಾವೋ ,ಬೇಟಿಪಡಾವೋಯಂತಹ ಯೋಜನೆಗಳನ್ನು ಜಾರಿ ತಂದಿರುವುದುನ್ನು ನೋಡಬಹುದು. ಮಹಿಳೆಯರು ಕೂಡ ಸ್ವಉದ್ಯೋಗ ಮಾಡಲು ಅವಕಾಶ ನೀಡಿ ಸ್ವಾವಲಂಬಿಯಾಗಿ ಬದುಕಲು ಅವಕಾಶ ನೀಡಬೇಕು. ಮಹಿಳೆಯ ಸಬಲೀಕರಣಕ್ಕಾಗಿ ರಾಜಕೀಯವಾಗಿ, ಔದ್ಯೋಗಿಕವಾಗಿ, ಶೈಕ್ಷಣಿವಾಗಿ ಮಹಿಳಾ ಮೀಸಲಾತಿಯನ್ನು ಕೂಡ ನೀಡಲಾಗಿದೆ. ತೊಟ್ಟಿಲನ್ನು ತೂಗುವ ಕೈ ಜಗತ್ತನ್ನೆ ಆಳಬಲ್ಲದು. ಆದ್ದರಿಂದ ಮಹಿಳೆಯರ ಸಬಲೀಕರಣವಾದರೆ ಜಗತ್ತು ಉದ್ಧಾರವಾದೀತು.

**ಉಪಸಂಹಾರ** : ಮಹಿಳೆಯರ ಸಶಕ್ತರಾದರೆ ದೇಶವೂ ಸಶಕ್ತವಾಗುತ್ತದೆ. ಆದ್ದರಿಂದ ಮಹಿಳೆಯರಿಗೆ ಸಬಲರಾಗಲೂ ಅವಕಾಶ ನೀಡಬೇಕು. ಒಬ್ಬ ಮಹಿಳೆಯು ಶಕ್ತಿವಂತಳಾಗಿ, ಸ್ವತಂತ್ರವಾಗಿ ತನ್ನ ಇಚ್ಛೆಯಂತೆ ಸ್ವಾವಲಂಬಿಯಾಗಿ ಬಾಳುವ ಸ್ಥಿತಿಯನ್ನು ಅವರಿಗೆ ನೀಡಿದಾಗ ಮಹಿಳಾ ಸಬಲೀಕರಣ ಸಾಧ್ಯವೆಂದು ಹೇಳಬಹುದು.

## 10. ಅಕ್ಷರ ದಾಸೋಹ ಮತ್ತು ಕ್ಷೀರ ಭಾಗ್ಯಗಳ ಸಾಮಾಜಿಕ ಮಹತ್ವ

**ಪೀಠಿಕೆ** : ಸದೃಢವಾದ ದೇಹದಲ್ಲಿ ಸದೃಢವಾದ ಮನಸ್ಸು ಇರುತ್ತದೆ ಎನ್ನುವ ಹಾಗೆ ಶಾಲಾ ಮಕ್ಕಳು ಶಾರೀರಿಕವಾಗಿ ಮತ್ತು ಮಾನಸಿಕವಾಗಿ ಸದೃಢ ರಾಗಲು ಅಕ್ಷರದಾಸೋಹ ಮತ್ತು ಕ್ಷೀರಭಾಗ್ಯಗಳಂತಹ ಯೋಜನೆಗಳನ್ನು ಕೇಂದ್ರ ಮತ್ತು ರಾಜ್ಯಸರ್ಕಾರಗಳು ಜಾರಿಗೊಳಿಸಿವೆ. ಇದರಿಂದ ಶಿಕ್ಷಣ ಪಡೆಯುವ ಮಕ್ಕಳ ಆಸಕ್ತಿಗೆ ಪ್ರೇರಣೆಯಾಗಬಲ್ಲವು.

**ವಿಷಯ ನಿರೂಪಣೆ** : ಅಕ್ಷರ ದಾಸೋಹ ಎಂಬುದು ಶಾಲಾ ಮಕ್ಕಳಿಗೆ ಮಧ್ಯಾಹ್ನ ಬಿಸಿಯೂಟ ನೀಡುವ ಯೋಜನೆಯಾಗಿದೆ. ಅದೇ ರೀತಿ ಕ್ಷೀರಭಾಗ್ಯ ಎಂಬುದು ಹಾಲು ನೀಡುವ ಯೋಜನೆಯಾಗಿದೆ. ಶಿಶುವಿಹಾರದಿಂದ ಹತ್ತನೆಯ ತರಗತಿವರೆಗೆ ಓದುತ್ತಿರುವ ಸರ್ಕಾರಿ/ಅನುದಾನಿತ ಶಾಲಾ ವಿದ್ಯಾರ್ಥಿಗಳಿಗೆ ಈ ಯೋಜನೆಗಳು ಅತ್ಯಂತ ಉಪಯುಕ್ತವಾಗಿವೆ. ಗ್ರಾಮೀಣ ಭಾಗದಿಂದ ಬರುವಂತಹ ವಿದ್ಯಾರ್ಥಿಗಳು ಹೆಚ್ಚಿನದಾಗಿ ಬಡತನದಿಂದ ಬಂದವರಾಗಿರುತ್ತಾರೆ. ಅಂತಹ ಮಕ್ಕಳಿಗೆ ಮಧ್ಯಾಹ್ನ ಬಿಸಿಯೂಟ ನೀಡುವುದರಿಂದ ಅವರ ವಿದ್ಯಾಭ್ಯಾಸಕ್ಕೆ ಸಹಕಾರಿಯಾಗುತ್ತದೆ. ದೂರದ ಹಳ್ಳಿಗಳಿಂದ ಶಾಲೆಗೆ ಬರುವ ಪ್ರತಿಯೊಂದು ಮಗು ಉಪವಾಸವಿರಬಾರದು, ಅಪೌಷ್ಠಿಕತೆಯಿಂದ ಬಳಲಬಾರದು ಎಂಬುದು ಸರ್ಕಾರಗಳ ಅಭಿಲಾಷೆಯಾಗಿದೆ. ಈ ನಿಟ್ಟಿನಲ್ಲಿ ಇಂತಹ ಯೋಜನೆಗಳು ಸಹಕಾರಿಯಾಗಬಲ್ಲವು. ಶಾಲೆಯಲ್ಲಿ ವಿದ್ಯಾರ್ಥಿಗಳು ಹೆಚ್ಚಿನ ಚಟುವಟಿಕೆಯಿಂದ ಇರಲು ಮತ್ತು ಕಲಿಕೆಯಲ್ಲಿ ಆಸಕ್ತಿ ಹೊಂದಲು, ಪ್ರತಿನಿತ್ಯ ಶಾಲೆಗೆ ಹಾಜರಾಗುವಂತೆ ಮಾಡಲು ಉಪಯುಕ್ತ ಯೋಜನೆಗಳಾಗಿವೆ. ಮಕ್ಕಳು ಹಾಲನ್ನು ಕುಡಿಯುವದರಿಂದ ಹಲ್ಲುಗಳು, ಮೂಳೆಗಳು ಗಟ್ಟಿಯಾಗಿ ಸದೃಢದೇಹ ಹೊಂದುತ್ತಾರೆ. ಇದರ ಜೊತೆಗೆ ಮಾನಸಿಕವಾಗಿ, ಭೌದ್ಧಿಕವಾಗಿ ಬೆಳವಣಿಗೆ ಹೊಂದಲು ಸಹಕಾರಿಯಾಗುತ್ತದೆ. ಈ ಯೋಜನೆಗಳು ಬಂದ ನಂತರ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಮತ್ತು ಹಾಜರಾತಿ ಪ್ರಮಾಣ ಹೆಚ್ಚಾಗಿ ಶಿಕ್ಷಣದ ಗುಣಮಟ್ಟ ಸುಧಾರಣೆ ಕಂಡುಬರುತ್ತಿದೆ.

**ಉಪಸಂಹಾರ** : ಆರೋಗ್ಯವಂತ ಮಕ್ಕಳು ದೇಶದ ಸಂಪತ್ತು, ಇಂತಹ ಮಕ್ಕಳು ದೇಶದ ಸಂಪತ್ತು ಆಗಬೇಕಾದರೆ ಅವರಲ್ಲಿ ಶಿಕ್ಷಣ ವೃದ್ಧಿಯಾಗಬೇಕು. ಶಿಕ್ಷಣದಲ್ಲಿ ಆಸಕ್ತಿಯಾಗಬೇಕಾದರೆ ಮಾನಸಿಕವಾಗಿ ಸದೃಢವಾಗಬೇಕು, ಮಾನಸಿಕವಾಗಿ ಸದೃಢವಾಗಬೇಕಾದರೆ ಪೌಷ್ಠಿಕತೆ ಅವಶ್ಯಕ ಅಂತಹ ಪೌಷ್ಠಿಕತೆ ದೊರೆಯಬೇಕಾದರೆ ಇಂತಹ ಯೋಜನೆಗಳು ಸಹಕಾರಿಯಾಗಿವೆ ಎಂದು ಹೇಳಬಹುದಾಗಿದೆ.

## 11. ವರದಕ್ಷಿಣೆ ಒಂದು ಸಾಮಾಜಿಕ ಪಿಡುಗು

**ಪೀಠಿಕೆ** : ವಿವಾಹದ ಸಂದರ್ಭದಲ್ಲಿ ಅಥವಾ ಮುಂಚಿತವಾಗಿ ವಧುವಿನ ಕಡೆಯವರು ವರನಿಗೆ ನೀಡುವ ಹಣ,ಬಂಗಾರ,ವಸ್ತ್ರಗಳು, ನಿವೇಶನ , ವಾಹನ, ಉದ್ಯೋಗ ಕೊಡಿಸುವ ಭರವಸೆ ಮುಂತಾದ ಉಡುಗೊರೆಗಳನ್ನು ವರದಕ್ಷಿಣೆ ಎನ್ನುವರು. ಈಗಿನ ಸಮಾಜದಲ್ಲಿ ಇದೊಂದು ಫ್ಯಾಶನ್ ಪಿಡುಗು ಎಂದೇ ಹೇಳಬಹುದು. ಇದೊಂದು ಸಾಮಾಜಿಕ ಪಿಡುಗಾಗಿದ್ದು, ಸಮಾಜದಲ್ಲಿ ಹೆಣ್ಣು ಹೆತ್ತ ಬಡವರು ತಮ್ಮ ಮಗಳ ಮದುವೆ ಮಾಡಲು ಕಣ್ಣೀರು ಸುರಿಸುವುದರೊಂದಿಗೆ ಯಮಪಾಶವಾಗಿದೆ.

**ವಿಷಯ ವಿವರಣೆ** : ಮಾನವನ ಭೋಗ ಲಾಲಸೆಗೆ ಎಷ್ಟಿದ್ದರೂ ಸಾಲದು .ಅದು ಮದುವೆಯಾಗುವಾಗ ವಧುವಿನ ಕಡೆಯವರನ್ನು ವರದಕ್ಷಿಣೆಗಾಗಿ ಪೀಡಿಸುವುದು ಸಾಮಾನ್ಯವಾಗಿ ಬಿಟ್ಟಿದೆ. ಪೋಷಕರು ಮಗಳ ಸುಖವಾಗಿರಲೆಂದು ವರದಕ್ಷಿಣೆ ನೀಡುವುದು ಅಷ್ಟೆ ಸಾಮಾನ್ಯವಾಗಿದೆ. ಇದರಿಂದ ಹೆಣ್ಣು ಮಕ್ಕಳು ಹುಟ್ಟುವುದೇ ಬೇಡವೆಂಬ ಮನೋಭಾವ ಬಡವರಲ್ಲಿ ಹುಟ್ಟುವಂತೆ ಮಾಡಿದೆ. ಕಾನೂನಿನ ಪ್ರಕಾರ ವರದಕ್ಷಿಣೆ ಕೊಡುವುದು ಮತ್ತು ತೆಗೆದುಕೊಳ್ಳವುದು ಅಪರಾದ. 1961ರಲ್ಲಿಯೇ ವರದಕ್ಷಿಣೆ ವಿರೋಧಿ ಕಾನೂನನ್ನು ಜಾರಿಗೆ ತಂದಿದ್ದರೂ ಅದನ್ನು ಸರಿಯಾಗಿ ಬಳಸಲು ಕನ್ಯಾಪಿತೃಗಳು ಮುಂದೆ ಬರುತ್ತಿಲ್ಲ. ಏಕೆಂದರೆ ತಮ್ಮ ಮಗಳ ಮುಂದಿನ ಜೀವನ ನಡೆಯುವುದು ಕಷ್ಟವಾಗುತ್ತದೆ ಎಂದು ಹೆದರುತ್ತಾರೆ. ದಿನನಿತ್ಯ ಸಮೂಹ ಮಾಧ್ಯಮಗಳಲ್ಲಿ ವರದಕ್ಷಿಣೆಯ ಕಿರುಕುಳದ ಆರೋಪಗಳು ಬರುತ್ತಿರುತ್ತವೆ. ಕೆಲವರಿಗೆ ಶಿಕ್ಷೆಯಾದ ಬಗ್ಗೆ ಪ್ರಕರಣಗಳು ಇವೆ, ಆದರೂ ಈ ಪಿಡುಗನ್ನು ಸಂಪೂರ್ಣವಾಗಿ ನಿವಾರಣೆ ಮಾಡುವುದು ಸಾಧ್ಯವಾಗುತ್ತಿಲ್ಲ. ಇದನ್ನು ನಿವಾರಿಸಬೇಕಾದರೆ ಇಂದಿನ ಹೆಣ್ಣು ಮಕ್ಕಳು ಸ್ವಾವಲಂಬನೆ ಹಾದಿಯನ್ನು ತುಳಿಯಲು ಸಿದ್ಧರಾಗಬೇಕು, ಸಮಾನತೆಗಾಗಿ ಹೋರಾಡುವ ಸ್ತ್ರೀಸಂಘಗಳು ವರದಕ್ಷಣೆ ಕೊಡುವ ವಿಚಾರಗಳನ್ನು ಮುಂದಿಟ್ಟುಕೊಂಡು ಹೋರಾಡಿ ಹೋಗಲಾಡಿಸಬೇಕು. ಹೆಣ್ಣು ಅಬಲೆಯಲ್ಲ ಸಬಲೆ ಎಂಬ ಧೈರ್ಯ ಹೆಣ್ಣು ಮಕ್ಕಳಲ್ಲಿ ಮೂಡುವುದು ಅನಿವಾರ್ಯವಾಗಿದೆ. ಒಟ್ಟಿನಲ್ಲಿ ಹೆಣ್ಣು ಮಕ್ಕಳು ವಿದ್ಯಾವಂತರಾಗಿ, ತಾವು ದುಡಿಮೆ ಮಾಡಲು ಕಲಿತರೆ ಯಾವುದೇ ಸ್ವಾಯತ್ತ ಜೀವನ ನಡೆಸಬಹುದಾಗಿದೆ. ಹೆಣ್ಣು ಮಕ್ಕಳು ತನ್ನ ಕಾಲ ಮೇಲೆ ತಾನು ನಿಲ್ಲುವಷ್ಟು ಆರ್ಥಿಕ ಸ್ವಾವಲಂಬನೆ ಪಡೆದರೆ

ವರದಕ್ಷಿಣೆ ಪಿಡುಗು ತನ್ನಿಂತಾನೇ ನಿರ್ಮೂಲನೆ ಹೊಂದುತ್ತದೆ. ಅದಕ್ಕಿಂತ ಹೆಚ್ಚಿನದಾಗಿ ವಿದ್ಯಾವಂತ ಯುವಕರು ವರದಕ್ಷಿಣೆ ಪಡೆಯುವುದನ್ನು ತೆಜಿಸಿ ಸಮಾಜಕ್ಕೆ ಮಾದರಿಯಾಗಬೇಕು. ಮತ್ತುಸರ್ಕಾರಗಳು ಪ್ರಬಲ ಕಾನೂನು ಜಾರಿಗೊಳಿಸಬೇಕು

**ಉಪಸಂಹಾರ** : ಒಟ್ಟಿನಲ್ಲಿ ಸಮಾಜಕ್ಕೆ ಅಂಟಿಕೊಂಡಿರುವ ವರದಕ್ಷಿಣೆ ಪಿಡುಗನ್ನು ಸಮಾಜದಿಂದ ಕಿತ್ತು ಹಾಕಬೇಕು. ಪರಿವರ್ತನೆಯೇ ಜಗದ ನಿಯಮ ಎನ್ನುವಂತೆ ಸುಸಂಸ್ಕೃತ ಭಾರತದ ನಾಗರಿಕರಾದ ನಾವು ನಮ್ಮ ಮನಸ್ಸನ್ನು ಬದಲಾಯಿಸಿಕೊಂಡು ವರದಕ್ಷಿಣೆ ಪಡೆಯುವುದು ಮತ್ತು ಕೊಡುವುದನ್ನು ತಿರಸ್ಕರಿಸಿ ಪ್ರಜ್ಞಾವಂತರಾಗಿ ಬಾಳಬೇಕು. ಕಾನೂನಿನ ಅರಿವು ಮೂಡಿಸಿ ಸಮಾಜದ ಜನರನ್ನು ಎಚ್ಚರಗೊಳಿಸಿ, ಸ್ತ್ರೀ-ಪುರುಷರಲ್ಲಿ ಅಭೇಧತೆಯನ್ನು ಮೂಡಿಸಿ ಸತಿಪತಿಗಳೊಂದಾಗಿ ಬಾಳುವಂತೆ,ಸಂಸಾರಗಳು ಗಟ್ಟಿಗೊಳ್ಳುವಂತೆ ಮಾಡಬೇಕು ಎನ್ನವುದು ಎಲ್ಲರ ಆಶಯವಾಗಬೇಕು.

## 12. ರೈತರ ಆತ್ಮಹತ್ಯೆಗೆ ಕಾರಣಗಳು ಮತ್ತು ಪರಿಹಾರೋಪಾಯಗಳು

**ಪೀಠಿಕೆ** : ರೈತ ದೇಶದ ಬೆನ್ನೆಲುಬು.ಅವನಿಲ್ಲದೆ ಯಾರೊಬ್ಬರಿಗೂ ಅನ್ನವಿಲ್ಲ.ಅವನ ದುಡಿಮೆಯೇ ನಮಗೆ ಸಹಕಾರ.ಇಂತಹ ರೈತನ ಬಾಳು ಇಂದಿನ ಕಾಲದಲ್ಲಿ ಗೋಳಾಗಿದೆ.ಇದರಿಂದ ರೈತರು ಆತ್ಮಹತ್ಯೆಯ ದಾರಿ ಹಿಡಿದಿದ್ದಾರೆ.ಇದಕ್ಕೆ ಅವಕಾಶ ಕೊಡದೆ ಅವರಲ್ಲಿ ಧೈರ್ಯವನ್ನು ತುಂಬುವಂತ ಕೆಲಸ ಮಾಡಬೇಕು.ಇಲ್ಲವಾದರೆ ನಮ್ಮ ಅನ್ನಕ್ಕೆ ಕುತ್ತು ಬಂದು ಅವರ ದಾರಿಯನ್ನು ನಾವು ಹಿಡಿಬೇಕಾದಿತು.

**ವಿಷಯ ವಿವರಣೆ** : ದೇಶದ ಗಡಿಯನ್ನು ರಕ್ಷಿಸುವವನು ಯೋಧ. ಹಾಗೆಯೇ ದೇಶಕ್ಕೆ ಅನ್ನವನ್ನು ನೀಡುವವನು ರೈತ. ಇವರಿಬ್ಬರು ದೇಶದ ಎರಡು ಕಣ್ಣುಗಳಿದ್ದಂತೆ, ಅವರಿಂದಲೇ ನಾವು ಇಂದು ದೇಶದೊಳಗೆ ಸುಖ, ಸಂತೋಷದಿಂದ ಬಾಳುತಿದ್ದೇವೆ. ಇಂತಹ ರೈತನ ಇಂದಿನ ಜೀವನ ಬಹಳ ದುಸ್ತರವಾಗಿಬಿಟ್ಟಿದೆ. ರೈತರಿಗೆ ಅವಶ್ಯವಾದ ಮಳೆ ಸರಿಯಾದ ಸಮಯಕ್ಕೆ ಬಾರದೆ ಗೋಳಾಡಿಸುತ್ತಿದೆ. ಇನ್ನೊಂದು ಕಡೆ ಬಿತ್ತಲು ಬೀಜ,ಗೊಬ್ಬರವಿಲ್ಲದೆ ಪರದಾಟ, ಮತ್ತೊಂದೆಡೆ ಇದಕ್ಕೋಸ್ಕರ ಸಾಲಮಾಡಿ ತೀರಿಸಲಾಗದೆ ನರಕಯಾತನೆ ಅನುಭವಿಸುತ್ತಿದ್ದಾರೆ. ಮತ್ತೊಂದು ಸಲ ಮಳೆಬಂದರು ಸರಿಯಾದ ಬೆಳೆ ಬರುವುದಿಲ್ಲ, ಬೆಳೆ ಇದ್ದರೂ ಅದಕ್ಕೆ ಸರಿಯಾದ ಬೆಲೆ ದೊರೆಯದೆ ಇರುವುದು. ಮತ್ತೊಂದೆಡೆ ಬೆಳೆಗಳು ಕೀಟಬಾದೆಯಿಂದ ನಾಶವಾಗುವುದು. ಒಂದು ಸಲ ಬರಗಾಲ, ಇನ್ನೊಂದು ಸಲ ಪ್ರವಾಹ ಇದರಿಂದ ಬೆಳೆಗಳಿಲ್ಲದೆ ಅನ್ನಕ್ಕೆ ಕುತ್ತು ಬಂದಿದೆ. ಹೀಗೆ ನಾನಾ ಕಾರಣಗಳಿಂದ ಇಂದು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ ಇಂತಹ ರೈತರಿಗೆ ಮೊದಲು ನಾವು ದೈರ್ಯತುಂಬಬೇಕು. ಸಹಾಯ, ಸಹಕಾರ ನೀಡಬೇಕು. ಸ್ಥಾಪಿತ ಸರ್ಕಾರಗಳು ರೈತರಿಗೆ ಅವಶ್ಯವಾದ ಯೋಜನೆಗಳನ್ನು ಜಾರಿಗೊಳಿಸಬೇಕು. ಬೆಳೆವಿಮೆಯನ್ನು ಸರಿಯಾದ ರೀತಿಯಲ್ಲಿ ಹಂಚಬೇಕು. ಸಾಲವಸೂಲಾತಿಯನ್ನು ಮುಂದೂಡಬೇಕು.ರೈತರಿಗೆ ಅವಶ್ಯವಾದ ಬೀಜಗೊಬ್ಬರ, ಔಷಧ, ಕೃಷಿಸಂಬಂಧಿತ ಸಲಕರಣೆಗಳನ್ನು ಯೋಗ್ಯಬೆಲೆಯಲ್ಲಿ ಸಿಗುವಂತೆ ಮಾಡಬೇಕು.ಬೆಳೆಗಳಿಗೆ ಸರಿಯಾದ ಮಾರುಕಟ್ಟೆ,ಬೆಲೆಯನ್ನು ಒದಗಿಸಬೇಕು. ವೈಜ್ಞಾನಿಕವಾಗಿ ಕೃಷಿಚಟುವಟಿಕೆಗಳನ್ನು ಕೈಗೊಳ್ಳುವ ತರಬೇತಿ ನೀಡಬೇಕು. ಹೀಗಾದಲ್ಲಿ ನಾವು ರೈತರ ಆತ್ಮಹತ್ಯೆಗಳನ್ನು ತಡೆಗಟ್ಟಬಹುದು.

**ಉಪಸಂಹಾರ** : ಭಾರತದಂತಹ ಕೃಷಿ ಪ್ರಧಾನವಾದ ರಾಷ್ಟ್ರದಲ್ಲಿ ಇಂದಿನ ರೈತರ ಜೀವನ ಅಯೋಮಯವಾಗಿಬಿಟ್ಟಿದೆ. ನಾನಾ ಕೃಷಿ ಸಂಬಂಧಿತ ಕಾರಣಗಳಿಂದ ತನ್ನ ಜೀವವನ್ನೆ ತ್ಯಾಗಮಾಡುತ್ತಿದ್ದಾನೆ. ನಮ್ಮ ದೇಶದ ಬಲಗಳಲ್ಲಿ ಒಂದಾದ ರೈತ ಬಲವನ್ನು ಹೆಚ್ಚಿಸಬೇಕಾಗಿದೆ. ಅವನ ಜೀವನವನ್ನು ಸುಧಾರಿಸಬೇಕಾಗಿದೆ. ದೇಶದ ನಿಜವಾದ ಶಕ್ತಿ ರೈತರ ಕೈಯಲ್ಲಿದೆ ಎಂಬುದನ್ನು ಮರೆಯಬಾರದು. ಸರ್ಕಾರಗಳು ಅವರನ್ನು ಉತ್ತಮ ರೀತಿಯಲ್ಲಿ ಕಾಣಬೇಕು ಹಾಗೆಯೇ ರೈತರು ಏನೇ ಕಷ್ಟ ಬಂದರೂ ಎದೆಗುಂದದೆ ಜೀವನವನ್ನು ಸಾಗಿಸಬೇಕೆಂದು ನಮ್ಮೆಲ್ಲರ ಆಶಯವಾಗಬೇಕು.

## 13. ಸಮೂಹ ಮಾಧ್ಯಮಗಳು

**ಪೀಠಿಕೆ:** ಆಧುನಿಕ ಯುಗದಲ್ಲಿ ಸಮೂಹ ಮಾಧ್ಯಮಗಳು ಬಹಳ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಒಂದು ಸ್ಥಳದಲ್ಲಿಯ ವಿಚಾರಗಳನ್ನು ಮತ್ತೊಂದು ಸ್ಥಳದ ಜನರಿಗೆ ತಿಳಿಸುವ ಮಾಧ್ಯಮಗಳು ಸಮೂಹ ಮಾಧ್ಯಮಗಳು. ಸಮೂಹ ಮಾಧ್ಯಮಗಳು ಇಡಿ ವಿಶ್ವವನ್ನು ಒಂದುಗೂಡಿಸಿವೆ. ಪ್ರಪಂಪದ ಯಾವುದೇ ಮೂಲೆಯಲ್ಲಿ ಏನೇ ಘಟನೆ ನಡೆದರೂ ತತಕ್ಷಣವಾಗಿ ಇಡಿ ವಿಶ್ವದ ಜನರಿಗೆ ಮುಟ್ಟಿಸುವಷ್ಟು ಸಾಮರ್ಥವನ್ನು ಇಂದಿನ ಸಮೂಹ ಮಾಧ್ಯಮಗಳು ಬೆಳೆಸಿಕೊಂಡಿವೆ.

**ವಿಷಯ ವಿವರಣೆ** : ಸಾಮಾನ್ಯವಾಗಿ ಒಂದು ವಿಷಯವನ್ನು ಜನರಿಗೆ ತಲುಪಿಸುವ ದೂರದರ್ಶನ,ರೇಡಿಯೋ, ವೃತ್ತಪತ್ರಿಕೆಗಳು, ಅಂತರ್ಜಾಲದಂತಹ ಮೊದಲಾದ ಸಂಪರ್ಕ ಸಾಧನಗಳನ್ನು ಸಮೂಹ ಮಾಧ್ಯಮಗಳು ಎಂದು ಕರೆಯಲಾಗುತ್ತದೆ. ಸುದ್ಧಿ ಮಾಹಿತಿಯ ವರ್ಗಾವಣೆ ಅವಶ್ಯತೆ ಇದ್ದೇ ಇದೆ. ಒಬ್ಬರಿಗೆ ತಿಳಿದಿರುವ ಮಾಹಿತಿ ಘಟನೆಯ ಬಗ್ಗೆ ತಿಳುವಳಿಕೆ, ಚಿಂತನ-ಸುದ್ಧಿ-ಸಮಾಚಾರ-ವಾರ್ತೆವರಧಿ ಮುಂತಾದವುಗಳನ್ನು ಸಮೂಹ ಮಾಧ್ಯಮಗಳಲ್ಲಿ ನೋಡಬಹುದು. ಸಮೂಹ ಮಾಧ್ಯಮಗಳನ್ನು

ಪ್ರಜಾಪ್ರಭುತ್ವದ ನಾಲ್ಕನೆಯ ಅಂಗವೆಂದು ಕರೆಯಲಾಗುತ್ತದೆ. ನಮ್ಮ ಜನರಿಗೆ ಅವಶ್ಯವಾದ ವಿಷಯಗಳನ್ನು ಮುಟ್ಟಿಸುವಲ್ಲಿ ಹಾಗೂ ಸಮಾಜವನ್ನು ಸರಿದಾರಿಗೆ ತರುವಲ್ಲಿ ಶ್ರಮಿಸುತ್ತಿವೆ. ಇಂದಿನ ಮಾಧ್ಯಮಗಳು ಮನೋರಂಜನೆಯ ಜೊತೆಗೆ ಕ್ರೀಡೆ, ಕಲೆ, ಸಾಹಿತ್ಯ, ಸಂಗೀತ, ಸಂಸ್ಕೃತಿ ಮುಂತಾದ ವಿಷಯಗಳನ್ನು , ವಿಶ್ವದ ಇತರ ಸುದ್ಧಿಸಮಾಚಾರಗಳನ್ನು ತಿಳಿಸುತ್ತಿವೆ. ಶೈಕ್ಷಣಿಕ ಕ್ಷೇತ್ರದಲ್ಲಿ ಸಮೂಹ ಮಾಧ್ಯಮಗಳು ಜ್ಞಾನವಿಕಾಸಕ್ಕೂ ಕೂಡ ಸಹಕಾರಿ ಆಗಿವೆ. ಹಾಗೆಯೇ ಸಮೂಹ ಮಾಧ್ಯಮಗಳಿಂದ ಸಾಕಷ್ಟು ದುಷ್ಪರಿಣಾಮಗಳು ಇವೆ ಎಂಬುದನ್ನು ವಿದ್ಯಾರ್ಥಿಗಳು ತಿಳಿಯಬೇಕಾಗಿದೆ. ವಿದ್ಯಾರ್ಥಿಗಳು ಅವಶ್ಯವಾದ ವಿಚಾರಗಳನ್ನು ಮಾತ್ರ ಆಯ್ದು ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಬಹುದು. ವಿಜ್ಞಾನದ ಆವಿಷ್ಕಾರ ದಿಂದ ಮೊಬೈಲ್ (ವಾಟ್ಸಪ್,ಈಮೇಲ್,ಹೈಕ್ ಗ್ರೂಪ್) ನಂತಹ ಮತ್ತೊಷ್ಟು ಸಮೂಹ ಮಾಧ್ಯಮಗಳು ಹುಟ್ಟಿಕೊಂಡು ವಿಚಾರ ವಿನಮಯಕ್ಕೆ ಸಹಕಾರಿಯಾಗಿವೆ.

**ಉಪಸಂಹಾರ** : ಒಟ್ಟಾರೆಯಾಗಿ ಸಮೂಹ ಮಾಧ್ಯಮಗಳಿಂದ ಇಡಿ ವಿಶ್ವವೇ ಸಾಕಷ್ಟು ವಿಚಾರಗಳನ್ನು ಕ್ಷಣಮಾತ್ರದಲ್ಲಿ ನೋಡಬಹುದಾಗಿದೆ. ಪ್ರತಿಯೊಂದು ಮಾಧ್ಯಮಗಳು ಸಮಾಜವನ್ನು ಸರಿದಾರಿಗೆ ತರುವ ಸುಖಿ ಸಮಾಜ ನಿರ್ಮಾಣ ಕಾರ್ಯದಲ್ಲಿ ತೊಡಗಬೇಕೆಂಬುದೇ ಎಲ್ಲರ ಆಶಯವಾಗಿದೆ.

## 14. ಮೂಢನಂಬಿಕೆಗಳು

**ಪೀಠಿಕೆ** : ಮಾನವ ಸಂಘ ಜೀವಿ , ಅವನು ಸಮಾಜದಲ್ಲಿ ವಾಸಿಸುವಾಗ ಕೆಲವು ನಂಬಿಕೆಗಳನ್ನು ಇಟ್ಟುಕೊಂಡಿರುತ್ತಾನೆ. ಅದೇ ರೀತಿ ಕೆಲವು ಮೂಢನಂಬಿಕೆಗಳನ್ನು ಅನುಸರಿಸುತ್ತಾನೆ. ಮೂಢನಂಬಿಕೆಗಳನ್ನು ಎಲ್ಲಾ ದೇಶದ ಎಲ್ಲಾ ಜನಾಂಗದವರಲ್ಲಿ ಕೂಡ ಕಾಣಬಹುದು. ಮೂಢನಂಬಿಕೆಗಳಿಂದ ನಮ್ಮ ಸಮಾಜಕ್ಕೆ ಯಾವುದೇ ಪ್ರಯೋಜನವಿಲ್ಲ.ಹಾನಿಕಾರವೇ ಹೆಚ್ಚು.

**ವಿಷಯ ವಿವರಣೆ** : ವೈಜ್ಞಾನಿಕವಲ್ಲದ ಕೇವಲ ನಂಬಿಕೆ ಮಾತ್ರದಿಂದಲೇ ಅನುಸರಿಸುವ ಅಸಂಪ್ರದಾಯಕ ಆಚರಣೆಗಳನ್ನು ಮೂಢನಂಬಿಕೆಗಳೆಂದು ಕರೆಯಲಾಗಿದೆ. ಅಂದರೆ ಯಾವ ನಂಬಿಕೆಗಳಲ್ಲಿ ಮೌಢ್ಯತೆ ತುಂಬಿರುತ್ತದೆಯೋ ಅವೇ ಮೂಢನಂಬಿಕೆಗಳು ಎನಿಸಿಕೊಳ್ಳುತ್ತವೆ, ಗ್ರಹಣನಂಬುವುದು, ವಿಧವೆತನ, ದೃಷ್ಟಿತೆಗೆಯುವುದು, ನಿವಾಳಿಯೆತ್ತುವುದು, ಬಲಿದಾನ, ಹರಕೆ, ದೇವದಾಸಿ ಪದ್ಧತಿ, ಭೂತಬಿಡಿಸುವುದು, ಭೂತರಾಧನೆ, ಬೆಕ್ಕು ಅಡ್ಡಹೋದರೆ ಕೆಟ್ಟದ್ದು ಎಂದು ನಂಬುವುದು, ಮಾಟಮಂತ್ರಗಳು, ವಶೀಕರಣ ಮುಂತಾದ ಅವೈಜ್ಞಾನಿಕ ನಂಬಿಕೆಗಳು ಹರಡಿಕೊಂಡಿವೆ. ಕೆಲವೊಂದು ಅತ್ಯಂತ ಅಮಾನವೀಯವಾದ ಪದ್ಧತಿಗಳು ಕೂಡ ಇವೆ. ಅನಕ್ಷರಸ್ಥರು ಇಂತಹ ಮೂಢನಂಬಿಕೆಗಳನ್ನು ನಂಬುವುದು ಹೆಚ್ಚು. ಎಚ್.ನರಸಿಂಹಯ್ಯನವರು ಹೇಳುವಂತೆ "ಮೂಢನಂಬಿಕೆಗಳನ್ನು ನಂಬುವ ಅವಿದ್ಯಾವಂತನಿಗಿಂತ ಮೂಢನಂಬಿಕೆಗಳನ್ನು ಪ್ರತಿಪಾದಿಸುವ ವಿದ್ಯಾವಂತನು ಸಮಾಜಕ್ಕೆ ಬಹಳ ಅಪಾಯಕಾರಿ. ಶಿಕ್ಷಣವೆತ್ತರು ಮೂಢನಂಬಿಕೆಗಳ ಬಗ್ಗೆ ತಳೆಯುವ ನಿಷ್ಕ್ರಿಯತೆ ತುಂಬಾ ಹಾನಿಯುಂಟುಮಾಡುತ್ತದೆ. ಭಯ, ಅಜ್ಞಾನಗಳಿಂದ ತುಂಬಿರುವ ಮೂಢನಂಬಿಕೆಗಳು ಆತ್ಮವಿಶ್ವಾಸವನ್ನು ,ಸ್ವತಂತ್ರ ಆಲೋಚನೆಗಳನ್ನು ಮೊಟಕುಗೊಳಿಸುತ್ತವೆ. ಇವುಗಳು ದೇಶಗ ಪ್ರಗತಿಗೆ ವಿರೋಧವಾಗಿದ್ದು ಸಮಾಜಕ್ಕೆ ಅಘಾತವನ್ನುಂಟು ಮಾಡುತ್ತವೆ." ಆದ್ದರಿಂದ ಪ್ರತಿಯೊಬ್ಬರು ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸಿಕೊಂಡು ಮೂಢನಂಬಿಕೆಗಳ ಹಾನಿಯ ಬಗ್ಗೆ ತಿಳಿಯಬೇಕು ಮತ್ತು ತಿಳಿಸಬೇಕು.

ಉಪಸಂಹಾರ : ವಿಜ್ಞಾನ ಮತ್ತು ಅದರ ಸಂಶೋಧನೆಯಿಂದ ಮೂಢನಂಬಿಕೆಗಳ ಬಗ್ಗೆ ಸಮಾಜಕ್ಕೆ ಸಾಕಷ್ಟು ಅರಿವು ಮೂಡಿಸುವುದರ ಮೂಲಕ, ವಿವಿಧ ಸಭೆ , ಸಮ್ಮೇಳನಗಳಲ್ಲಿ ಪ್ರಚಾರಗೊಳಿಸುವ ಮೂಲಕ ಮತ್ತು ಚರ್ಚಿಸುವುದರ ಮೂಲಕ ತಡೆಗಟ್ಟಬಹುದಾಗಿದೆ. ಸಮಾಜದಲ್ಲಿ ಬೇರೂರಿವ ಪ್ರತಿಯೊಂದು ಮೂಢನಂಬಿಕೆಗಳನ್ನು ಕೂಲಂಕುಶವಾಗಿ ಪರಿಶೀಲಿಸಿ ಅದರಿಂದ ಆಗುವ ಅನಾಹುತ, ನಷ್ಟವನ್ನು ತಪ್ಪಿಸಿಕೊಳ್ಳುವ ಮನೋಭಾವವನ್ನು ಎಲ್ಲರೂ ಬೆಳೆಸಿಕೊಳ್ಳಬೆಂಬುದೆ ನಮ್ಮ ಆಶಯವಾಗಬೇಕು.

## 15. ಭಯೋತ್ಪಾದನೆ

**ಪೀಠಿಕೆ** : 21 ನೇ ಶತಮಾನದ ಜಗತ್ತು ಎದುರಿಸುತ್ತಿರುವ ಅತ್ಯಂತ ಪ್ರಮುಖ ಸಮಸ್ಯೆಗಳಲ್ಲಿ ಭಯೋತ್ಪಾದನೆ ಎನ್ನುವಂತಹದ್ದು ಒಂದು. ಆಧುನಿಕ ಜಗತ್ತಿಗೆ ಅಂಟಿಕೊಂಡಿರುವ ಒಂದು ಶಾಪವಾಗಿದೆ. ವಿಶ್ವಶಾಂತಿಗೆ ಧಕ್ಕೆಯನ್ನುಂಟು ಮಾಡುವ ಹೇಯ ಕೃತ್ಯವಾಗಿದೆ.

**ವಿಷಯ ವಿವರಣೆ** : Terrorism(ಟೆರರಿಸಂ) ಎನ್ನುವ ಪದ ಲ್ಯಾಟಿನ್ ಭಾಷೆಯ Terre(ಟೆರ್ರೆ)ಎಂಬ ಪದದಿಂದ ಹುಟ್ಟಿದ್ದು ಭಯಪಡಿಸು, ನಡುಗಿಸು ಎಂದರ್ಥ. ಅಂದರೆ ಭಯವನ್ನು ಹುಟ್ಟಿಸುವುದು. ಭಯೋತ್ಪಾದನೆ ಎಂದರೆ ಹಿಂಸಾತ್ಮಕ ಕೃತ್ಯಗಳ ಮೂಲಕ ಜನರಲ್ಲಿ ಭಯವನ್ನು ಉತ್ಪಾದನೆ ಮಾಡುವುದು. ಕೆಲವು ವ್ಯಕ್ತಿಗಳು ಅಥವಾ ಗುಂಪುಗಳು ಜನರಲ್ಲಿ ಹಿಂಸಾತ್ಮಕ ತಂತ್ರ ಮತ್ತು ನಿರಂತರ ದಾಳಿಯ ಮೂಲಕ ಜನರನ್ನು ಬೆದರಿಸುವುದು, ಭಯಪಡಿಸುವುದಾಗಿದೆ. 17ನೇ ಶತಮಾನದ ಫ್ರಾನ್ಸ ಕ್ರಾಂತಿಯ ಸಂದರ್ಭದಲ್ಲಿ ಜಾಕೋಬಿನ ಆಡಳಿತದ ಅವ ಧಿಯಲ್ಲಿ ಸುಮಾರು 40 ಸಾವಿರ ಜನರನ್ನು ಕೊಲ್ಲಲಾಗಿತ್ತು. ಆ ಸಂದರ್ಭದಲ್ಲಿಯೆ ಭಯೋತ್ಪಾದನೆ ಎಂಬ ಶಬ್ದ ಚಾಲ್ತಿಗೆ ಬಂದಿತು. ಇಂದು ವಿಶ್ವದಾದ್ಯಂತ ತನ್ನ ಕಬಂಧ ಬಾಹುಗಳನ್ನು ಚಾಚುತ್ತಿದೆ.

ಭಯೋತ್ಪಾದನೆಗೆ ಅನೇಕ ಕಾರಣಗಳಿವೆ. ಹೆಚ್ಚುತ್ತಿರುವ ಜನಸಂಖ್ಯೆ, ಬಡತನ, ಜನಾಂಗೀಯ ಸಂಘರ್ಷ, ಧರ್ಮಗಳ ಪ್ರತಿಷ್ಠೆ, ಮೂಲಭೂತವಾದ ಗುಂಪುಗಳ ಸಂಘರ್ಷ, ಪ್ರಾದೇಶಿಕ ಅಸಮತೋಲನ, ಯುದ್ಧ ಸಂಘರ್ಷಗಳು, ನಿರುದ್ಯೋಗ, ಇತ್ಯಾದಿ ಹೆಸರಿಸಬಹುದು.

ಐಸಿಸ್,ಮುಜಾಹಿದ್ದಿನ್,ಎಲ್‌ಟಿಟಿಇ,ತಾಲಿಬಾನ್ ನಂತಹ ಸಂಘಟನೆಗಳು ಭಯೋತ್ಪಾದನೆ ಯಲ್ಲಿ ತೊಡಗಿಕೊಂಡಿವೆ. ಅಮೇರಿಕಾ,ಭಾರತ.ಫ್ರಾನ್ಸ್, ಪಾಕಿಸ್ತಾನ,ಅಪ್ಘಾನಿಸ್ತಾನ,ಇಂಗ್ಲೆಂಡ್,ರಷ್ಯಾ ಮುಂತಾದ ದೇಶಗಳು ಭಯೋತ್ಪಾದನಾ ಪಿಡುಗಿಗೆ ಸಿಲುಕಿಕೊಂಡ ಪ್ರಮುಖ ರಾಷ್ಟ್ರಗಳಾಗಿವೆ.

**ಉಪಸಂಹಾರ:** ಆಧುನಿಕ ಜಗತ್ತಿಗೆ ಅಂಟಿಕೊಂಡಿರುವ ಭಯೋತ್ಪಾದನೆಯಂತಹ ಶಾಪವನ್ನು ತೊಡೆದು ಹಾಕಲು ಇಡಿ ವಿಶ್ವ ಸಮುದಾಯವೇ ಒಂದಾಗಬೇಕು. ಇಲ್ಲವಾದರೆ ವಿಶ್ವಶಾಂತಿಗೆ ಧಕ್ಕೆಯನ್ನುಂಟು ಮಾಡಿ, ಸಮಾಜದ ನೀತಿನಿಯಮಗನ್ನು ದಿಕ್ಕರಿಸಿ ವ್ಯವಸ್ಥೆಯನ್ನೆ ಬುಡಮೇಲು ಮಾಡಬಹುದು. ಪ್ರತಿಯೊಬ್ಬರಲ್ಲಿಯೂ ಅದರಿಂದಾಗುವ ಹಾನಿಯ ಬಗ್ಗೆ ತಿಳಿಸಿ ಅದನ್ನು ಮಟ್ಟ ಹಾಕಲೂ ಶ್ರಮಿಸಬೇಕು.

## 16. ಪತ್ರಿಕೆಗಳ ಮಹತ್ವ

**ಪೀಠಿಕೆ :** ದೈನಂದಿನ ಆಗು-ಹೋಗುಗಳನ್ನು,ಸುದ್ಧಿ-ಸಮಾಚಾರಗಳನ್ನು ತಿಳಿಸುವ ಮಾಧ್ಯಮವೇ ಪತ್ರಿಕೆ. ಸಮೂಹ ಮಾಧ್ಯಮಗಳಲ್ಲಿ ಅತ್ಯಂತ ಹಳೆಯ ಸಮೂಹ ಮಾಧ್ಯಮವೆಂದರೆ ಅದು ಪತ್ರಿಕೆ ಎಂದು ಹೇಳಬಹುದು. ವಿದ್ಯುನ್ಮಾನ ಕಾಲದಲ್ಲಿಯೂ ಪತ್ರಿಕೆಗಳಿಗೆ ಮಹತ್ವದ ಸ್ಥಾನವಿದೆ.

**ವಿಷಯ ವಿವರಣೆ :** ಪತ್ರಿಕೆಗಳು ಸುದ್ಧಿ-ಸಮಾಚಾರಗಳ ಮೂಲ ಪ್ರತಿಬಿಂಬಗಳಾಗಿವೆ. ದೇಶ-ವಿದೇಶಗಳ ಸುದ್ಧಿಯನ್ನು ದಿನನಿತ್ಯ ಕೊಡುವುದರ ಜೊತೆಗೆ ಕತೆ-ಕವನ-ಕಾದಂಬರಿಗಳು, ಇತಿಹಾಸ, ಕ್ರೀಡೆ, ಮನೋರಂಜನೆ, ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ಔದ್ಯೋಗಿಕ ಇತ್ಯಾದಿ ವಿಚಾರಗಳು ಪತ್ರಿಕೆಗಳಲ್ಲಿ ಬರುವುದರಿಂದ ಪ್ರತಿಯೊಬ್ಬರೂ ಕೂಡ ಜ್ಞಾನ ಪಡೆದುಕೊಳ್ಳಬಹುದು. ಓದುವ ಆಸಕ್ತಿ ಇರುವವರಿಗೆ ಮೂಲ ಅವಶ್ಯಕತೆಗಳಲ್ಲಿ ಪತ್ರಿಕೆಯೂ ಒಂದಾಗಿ ಪರಿಣಮಿಸಿದೆ. ಒಂದು ದಿನ ಪತ್ರಿಕೆ ಬರದೆ ಇದ್ದರೆ ಕಸಿವಿಸಿಯಾಗುತ್ತಾರೆ. ಪ್ರತಿನಿತ್ಯ ಪತ್ರಿಕೆಗಳನ್ನು ಓದುವುದರಿಂದ ವಿಚಾರವಂತರಾಗಬಹುದು. ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆ, ವಾರ್ಷಿಕಪತ್ರಿಕೆಗಳು ಪ್ರಸಾರವಾಗುತ್ತಿವೆ. ಕನ್ನಡದಲ್ಲಿ ಪ್ರಜಾವಾಣಿ, ವಿಜಯವಾಣಿ,ಕನ್ನಡಪ್ರಭ,ವಿಜಯಕರ್ನಾಟಕ ಮುಂತಾದ ಪತ್ರಿಕೆಗಳನ್ನು ಓದಬಹುದು. ಭಾರತದ ಮೊದಲಪತ್ರಿಕೆ ದಿ ಬೆಂಗಾಲ್ ಗೆಜೆಟ್ ಮೊದಮೊದಲು ಸರ್ಕಾರದ ಸುದ್ಧಿ ಪ್ರಸಾರಕ್ಕೆ ಸೀಮಿತವಾಗಿತ್ತು.ನಂತರ ಬೇರೆ ಬೇರೆ ಭಾಷೆಗಳಲ್ಲಿ ಖಾಸಗಿಯಾಗಿ ಪತ್ರಿಕೆಗಳು ಆರಂಭವಾಗಿ ಸಮಗ್ರ ವಿಷಯಗಳ ಪ್ರಸಾರಕ್ಕೆ ನಾಂದಿಯಾದವು. ಆದ್ದರಿಂದ ವೃತ್ತಪತ್ರಿಕೆಗಳನ್ನು ಓದುವುದರಿಂದ ಸಾಕಷ್ಟವಿಚಾರಗಳು ಲಭಿಸುತ್ತವೆ.

**ಉಪಸಂಹಾರ :** ಪತ್ರಿಕೆಗಳು ವಿಚಾರ ಶಕ್ತಿಯ ಆಕರಗಳು, ಜ್ಞಾನಾರ್ಜನೆಯ ಪ್ರಬಲ ಮಾಧ್ಯಮಗಳು ಆದ್ದರಿಂದ ವಿದ್ಯಾರ್ಥಿಗಳು, ಸಾರ್ವಜನಿಕರು ದಿನನಿತ್ಯ ಬೇರೆಬೇರೆ ಭಾಷೆಯ ಬೇರೆಬೇರೆ ಪತ್ರಿಕೆಗಳನ್ನು ಓದಿ ವಿಚಾರವಂತರಾಗಬೇಕೆಂಬುದು ನಮ್ಮೆಲ್ಲರ ಆಶಯವಾಗಬೇಕು.

## 17. ಕಂಪ್ಯೂಟರ್ ಶಿಕ್ಷಣ

**ಪೀಠಿಕೆ :** ಆಧುನಿಕ ವಿಜ್ಞಾನದ ಮಹತ್ವದ ಆವಿಷ್ಕಾರಗಳಲ್ಲಿ ಕಂಪ್ಯೂಟರ್ ಸಹ ಒಂದಾಗಿದೆ. ಕಂಪ್ಯೂಟರ್ ಇಂದು ಜಗತ್ತಿಗೆ ಒಂದು ವರವಾಗಿದೆ ಎಂದೇ ಹೇಳಬಹುದು. ಇಂದಿನ ದಿನಗಳಲ್ಲಿ ಯಾವುದೇ ಕಛೇರಿಗಳಿಗೆ ಹೋದರು ಕಂಪ್ಯೂಟರ್‌ನಲ್ಲಿ ಕೆಲಸ ಮಾಡುವುದನ್ನು ನೋಡಬಹುದು. ಎಲ್ಲಾ ಕಡತಗಳನ್ನು ಕೂಡ ಗಣಕೀಕರಣ ಮಾಡಲಾಗುತ್ತಿದೆ. ಯಾವುದೇ ಉದ್ಯೋಗ ಹುಡುಕಿಕೊಂಡು ಹೋದರೂ ಕಂಪ್ಯೂಟರ್ ಶಿಕ್ಷಣವನ್ನು ಬಯಸುತ್ತಾರೆ. ಆದ್ದರಿಂದ ಕಂಪ್ಯೂಟರ್ ಶಿಕ್ಷಣ ಅಗತ್ಯವಾಗಿದೆ.

**ವಿಷಯ ವಿವರಣೆ :** ಕಂಪ್ಯೂಟರ್ ತಂತ್ರಜ್ಞಾನದ ಶಿಕ್ಷಣ ಎಲ್ಲರಿಗೂ ಬೇಕಾಗಿದೆ. ಇಂದಿನ ದಿನಗಳಲ್ಲಿ ಕಂಪ್ಯೂಟರ್‌ಗಳ ಬಳಕೆ ಶಿಕ್ಷಣ ಕ್ಷೇತ್ರದಿಂದ ಹಿಡಿದು ಬ್ಯಾಂಕಿಂಗ್, ವೈಜ್ಞಾನಿಕ ಸಂಶೋಧನೆ, ಹಣಕಾಸು ವ್ಯವಹಾರ, ಕೃತಕ ಉಪಗ್ರಹದ ಉಡಾವಣೆ ಮತ್ತು ನಿರ್ವಹಣೆಯವರೆಗೆ ತನ್ನ ವ್ಯಾಪ್ತಿಯನ್ನು ಹೊಂದಿದೆ. ಆದ್ದರಿಂದ ಕಂಪ್ಯೂಟರ್ ಶಿಕ್ಷಣವನ್ನು ಶಿಕ್ಷಣವನ್ನು ಪ್ರತಿಯೊಬ್ಬರು ಪಡೆಯಲೇಬೇಕಾಗಿದೆ. ನಮ್ಮ ಸರ್ಕಾರಗಳು ಶಾಲಾ-ಕಾಲೇಜುಗಳಲ್ಲಿ ಕಂಪ್ಯೂಟರ್ ಶಿಕ್ಷಣ ನೀಡಲು ಸಾಕಷ್ಟು ಯೋಜನೆಗಳನ್ನು ಹಾಕಿಕೊಂಡಿವೆ.ಅದರಂತೆ ಎಲ್ಲಾ ವಿದ್ಯಾರ್ಥಿಗಳು ಕಂಪ್ಯೂಟರ್ ಶಿಕ್ಷಣವನ್ನು ಪಡೆಯಬಹುದಾಗಿದೆ. ಇಂದು ನಾವು ಯಾವುದೇ ಕಚೇರಿ, ಬಸ್ಸು ನಿಲ್ದಾಣ, ರೈಲ್ವೆ ಸ್ಟೇಷನ್‌ಗೆ ಹೋದರೂ ಕಂಪ್ಯೂಟರ್ ಸ್ಥಾಪಿಸಿರುವುದು ಕಂಡು ಬರುತ್ತದೆ. ಹಿಂದೆ ಓದು ಬರಹ ಬಾರದ ವ್ಯಕ್ತಿ ಮಾತ್ರ ಅನಕ್ಷರಸ್ಥನಾಗಿರುತ್ತಿದ್ದನು. ಇಂದಿನ ಜಗತ್ತಿನಲ್ಲಿ ಕಂಪ್ಯೂಟರ್ ಶಿಕ್ಷಣ ಗೊತ್ತಿಲ್ಲದವರೂ ಅನಕ್ಷರರೇ ಆದಂತೆ ಆಗಿದೆ. ಆದ್ದರಿಂದ ಇಂದು ಇತರ ಶೈಕ್ಷಣಿಕ ವಿಷಯದಂತೆ ಕಂಪ್ಯೂಟರ್ ಶಿಕ್ಷಣವೂ ಅತಿ ಅಗತ್ಯ ವಿಷಯವಾಗಿದೆ.

ಕಂಪ್ಯೂಟರ್ ಶಿಕ್ಷಣ ಹೊಂದಿದವರು ಸ್ವಉದ್ಯೋಗಗಳನ್ನು ಪ್ರಾರಂಭಿಸಬಹುದಾಗಿದೆ. ಡಿ.ಟಿ.ಪಿ.

ಇಂಟರ್ನೆಟ್ ಬ್ರೌಸಿಂಗ್ ಸೆಂಟರ್,ಕಂಪ್ಯೂಟರ್ ಗೇಮ್ ಸೆಂಟರ್ ಫ್ಯಾಕ್ಸ್, ಡಾಟಾ ಎಂಟ್ರಿ ಮುಂತಾದ ಕೆಲಸಗಳನ್ನು ಮಾಡುವ ಮೂಲಕ ಸಂಪಾದನೆ ಮಾಡಬಹುದಾಗಿದೆ. ಇನ್ನೂ ಹೆಚ್ಚಿನ ಕಂಪ್ಯೂಟರ್ ಶಿಕ್ಷಣ ಪಡೆದವರು ಅನೇಕ ಖಾಸಗಿ ಕಚೇರಿಗಳಲ್ಲಿ ಉದ್ಯೋಗ ಪಡೆಯಬಹುದಾಗಿದೆ. ಅವರು ಕೂಡ ಕಂಪ್ಯೂಟರ್ ಶಿಕ್ಷಣ ಕೇಂದ್ರಗಳನ್ನು ತೆರೆದು ಇತರರಿಗೆ ಶಿಕ್ಷಣವನ್ನು ನೀಡಬಹುದಾಗಿದೆ.

**ಉಪಸಂಹಾರ:** ಒಟ್ಟಿನಲ್ಲಿ ಇಂದಿನ ಜಗತ್ತಿನಲ್ಲಿ ಕಂಪ್ಯೂಟರ್ ಶಿಕ್ಷಣವೂ ಒಂದು ಮೂಲಭೂತ ಅಗತ್ಯಗಳಲ್ಲಿ ಒಂದಾಗಿದೆ. ಹಾಗಾಗಿ ಪ್ರತಿಯೊಬ್ಬರು ಕಂಪ್ಯೂಟರ್ ಶಿಕ್ಷಣವನ್ನು ಪಡೆದು ಆಧುನಿಕ ಜಗತ್ತಿಗೆ ಕಾಲಿಡಬೇಕಾಗಿದೆ. ಕಂಪ್ಯೂಟರ್ ಶಿಕ್ಷಣ ಪಡೆದು ಸ್ವಉದ್ಯೋಗಗಳನ್ನು ಮಾಡುವುದರಿಂದ ನಿರುದ್ಯೋಗ ಸಮಸ್ಯೆಯನ್ನು ಸ್ವಲ್ಪ ದೂರಮಾಡಬಹುದಾಗಿದೆ ಎಂದು ಹೇಳಬಯಸುತ್ತೇನೆ.

## 18. ಕ್ರೀಡೆಗಳ ಮಹತ್ವ

**ಪೀಠಿಕೆ:** “ **ಸದೃಢ ದೇಹದಲ್ಲಿ ಸದೃಢ ಮನಸ್ಸು ಇರುತ್ತದೆ** ” ಎಂಬುದು ದೇಹ ಮತ್ತು ಮನಸ್ಸಿಗೆ ಸಂಬಂಧಿಸಿದ ಮಾತಾಗಿದೆ. ಪ್ರತಿಯೊಬ್ಬರು ತಮ್ಮ ತಮ್ಮ ಕೆಲಸಗಳನ್ನು ಸರಾಗವಾಗಿ ಮಾಡಿಕೊಂಡು ಹೋಗಲು ಆರೋಗ್ಯವಾಗಿರಬೇಕು. ಅದರ ಜೊತೆಗೆ ಮಾನಸಿಕವಾಗಿಯೂ ಸದೃಢವಾಗಿರಬೇಕು. ಇವೆರಡನ್ನು ಸರಿಯಾಗಿ ಇಟ್ಟುಕೊಳ್ಳಬೇಕಾದರೆ ವ್ಯಾಯಾಮ ,ಯೋಗ, ಧ್ಯಾನ ,ಕ್ರೀಡೆಗಳು ಸಹಕಾರಿಯಾಗಬಲ್ಲವು.

**ವಿಷಯ ವಿವರಣೆ : “ಬಾಲಸ್ಥಾವ ಕ್ರೀಡಾಸಕ್ತ”** ಎಂಬ ಮಾತಿನಂತೆ ಸಹಜವಾಗಿ ಎಲ್ಲರೂ ಬಾಲಕರಾಗಿದ್ದಾಗ ಕ್ರೀಡೆಗಳಲ್ಲಿ ಆಸಕ್ತರಾಗಿರುತ್ತಾರೆ. ಬಾಲ್ಯದಲ್ಲಿಯೇ ಸದೃಢದೇಹವನ್ನು ಬೆಳೆಸಿಕೊಳ್ಳಲು ಕ್ರೀಡೆಗಳು ಅತ್ಯಂತ ಸಹಕಾರಿಯಾಗುತ್ತವೆ. ಆದ್ದರಿಂದಲೆ ಶಾಲಾ-ಕಾಲೇಜುಗಳಲ್ಲಿ ಕ್ರೀಡೆಗಳನ್ನು ಆಡಿಸುತ್ತಾರೆ.ಕ್ರೀಡೆಗಳಿಂದ ಪ್ರತಿಯೊಬ್ಬರು ದೈಹಿಕವಾಗಿಯೂ ಮತ್ತು ಮಾನಸಿಕವಾಗಿಯೂ ಸಬಲರಾಗಬಹುದು. ಕ್ರೀಡೆಗಳಿಂದ ನಾಯಕತ್ವ ಗುಣ, ಧೈರ್ಯ, ಪ್ರಾಮಾಣಿಕತೆ, ಹೊಂದಾಣಿಕೆ,ಸಹಕಾರ, ಶಿಸ್ತು, ಸಂಯಮ, ಮನಸ್ಸಿನ ಸ್ಥಿರತೆ,ದೈಹಿಕ ಶಕ್ತಿ,ರೋಗನಿರೋಧಕ ಗುಣ,ಉತ್ತಮ ಆರೋಗ್ಯ ಇತ್ಯಾದಿ ಅವಶ್ಯಕ ಗುಣಾಂಶಗಳನ್ನು ಪಡೆಯಬಹುದು. ಕಬಡ್ಡಿ,ಖೋಖೋ, ವಾಲಿಬಾಲ್, ಕುಸ್ತಿ, ಓಟಗಳಂತಹ ಆಟಗಳು ಪ್ರತಿಯೊಬ್ಬರನ್ನು ದೈಹಿಕವಾಗಿ ಬೆಳೆಸಿದರೆ, ಚೆಸ್,ಕೇರಂ,ಹಾವು-ಏಣಿ ಆಟ, ಪಗಡೆ ಆಟ ಇತ್ಯಾದಿ ಆಟಗಳು ನಮ್ಮನ್ನು ಮಾನಸಿಕವಾಗಿ ಬೆಳೆಸುತ್ತವೆ. ನಮ್ಮ ದೇಶದಲ್ಲಿ ಕ್ರೀಡೆಗಳಿಗೆ ಹೆಚ್ಚಿನ ಮಹತ್ವ ಸಿಗದಿರುವುದು ವಿಷಾದಕರವಾಗಿದೆ. ಶಾಲಾ-ಕಾಲೇಜುಗಳಲ್ಲಿ ಇತರೆ ವಿಷಯಗಳಂತೆ ಕ್ರೀಡೆಗಳಿಗೂ ಮಹತ್ವ ನೀಡಬೇಕು. ಕ್ರೀಡಾಶಾಲೆಗಳನ್ನು ಪ್ರತ್ಯೇಕವಾಗಿ ತೆರೆದು ತರಬೇತಿಯನ್ನು ನೀಡಬೇಕು. ಪ್ರತಿಯೊಬ್ಬರಿಗೂ ಕ್ರೀಡೆಗಳ ಮಹತ್ವವನ್ನು ತಿಳಿಸಿ ಆರೋಗ್ಯವಂತರನ್ನಾಗಿ ಮಾಡಬೇಕು.

**ಉಪಸಂಹಾರ** : ಸಮಾಜ ಸ್ವಾಸ್ಥ್ಯವಾಗಿರಬೇಕಾದರೆ ಪ್ರತಿಯೊಬ್ಬರ ದೇಹ ಮತ್ತು ಮನಸ್ಸು ಸ್ವಾಸ್ಥ್ಯವಾಗಿರಬೇಕು ಇಂತಹ ಸ್ವಾಸ್ಥ್ಯ ದೇಹ ಮತ್ತು ಮನಸ್ಸನ್ನು ಹೊಂದಲು ಕ್ರೀಡೆಗಳು ಸಹಾಯವಾಗುತ್ತವೆ. ಪ್ರತಿಯೊಬ್ಬರು ಕ್ರೀಡೆಗಳ ಬಗ್ಗೆ ಆಸಕ್ತಿ ,ಅಭಿರುಚಿಯನ್ನು ಬೆಳೆಸಿಕೊಂಡು ದೈಹಿಕ ಮತ್ತು ಮಾನಸಿಕವಾಗಿ ಆರೋಗ್ಯವಂತರಾಗಲು ಪ್ರಯತ್ನಿಸಬೇಕು.

## 19. ಪರಿಸರ ಸಂರಕ್ಷಣೆ

**ಪೀಠಿಕೆ** : ನಾವು ಮತ್ತು ನಮ್ಮ ಸುತ್ತ ಮುತ್ತಲಿನ ಬೆಟ್ಟ,ಗುಡ್ಡ, ಕಲ್ಲು,ಮಣ್ಣು, ಮರ-ಗಿಡ,ನೀರು ವಾಯು, ಪ್ರಾಣಿ-ಪಕ್ಷಿ ಚರಾಚರ ವಸ್ತುಗಳನ್ನು ಪರಿಸರ ಎಂದು ಕರೆಯಬಹುದು.ಇವುಗಳನ್ನು ಯಥಾರೀತಿಯಾಗಿ ಉಳಿಸಿ ಬೆಳೆಸಿಕೊಂಡು ಹೋಗುವುದೇ ಪರಿಸರ ಸಂರಕ್ಷಣೆಯಾಗಿದೆ. ಇಂತಹ ಪರಿಸರಸೃಷ್ಠಿ ನಮಗೆ ವರವಾಗಿದೆ ಎಂದು ಹೇಳಬಹುದು. ಪರಿಸರವನ್ನು ನಾವು ಸಂರಕ್ಷಿಸಿದರೆ ಅದು ನಮ್ಮನ್ನು ರಕ್ಷಿಸಬಲ್ಲದು.ಇಲ್ಲವಾದರೆ ಪರಿಸರ ನಾಶಮಾಡಿದರೆ ನಾವು ನಾಶವಾಗುವುದರಲ್ಲಿ ಎರಡು ಮಾತಿಲ್ಲ.

**ವಿಷಯ ವಿವರಣೆ : “ಪರಿಸರ ಉಳಿದರೆ ನಾಡು ಉಳಿದೀತು ; ಪರಿಸರ ಅಳಿದರೆ ನಾಡು ಕಳೆದೀತು”** ಎಂಬ ನಾಣ್ಣುಡಿಯಂತೆ ನಾಡನ್ನು ರಕ್ಷಿಸಿಕೊಳ್ಳಬೇಕಾದರೆ ಪರಿಸರ ಸಂರಕ್ಷಣೆ ಮಾಡಬೇಕಾದದ್ದು ನಮ್ಮ ಜವಬ್ದಾರಿಯಾಗಿದೆ .ಯಾಕೆಂದರೆ ನಾವು ಪರಿಸರದಿಂದ ಸಾಕಷ್ಟು ಅನುಕೂಲತೆಗಳನ್ನು ಪಡೆಯುತ್ತಿದ್ದೇವೆ. **‘ಹಸಿರೇ ನಾಡಿನ ಉಸಿರು’** ಆದ್ದರಿಂದ ಹಸಿರು ಇಲ್ಲದಿದ್ದರೇ ಉಸಿರು ಉಳಿದೀತು ಹೇಗೆ ? ಇತ್ತೀಚಿನ ದಿನಗಳಲ್ಲಿ ಪರಿಸರ ಮಾಲಿನ್ಯ ವಿಶ್ವದ ತುಂಬೆಲ್ಲ ಹರಡಿಕೊಂಡು ಬಿಟ್ಟಿದೆ. ಪರಿಸರ ಮಾಲಿನ್ಯದಿಂದ ನಮ್ಮ ನಮ್ಮ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಹಾಗಾಗಿ ನಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ವಿದ್ಯಾರ್ಥಿಗಳಾದ ನಾವು ಮೊದಲು ನಮ್ಮ ಶಾಲಾ-ಕಾಲೇಜುಗಳಲ್ಲಿ ನಮ್ಮ ಮನೆಯ ಸುತ್ತ-ಮುತ್ತ ಹೆಚ್ಚು ಹೆಚ್ಚು ಗಿಡಮರಗಳನ್ನು ನೆಟ್ಟು ಪರಿಸರ ಸಂರಕ್ಷಿಸಬೇಕು. ಇತರರಿಗೂ ಪ್ರೇರಿಪಿಸಬೇಕು. ವನಮಹೋತ್ಸವ, ಸಸಿನೆಡುವ ಕಾರ್ಯಕ್ರಮಗಳನ್ನು ಪ್ರತಿನಿತ್ಯ ಮಾಡುತ್ತ ಪ್ರತಿದಿನ ಪರಿಸರ ದಿನ ಆಚರಿಸಬೇಕು. ಸಾಲುಮರದ ತಿಮ್ಮಕ್ಕನಂತವರನ್ನು ಆದರ್ಶವಾಗಿಟ್ಟುಕೊಳ್ಳಬೇಕು. ಪರಿಸರ ಸಂರಕ್ಷಣೆಯ ಬಗ್ಗೆ ಪ್ರತಿಯೊಬ್ಬರಲ್ಲಿಯೂ ಜಾಗೃತಿಯನ್ನು ಮೂಡಿಸಬೇಕು. ಪರಿಸರ ನಾಶದಿಂದಾಗು ಅನಾಹುತಗಳನ್ನು ತಿಳಿಸಬೇಕು.

**ಉಪಸಂಹಾರ : “ ಕಾಡಿದ್ದರೆ ನಾಡು –ನಾಡಿದ್ದರೆ ನಾವು ಕಾಡಿಲ್ಲದಿದ್ದರೆ ಸುಡಗಾಡು”** ಎನ್ನುವಂತೆ ಕಾಡನ್ನು ನಾಡನ್ನು ಉಳಿಸುವುದು ನಮ್ಮ ನಿಮ್ಮೆಲ್ಲರ ಹೊಣೆಯಾಗಬೇಕು. ದೈವದತ್ತವಾದ ಪರಿಸರವನ್ನು ನಾಶಮಾಡದೆ,ಉಳಿಸಿ,ಬೆಳಸಿ ಮುಂದಿನ ಜನಾಂಗಕ್ಕೆ ಬಳುವಳಿಯಾಗಿ ನೀಡಬೇಕೆಂಬುದು ಎಲ್ಲರ ಆಸಯುವಾಗಬೇಕು.

**“ ವೃಕ್ಷೋ ರಕ್ಷತಿ ರಕ್ಷಿತಃ ”**

## 20. ಜನಸಂಖ್ಯಾ ಸ್ಫೋಟ

**ಪೀಠಿಕೆ :** ನಿಗದಿತ ಪ್ರಮಾಣಕ್ಕಿಂತ ಮಿತಿ ಮೀರಿ ಜನಸಂಖ್ಯೆ ಬೆಳೆದರೆ ಅದು ಜನಸಂಖ್ಯಾ ಸ್ಫೋಟ ಎನಿಸಿಕೊಳ್ಳುತ್ತದೆ. ಜನಸಂಖ್ಯೆ ಒಂದು ಮಿತಿಯಲ್ಲಿದ್ದರೆ ಅದು ಸಮಾಜಕ್ಕೆ ಹಿತವೆನಿಸುತ್ತದೆ.ಮಿತಿಮೀರಿದರೆ ಸಮಾಜಕ್ಕೆ ಕಂಟಕಪ್ರಾಯವಾಗುತ್ತದೆ. ಅದರಲ್ಲೂ ಭಾರತದಲ್ಲಿ ಜನಸಂಖ್ಯಾ ಸ್ಫೋಟವಾಗುತ್ತಲೆ ಇದೆ. ಆದ್ದರಿಂದ ಜನಸಂಖ್ಯಾ ಹೆಚ್ಚಳವನ್ನು ತಡೆಗಟ್ಟುವುದು ಬಹುಮುಖ್ಯವಾಗಿದೆ.

**ವಿಷಯ ವಿವರಣೆ :** ಯಾವುದೇ ದೇಶ ತನ್ನ ನೆಲದ ವಿಸ್ತೀರ್ಣಕ್ಕನುಗುಣವಾಗಿ ಜನಸಂಖ್ಯೆಯನ್ನು ಲೆಕ್ಕಹಾಕಿ ಸರಾಸರಿ ಕಂಡುಹಿಡಿದು ಜನಸಂಖ್ಯಾ ಬೆಳವಣಿಗೆಯನ್ನು ಕಂಡುಕೊಳ್ಳುತ್ತದೆ. ನಮ್ಮ ಭಾರತದಲ್ಲಿ ದೇಶದ ವಿಸ್ತೀರ್ಣದ ಲೆಕ್ಕಚಾರಕ್ಕಿಂತ ಹೆಚ್ಚಿನ ಜನಸಂಖ್ಯೆ ಸ್ಫೋಟವಾಗುತ್ತಿದೆ. ವಿಶ್ವದಲ್ಲಿ ಜನಸಂಖ್ಯೆಯಲ್ಲಿ ಎರಡನೆಯ ದೊಡ್ಡ ದೇಶವಾಗಿದೆ. ಜನಸಂಖ್ಯೆ ಸ್ಫೋಟಕ್ಕೆ ಹಲವಾರು ಕಾರಣಗಳನ್ನು ಗುರುತಿಸಬಹುದು.ಬಡತನ, ಬಾಲ್ಯವಿವಾಹ, ಭಾರತದಂತಹ ವಾಯುಗುಣ, ಅನಕ್ಷರತೆ, ಗಂಡುಸಂತಾನದ ಬಯಕೆ, ಮೂಢನಂಬಿಕೆಗಳು , ಮರಣಪ್ರಮಾಣ ಇಳಿಕೆ, ಜನನ ಪ್ರಮಾಣ ಹೆಚ್ಚಳ, ಸೂಕ್ತವೈದ್ಯಕೀಯ ಸೌಲಭ್ಯ, ಕುಟುಂಬ ಯೋಜನೆಗಳ ವೈಫಲ್ಯ ಮುಂತಾದವುಗಳು. ಮಿತಿಮೀರಿ ಜನಸಂಖ್ಯೆ ಬೆಳೆಯುವುದರಿಂದ ಸಾಕಷ್ಟು ಸಮಸ್ಯೆಗಳು ಹುಟ್ಟಿಕೊಂಡು ದೇಶದ ಅಭಿವೃದ್ಧಿಗೆ ಮಾರಕವಾಗುತ್ತಿದೆ. ಇದರಿಂದ ನಿರುದ್ಯೋಗ ಸಮಸ್ಯೆ. ವಸತಿ ಸಮಸ್ಯೆ, ಆಹಾರ-ಆಚ್ಛಾದನಗಳ ಸಮಸ್ಯೆ , ಶಿಕ್ಷಣದ ಸಮಸ್ಯೆ ಆರೋಗ್ಯ ಸಮಸ್ಯೆ ಹೀಗೆ ನಾನಾ ರೀತಿಯ ಸಮಸ್ಯೆಗಳು ಉಂಟಾಗಯತ್ತವೆ. ಇಂತಹ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿಯೇ ದೇಶದ ಸಂಪನ್ಮೂಲಗಳು ಬರಿದಾಗಿ ದೇಶದ ಅಭಿವೃದ್ಧಿಗೆ ಅಡಚಣೆಯುಂಟಾಗಿದೆ. ಆದ್ದರಿಂದ ಜನಸಂಖ್ಯಾ ಬೆಳವಣಿಗೆಯನ್ನು ನಿಯಂತ್ರಿಸಬೇಕಾಗಿದೆ. ಸೂಕ್ತವಾದ ಕುಟುಂಬಯೋಜನೆಗಳು ಜಾರಿಯಾಗಬೇಕು. ಮೂಢನಂಬಿಕೆಗಳನ್ನು ಹೋಗಲಾಡಿಸಿ ಬಾಲ್ಯವಿವಾಹ, ಗಂಡುಸಂತಾನಗಳಂತಹ ಬಯಕೆಗಳನ್ನು ನಿವಾರಿಸಬೇಕು. **“ಮನೆಗೊಂದು ಮಗು ದೇಶದ ನಗು” “ಸಣ್ಣಕುಟುಂಬ ಸುಖೀ ಕುಟುಂಬ”** ಗಳೆಂಬ ನೀತಿಗಳನ್ನು ಪಾಲಿಸುವಂತಾಗಬೇಕು.

**ಉಪಸಂಹಾರ:** ದೇಶದ ಜನಸಂಖ್ಯೆ ನಿಯಂತ್ರಣದಲ್ಲಿದ್ದರೆ ಮಾತ್ರ ಪ್ರಗತಿಪಥದತ್ತ ಸಾಗಲು ಸಾಧ್ಯವಾಗುತ್ತದೆ. ಆದ್ದರಿಂದ ಪ್ರಗತಿಗೆ ವಿರೋಧವಾಗಿರುವ ಜನಸಂಖ್ಯಾ ಹೆಚ್ಚಳವನ್ನು ತಡೆಗಟ್ಟುವಲ್ಲಿ ದೇಶದ ಪ್ರತಿಯೊಬ್ಬ ಪ್ರಜೆಯು ಕಟಿಬದ್ಧವಾಗಿದ್ದು ದೇಶದ ಅಭಿವೃದ್ಧಿಯಲ್ಲಿ ಪಾಲುದಾರರಾಗಬೇಕೆಂಬುದು ನಮ್ಮೆಲ್ಲರ ಆಶಯವಾಗಬೇಕಿದೆ.

## 21. ದೂರದರ್ಶನ

## ಅಥವಾ

## ದೂರದರ್ಶನದ ಒಳಿತು-ಕೆಡುಕುಗಳು

**ಪೀಠಿಕೆ :** ಆಧುನಿಕ ವೈಜ್ಞಾನಿಕ ಆವಿಷ್ಕಾರಗಳಲ್ಲಿ ಅದ್ಭುತವಾದದ್ದು ದೂರದರ್ಶನವಾಗಿದೆ. ಪ್ರಸ್ತುತ ದಿನಮಾನಗಳಲ್ಲಿ ಅತ್ಯಂತ ಆಕರ್ಷಣೀಯ ಸಮೂಹ ಮಾಧ್ಯಮವೆಂದರೆ ಅದು ದೂರದರ್ಶನವೇ ಆಗಿದೆ. ಇದು ದೃಶ್ಯಮಾಧ್ಯಮವಾಗಿದ್ದು ಇದರಲ್ಲಿ ವೀಕ್ಷಿಸುವ ಮತ್ತು ಆಲಿಸುವ ಸೌಲಭ್ಯ ಇರುವುದರಿಂದ ಅಬಾಲವೃದ್ಧರಿಗೂ ಆಸಕ್ತಿದಾಯಕವಾಗಿದೆ. ವಿಚಾರಗಳನ್ನು ಅತ್ಯಂತ ಶೀಘ್ರವಾಗಿ ತಲುಪಿಸುವಲ್ಲಿ ದೂರದರ್ಶನ ಪ್ರಮುಖಪಾತ್ರವಹಿಸುತ್ತವೆ.

**ವಿಷಯ ವಿವರಣೆ :** ದೂರದರ್ಶನ ಅತ್ಯಂತ ಜನಪ್ರಿಯ ಮಾಧ್ಯಮವಾಗಿದ್ದು,ಇದರಿಂದ ಸಾಕಷ್ಟು ಅನೂಕೂಲಗಳಿವೆ. ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ವೈಜ್ಞಾನಿಕ, ಮನೋರಂಜನಾತ್ಮಕ, ಸಾಂಸ್ಕೃತಿಕ, ವೈದ್ಯಕೀಯ, ಕ್ರೀಡೆ, ಮುಂತಾದ ವಿಚಾರಗಳು ಪ್ರಸಾರವಾಗುವುದರಿಂದ ಸಮಗ್ರಜ್ಞಾನವನ್ನು ಪಡೆಯಬಹುದು. ವಾರ್ತೆಗಳು, ಧಾರವಾಹಿಗಳು, ಚಲನಚಿತ್ರಗಳು, ನಾಟಕಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ಹಾಸ್ಯಕಾರ್ಯಕ್ರಮಗಳು, ನೃತ್ಯಗಳು, ಅಡುಗೆಕಾರ್ಯಕ್ರಮಗಳು ಹೀಗೆ ವೈವಿಧ್ಯಮಯ ಕಾರ್ಯಕ್ರಮಗಳು ಪ್ರಸಾರವಾಗುವುದರಿಂದ ಪ್ರತಿಯೊಬ್ಬರು ದೂರದರ್ಶನವನ್ನು ವೀಕ್ಷಿಸುತ್ತಾರೆ. ಅನಕ್ಷರಸ್ಥರು ಕೂಡ ಸಾಕಷ್ಟು ವಿಚಾರಗಳನ್ನು ತಿಳಿದುಕೊಳ್ಳಬಹುದು. ಪ್ರತಿಯೊಂದು ಭಾಷೆಯಲ್ಲಿಯೂ ದೂರದರ್ಶನಗಳು ತೆರೆಯಲ್ಪಟ್ಟಿವೆ. ಹಾಗಾಗಿ ಇಡಿ ವಿಶ್ವವೇ ದೂರದರ್ಶನಕ್ಕೆ ಮನಸೋತಿದೆ ಎಂದು ಹೇಳಬಹುದು.

ದೂರದರ್ಶನದಿಂದ ದುಷ್ಪರಿಣಾಮಗಳು ಸಹ ಇವೆ. ವಿದ್ಯಾರ್ಥಿಗಳಾದವರು ಸದಾಕಾಲ ದೂರದರ್ಶನದ ಮುಂದೆ ಕುಳಿತು ತಮ್ಮ ಓದಿನಲ್ಲಿ ಆಸಕ್ತಿಯನ್ನು ಕಳೆದುಕೊಳ್ಳಬಹುದು. ಆದ್ದರಿಂದ ತಮ್ಮ ಜ್ಞಾನಕ್ಕೆ ಅವಶ್ಯವಾದ ಕಾರ್ಯಕ್ರಮಗಳನ್ನು ಮಾತ್ರ ವೀಕ್ಷಿಸಬೇಕು. ಚಿಕ್ಕಮಕ್ಕಳನ್ನು ಅತಿನೋಡಲು ಬಿಡಬಾರದು.

**ಉಪಸಂಹಾರ :** ದೂರದರ್ಶನವನ್ನು ಮೂರ್ಖರ ಪೆಟ್ಟಿಗೆ ಎಂದು ಕರೆಯಲಾಗಿದೆ.ಆದರೂ ಇದರಿಂದ ಸಾಕಷ್ಟು ಒಳಿತುಗಳಿವೆ. ಅಷ್ಟೇ ದುಷ್ಪರಿಣಾಮಗಳಿವೆ ಎಂಬುದನ್ನು ಮರೆಯಬಾರದು. ಅತಿಯಾದರೆ ಅಮೃತವೂ ವಿಷವಾಗುತ್ತದೆ .ದೂರದರ್ಶನವನ್ನು ಅದರಲ್ಲೂ ವಿದ್ಯಾರ್ಥಿಗಳು ಜ್ಞಾನವಿಕಾಸಕ್ಕೆ ಸಂಬಂಧಿಸಿದ ವಿಚಾರಗಳಿಗೆ ಮಾತ್ರ ಆಕರ್ಷಿತರಾಗುವುದು ಒಳಿತು ಎಂದು ಹೇಳಬಹುದು.

## 22. ಆರೋಗ್ಯ ಮತ್ತು ನೈರ್ಮಲ್ಯ

**ಪೀಠಿಕೆ: 'ಆರೋಗ್ಯವೇ ಮಹಾಭಾಗ್ಯ'** ಎಂಬಂತೆ ಮನುಷ್ಯರು ಸುಖ-ಸಂತೋಷದಿಂದ ಜೀವಿಸಬೇಕಾದರೆ ಆರೋಗ್ಯ ಬಹಳ ಮುಖ್ಯವೆನಿಸುತ್ತದೆ. ಅದು ದೈಹಿಕವಾಗಿರಬಹುದು ಅಥವಾ ಮಾನಸಿಕವಾಗಿರದಬಹುದು. ಅಂತಹ ಉತ್ತಮ ಆರೋಗ್ಯ ನೈರ್ಮಲ್ಯದಿಂದ ಬರುತ್ತದೆ.ಆದ್ದರಿಂದ ಆರೋಗ್ಯ ಮತ್ತು ನೈರ್ಮಲೀಕರಣ ಪರಸ್ಪರ ಪೂರಕವಾದವುಗಳು.

**ವಿಷಯ ವಿವರಣೆ :** ನೈರ್ಮಲ್ಯ ಎಂದರೆ ಪರಿಶುದ್ಧತೆ ಎಂದರ್ಥ. ನೈರ್ಮಲೀಕರಣ ಎಲ್ಲಿದಿಯೋ ಅಲ್ಲಿದೆ ಆರೋಗ್ಯ. ನೈರ್ಮಲೀಕರಣ ಉತ್ತಮ ಆರೋಗ್ಯದ ತಳಹದಿ. ಆರೋಗ್ಯವನ್ನು ಕಾಪಾಡಿಕೊಳ್ಳಬೇಕಾದರೆ ಹಿತಮಿತವಾದ ಉತ್ತಮ ಆಹಾರ , ಶುದ್ಧನೀರು, ವಾಯು ,ಸುತ್ತಮುತ್ತಲಿನ ಸ್ವಚ್ಛಪರಿಸರ ಜೊತೆಗೆ ನಿಯಮಿತ ವ್ಯಾಯಾಮ, ಯೋಗ, ಧ್ಯಾನ, ಮಾನಸಿಕ ನೆಮ್ಮದಿ ಇತ್ಯಾದಿಗಳು ಅವಶ್ಯಕವಾಗಿರುತ್ತವೆ. ಊಟಬಲ್ಲವನಿಗೆ ರೋಗವಿಲ್ಲ ಎನ್ನುವ ಹಾಗೆ ಹಿತಮಿತವಾದ ಸಮಯಕ್ಕೆ ಸರಿಯಾಗಿ ಆಹಾರ ಸೇವನೆಯಿಂದ ರೋಗಮುಕ್ತರಾಗಬಹುದು. ಅದೇ ರೀತಿಯಾಗಿ ಮಾನಸಿಕ ಆರೋಗ್ಯವು ಅತ್ಯವಶ್ಯಕ.

**'ಆರೋಗ್ಯ ಸಂಪತ್ತು ಇರುವ ದೇಹದಲ್ಲಿ ಆರೋಗ್ಯಪೂರ್ಣ ಮನಸ್ಸು'** ಇರುತ್ತದೆ. ಆದ್ದರಿಂದ ಪ್ರತಿನಿತ್ಯ ದೇಹದ ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕು. ರೋಗಗಳು ಬಂದ ಮೇಲೆ ಪರದಾಡುವುದಕ್ಕಿಂತ ಮೊದಲೆ ರೋಗಬರದಂತೆ ತಡೆಗಟ್ಟುವುದು ನೈರ್ಮಲೀಕರಣದಿಂದ ಸಾಧ್ಯವಿದೆ. ಆದ್ದರಿಂದ ನಾವು ನಮ್ಮ ದೇಹ ಮತ್ತು ಮನಸ್ಸನ್ನು ನಿರ್ಮಲವಾಗಿಟ್ಟು ಕೊಳ್ಳಬೇಕು.ಇದಕ್ಕಾಗಿ ನಮ್ಮ ಸರ್ಕಾರಗಳು ಸಾಕಷ್ಟು ಮುಂಜಾಗ್ರತ ಕ್ರಮಗಳನ್ನು ತೆಗೆದುಕೊಳ್ಳವುದನ್ನು ಸದುಪಯೋಗಪಟಿಸಿಕೊಳ್ಳಬೇಕು.

**ಉಪಸಂಹಾರ :** " Health is wealth " ಆದ್ದರಿಂದ ನಮ್ಮ ಆರೋಗ್ಯವನ್ನು ಕಾಪಾಡಿಕೊಂಡು ಮಹಾಭಾಗ್ಯವನ್ನು ತಂದು ಕೊಳ್ಳಬೇಕು. ಪ್ರತಿಯೊಬ್ಬರು ಸುಖವಾಗಿರಲು ಬಯಸುತ್ತಾರೆ.ಸುಖದ ಗುಟ್ಟು ಆರೋಗ್ಯದಲ್ಲಿದೆ, ಎಷ್ಟುಸಂಪತ್ತು ಇದ್ದರೇನು ಆರೋಗ್ಯ ಸರಿ ಇಲ್ಲದ ಮೇಲೆ. ಆ ಸಂಪತ್ತನ್ನು ಅನುಭವಿಸಬೇಕಾದರೆ ಆರೋಗ್ಯ ಬಹಳ ಮುಖ್ಯ.ಯಾರು ಉತ್ತಮ ಆರೋಗ್ಯವಂತರೋ ಅವರೇ ಸಿರಿವಂತರು. ಒಟ್ಟನಲ್ಲಿ ಆರೋಗ್ಯ ಮತ್ತು ನೈರ್ಮಲ್ಯ ಪ್ರತಿಯೊಬ್ಬರಲ್ಲಿ ಇರಬೇಕು.

## 23. ಬಾಲ್ಯ ವಿವಾಹ ಒಂದು ಸಾಮಾಜಿಕ ಪಿಡುಗು

**ಪೀಠಿಕೆ:** ಸಮಾಜದ ಅಭಿವೃದ್ಧಿಗೆ ತೊಡಕನ್ನುಂಟುಮಾಡುವ ಕೆಲವು ಪದ್ಧತಿಗಳನ್ನು ಸಾಮಾಜಿಕ ಪಿಡುಗುಗಳು ಎಂದು ಗುರುತಿಸಲಾಗಿದೆ. ಅಂತಹ ಸಾಮಾಜಿಕ ಪಿಡುಗುಗಳಲ್ಲಿ ಬಾಲ್ಯವಿವಾಹವು ಒಂದಾಗಿದೆ. ಬಾಲ್ಯವಿವಾಹಗಳಿಂದ ದೇಶದ ಜನಸಂಖ್ಯೆಯು ಹೆಚ್ಚಾಗಿ ಅನೇಕ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಆದ್ದರಿಂದ **'ಬಾಲ್ಯ ವಿವಾಹ ತಡೆಗಟ್ಟಿ ಮಕ್ಕಳ ಬಾಳು ಬೆಳಗಿಸಿ'** ದೇಶದ ಪ್ರಗತಿಗೆ ಎಲ್ಲರೂ ಪಣತೊಡಬೇಕು.

**ವಿಷಯ ವಿವರಣೆ :** 21 ವರ್ಷದ ಒಳಗಿನ ಹುಡುಗ ಹಾಗೂ 18 ವರ್ಷದೊಳಗಿನ ಹುಡುಗಿಯರ ನಡುವೆ ಅಥವಾ ಇಬ್ಬರಲ್ಲಿ ಒಬ್ಬರು ನಿಗದಿತ ವಯಸ್ಸಿನೊಳಗಿದ್ದು ಮದುವೆಯಾದರೆ ಇಂತಹ ಮದುವೆಗೆ ಬಾಲ್ಯ ವಿವಾಹ ಎಂದು ಕರೆಯುತ್ತಾರೆ. ಇದು ಕಾನೂನಿಗೆ ವಿರುದ್ಧವಾದದ್ದು. ಅನಕ್ಷರತೆ, ಬಡತನ, ಮೂಢನಂಬಿಕೆ ಸಾಂಪ್ರದಾಯಕ ಕಟ್ಟುಪಾಡುಗಳು ಮುಂತಾದವುಗಳು ಬಾಲ್ಯವಿವಾಹಕ್ಕೆ ಕಾರಣಗಳಾಗಿವೆ. ಚಿಕ್ಕ ವಯಸ್ಸಿನಲ್ಲಿ ತಾಯಿಯಾಗುವ ಈ ಹೆಣ್ಣುಮಕ್ಕಳು ಮುಂದೆ ಹೆಚ್ಚಿನ ತೊಂದರೆ ಅನುಭವಿಸುತ್ತಾರೆ. ಅನಾರೋಗ್ಯಕ್ಕೆ ತುತ್ತಾಗುವ ಸಾಧ್ಯತೆಗಳಿವೆ. ಹುಟ್ಟುವ ಮಕ್ಕಳು ಸದೃಢರಾಗದೆ ವಿಕಲಾಂಗ ಮಕ್ಕಳು ಜನಿಸಿ ಅನಾರೋಗ್ಯ ಉಂಟಾಗಬಹುದು.ಸಂಸಾರಗಳು ಮುರಿದುಬೀಳಲು ಕಾರಣವಾಗಬಹುದು. ಬಾಲ್ಯವಿವಾಹಗಳನ್ನು ಮಾಡುವುದರಿಂದ ಜನಸಂಖ್ಯೆ ಹೆಚ್ಚಳವಾಗುತ್ತದೆ. ಮತ್ತೆ ಇದರಿಂದ ಅನೇಕ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ.ಶಾಲೆ ಬಿಡುವ ಮಕ್ಕಳ ಸಂಖ್ಯೆ ಹೆಚ್ಚಾಗಿ ಅನಕ್ಷರತೆ ಹೆಚ್ಚಾಗುವುದು. ವಯಸ್ಸಿಗೆ ಮೀರಿದ ಜವಬ್ದಾರಿ ಹೊರಿಸುವುದರಿಂದ ಮಕ್ಕಳು ಮಾನಸಿಕ ದೌರ್ಬಲ್ಯತೆಗೆ ಒಳಗಾಗಿನ ಖಿನ್ನತೆಯನ್ನು ಅನುಭವಿಸುತ್ತಾರೆ.

ಭಾರತದಲ್ಲಿ ಬಾಲ್ಯವಿವಾಹ ನಿಷೇಧ ಕಾನೂನು ಜಾರಿಯಲ್ಲಿದ್ದರೂ ಕೆಲವು ಬಾಲ್ಯ ವಿವಾಹಗಳು ಜರುಗುತ್ತಿವೆ. ಬಾಲ್ಯವಿವಾಹಗಳಿಂದಾಗು ಅನಾಹುತಗಳ ಬಗ್ಗೆ ಪೋಷಕರಲ್ಲಿ ಜಾಗೃತಿ ಮೂಡಿಸಬೇಕು. ಶಾಲೆಯೊಂದೇ ಹೆಣ್ಣು ಮಕ್ಕಳಿಗೆ ಸರಿಯಾದ ರಕ್ಷಣಾ ಕೇಂದ್ರವಾಗಿದೆ. ಆದ್ದರಿಂದ ನಮ್ಮ ಸರ್ಕಾರಗಳು ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ಪ್ರೋತ್ಸಾಹಿಸುತ್ತಿವೆ. ಉತ್ತಮ ಶಿಕ್ಷಣದಿಂದ ಬಾಲ್ಯವಿವಾಹವನ್ನು ತಪ್ಪಿಸಬಹುದು. ಬಾಲ್ಯವಿವಾಹ ನಿಷೇಧ ಕಾನೂನನ್ನು ಕಟ್ಟು ನಿಟ್ಟಾಗಿ ಜಾರಿಗೆ ತರಬೇಕು. ಬಾಲ್ಯವಿವಾಹವನ್ನು ತಡೆಗಟ್ಟಲು ಇತ್ತೀಚಿಗೆ ವಿವಾಹ ನೋಂದಾಣಿ ಕಡ್ಡಾಯವಾಗಿ ಮಾಡಿಸಲು ಆದೇಶಿಸಲಾಗಿದೆ. ಸಂಘ-ಸಂಸ್ಥೆಗಳು ಬಾಲ್ಯವಿವಾಹಗಳನ್ನು ತಡೆಗಟ್ಟಲು ಪ್ರಯತ್ನಿಸಬೇಕು.

**ಉಪಸಂಹಾರ** : '**ಮದುವೆಗಿಂತ ಮಕ್ಕಳ ಭವಿಷ್ಯ ಮುಖ್ಯ.**' ಆದ್ದರಿಂದ ವಿದ್ಯಾರ್ಥಿಗಳಾದ ನಾವು ಬಾಲ್ಯವಿವಾಹದಿಂದಾಗುವ ದುಷ್ಪರಿಣಾಮಗಳ ಬಗ್ಗೆ ತಿಳಿದುಕೊಂಡು, ನಮ್ಮ ಪೋಷಕರಿಗೂ ಹಾಗೂ ಸಮಾಜಕ್ಕೂ ಇದರ ಬಗ್ಗೆ ಅರಿವು ಮೂಡಿಸಿ ಬಾಲ್ಯವಿವಾಹಗಳನ್ನು ತಡೆಗಟ್ಟಬೇಕು. ಅಂದಾಗ ಮಾತ್ರ ಈ ಪಿಡುಗು ತೊಲಗಿ ಸಮಾಜ ಸ್ವಾಸ್ಥ್ಯವಾಗಿರಲು ಸಾಧ್ಯವಾಗುತ್ತದೆ.ಮತ್ತು ಸಮಾಜ ಒಳ್ಳೆಯ ರೀತಿಯಲ್ಲಿ ಮುಂದುವರಿಯತ್ತದೆ. ಇದಕ್ಕೆ ಪ್ರತಿಯೊಬ್ಬರೂ ಕೈ ಜೋಡಿಸಿ ಸ್ವಾಸ್ಥ್ಯವಾಗಿರಿಸೋಣ. '**ಬಾಲ್ಯವಿವಾಹ ನಿಲ್ಲಿಸಿ ಮಕ್ಕಳ ಹಕ್ಕುಗಳನ್ನು ರಕ್ಷಿಸೋಣ**' ಎಂಬ ಭರವಸೆ ಎಲ್ಲರಲ್ಲಿ ಮೂಡಲಿ ಎನ್ನುವುದು ನಮ್ಮೆಲ್ಲರ ಆಶಯವಾಗಬೇಕಿದೆ.

## 24. ಮೇಕ್ ಇನ್ ಇಂಡಿಯಾ

**ಪೀಠಿಕೆ** : ಭಾರತ ದೇಶವನ್ನು ಒಂದು ಉತ್ಪಾದನಾ ವಲಯದ ಕೇಂದ್ರ ಸ್ಥಾನವನ್ನಾಗಿ ಬೆಳೆಸಬೇಕೆಂಬ ಉದ್ದೇಶ ದಿಂದ ಭಾರತ ಸರ್ಕಾರ ಜಾರಿಗೆ ತಂದಿರುವ ಅತ್ಯಂತ ಮಹತ್ವಪೂರ್ಣ ಯೋಜನೆಯೇ " ಮೇಕ್ ಇನ್ ಇಂಡಿಯಾ " ಅಂದರೆ ಭಾರತದಲ್ಲಿ ಉತ್ಪಾದಿಸುವುದು ಎಂದರ್ಥ.ಭಾರತ ದೇಶವು ಉತ್ಪಾದನಾ ವಲಯದಲ್ಲಿ ಸ್ವಾವಲಂಬನೆ ಸಾಧಿಸಲು ಬಹಳ ಉಪಯುಕ್ತ ಯೋಜನೆ ಇದಾಗಿದೆ.

**ವಿಷಯ ನಿರೂಪಣೆ** : ನಮ್ಮ ದೇಶದ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರ ಕನಸಿನ ಕೂಸಾದ ಈ ಯೋಜನೆ ಸೆಪ್ಟಂಬರ್ 25ರ 2014 ರಂದು ಅವರಿಂದಲೆ ಉದ್ಘಾಟನೆಯಾಯಿತು. ಉತ್ಪಾದನಾ ವಲಯದಲ್ಲಿ ಬೇರೆ ರಾಷ್ಟ್ರಗಳ ಸರಕುಗಳಿಗೆ ಅವಲಂಬಿಸಿರುವುದಕ್ಕಿಂತ ನಮ್ಮ ದೇಶದಲ್ಲಿಯೇ ತಯಾರಿಸಿ ಸ್ವಾವಲಂಬನೆ ಪಡೆಯುವುದಾಗಿದೆ. ಉತ್ಪಾದನಾ ವಲಯದಲ್ಲಿ ಭಾರತ ದೇಶವು ಒಂದು ಸೂಪರ್ ಪವರ್ ರಾಷ್ಟ್ರ ಎನಿಸಿಕೊಳ್ಳಬೇಕಾದರೆ ನಮ್ಮ ದೇಶದ ಉದ್ಯಮಿಗಳು ಮತ್ತು ಅನ್ಯದೇಶದ ಉದ್ಯಮಿಗಳು ನಮ್ಮ ದೇಶದಲ್ಲಿ ಬಂಡವಾಳ ಹೂಡುವಂತೆ ಮಾಡಿ ನಮ್ಮ ದೇಶದ ಕೈಗಾರಿಕೆಗಳನ್ನು ಬಲಪಡಿಸುವುದು .ಆ ಮೂಲಕ ಜನರ ಅವಶ್ಯಕ ವಸ್ತುಗಳನ್ನು ತಯಾರಿಸುವುದು.ಇದರಿಂದ ಆಮದು ಕಡಮೆಯಾಗಿ ರಫ್ತು ಪ್ರಮಾಣ ಹೆಚ್ಚಳವಾಗಬೇಕು. ಹಾಗಾದರೆ ನಮ್ಮ ದೇಶದ ಜನರಿಗೆ ಕಡಮೆ ಬೆಲೆಯಲ್ಲಿ ವಸ್ತುಗಳು ದೊರಕಬಹುದು. ಇದರಿಂದ ನಾಗರಿಕರಿಗೆ ಪ್ರಯೋಜನವಾಗಲಿದೆ. ಐಟಿ-ಬಿಟಿ ,ರೈಲ್ವೆ, ಆಟೋಮೊಬೈಲ್ , ನಾಗರಿಕ ವಿಮಾನಯಾನ ,ರಕ್ಷಣಾ ಸಾಮಾಗ್ರಿ,ರೋಡ್‌ಗಳ ನವೀಕರಣ ,ಆಹಾರ ಉತ್ಪಾದನೆ , ಮುಂತಾದ ವಲಯಗಳಲ್ಲಿ ಹೂಡಿಕೆ ಮಾಡಿ ಸ್ವಾವಲಂಬನೆ ಸಾಧಿಸುವಂತೆ ಮಾಡಬಹುದು.

**ಉಪಸಂಹಾರ** : ಒಟ್ಟಿನಲ್ಲಿ "ಸ್ವಾವಲಂಬನೆಯೇ ಸಾಧನೆಯ ಹಾದಿ" ಎಂಬಂತೆ "ಮೇಕ್ ಇನ್ ಇಂಡಿಯಾ" ಯೋಜನೆಯು ಭಾರತದ ಅಭಿವೃದ್ಧಿ ಮತ್ತು ಉತ್ಪಾದನಾ ವಲಯದಲ್ಲಿ ಸ್ವಾವಲಂಬನೆ ಸಾಧಿಸಲು ಹೊಸ ಭರವಸೆಯನ್ನು ಮೂಡಿಸಿದೆ. ಪ್ರಪಂಚದ ಇತರೆ ದೇಶಗಳು ಭಾರತದತ್ತ ಕಣ್ಣು ಹಾಯಿಸುವಂತೆ ಮಾಡಿದೆ. ಈ ಕಾರ್ಯಕ್ರಮ ಯಶಸ್ವಿಯಾದರೆ ಭಾರತ ಒಂದು ಶಕ್ತಿಶಾಲಿ ರಾಷ್ಟ್ರ ಎನಿಸಿಕೊಳ್ಳುವುದರಲ್ಲಿ ಎರಡು ಮಾತಿಲ್ಲ.

## 25.ಪರಿಸರ ಮಾಲಿನ್ಯ

**ಪೀಠಿಕೆ** : ನಾವು ಮತ್ತು ನಮ್ಮ ಸುತ್ತ ಮುತ್ತಲಿನ ಬೆಟ್ಟ-ಗುಡ್ಡ, ಕಲ್ಲು-ಮಣ್ಣು, ಮರ-ಗಿಡ, ನೀರು ವಾಯು, ಪ್ರಾಣಿ-ಪಕ್ಷಿ ಚರಾಚರ ವಸ್ತುಗಳನ್ನು ಪರಿಸರ ಎಂದು ಕರೆಯಬಹುದು. ಇಂತಹ ಪರಿಸರ ಮಲಿನವಾಗುವುದು ಪರಿಸರ ಮಾಲಿನ್ಯ ಎಂದು ಕರೆಯಲಾಗಿದೆ. ಪರಿಸರ ಮಾಲಿನ್ಯವಾಗುವುದರಿಂದ ಭೂಮಿಯ ಮೇಲಿನ ಪ್ರತಿಯೊಂದು ಜೀವಿಗೆ ಹಾನಿಕಾರಕವಾಗುತ್ತದೆ.

**ವಿಷಯ ವಿವರಣೆ** : ಹೆಚ್ಚುತ್ತಿರುವ ಜನಸಂಖ್ಯೆ , ಪರಿಸರ ಮತ್ತು ಸ್ವಚ್ಛತೆ ಮಹತ್ವದ ಅರಿವಿಲ್ಲದಿರುವುದು, ಅಜ್ಞಾನ, ಮೂಢನಂಬಿಕೆಗಳು, ವಸ್ತುಗಳ ಮರುಬಳಕೆಯಲ್ಲಿ ಅಸಡ್ಡೆ, ಅತಿ ವಾಹನಗಳ ಬಳಕೆ , ಕಾರ್ಖಾನೆಗಳ ಅಸುರಕ್ಷಿತ ಕಾರ್ಯಗಳು, ಕಾಡುಗಳ ನಾಶ, ನಗರ ನಿರ್ಮಾಣ ಇತ್ಯಾದಿ ಕಾರ್ಯಗಳು ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತಿವೆ. ಇಂದಿನ ದಿನಮಾನಗಳಲ್ಲಿ ಪರಿಸರ ಮಾಲಿನ್ಯ ಅತಿಯಾಗಿದ್ದು ಜಾಗತಿಕ ತಾಪಮಾನ ಏರುಪೇರಾಗುತ್ತಿದೆ.ಸರಿಯಾದ ಮಳೆ-ಬೆಳೆ ಬರಲು ಸಾಧ್ಯವಾಗುತ್ತಿಲ್ಲ. ಜಲಮಾಲಿನ್ಯ, ವಾಯುಮಾಲಿನ್ಯ,

ಭೂಮಾಲಿನ್ಯ, ಶಬ್ಧಮಾಲಿನ್ಯಗಳು ಉಂಟಾಗುವುದರಿಂದ ಜನರ ಆರೋಗ್ಯದ ಮೇಲು ಪರಿಣಾಮ ಉಂಟಾಗಿ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ಇದರಿಂದ ಮಾನವ ಜನಾಂಗವೇ ಭೂಮಿಯ ಮೇಲೆ ವಾಸ ಮಾಡುವುದು ದುಸ್ತರವಾಗುವ ಕಾಲ ಸಮೀಪಿಸಿ ಬಿಟ್ಟದೆ ಎಂದು ಹೇಳಬಹುದು. ಆದ್ದರಿಂದ ಪರಿಸರ ಮಾಲಿನ್ಯವನ್ನು ತಡೆಗಟ್ಟಿ ಮಾನವ ಕುಲದ ಒಳಿತಿಗೆ ಎಲ್ಲರೂ ಪರಿಶ್ರಮಿಸಬೇಕಾಗಿದೆ.

ಪರಿಸರ ಸಂರಕ್ಷಣೆ ಮಾಡುವುದು ಎಲ್ಲರ ಕರ್ತವ್ಯವಾಗಬೇಕು. ಪ್ರತಿಯೊಬ್ಬರಲ್ಲೂ ಪರಿಸರದ ಕಾಳಜಿಯ ಬಗ್ಗೆ ಅರಿವು ಮೂಡಿಸುವ ಯೋಜನೆ ಆಗಬೇಕು. ಕಾಡುಗಳನ್ನು ನಾಶಮಾಡಬಾರದು, ಬೆಳೆಸಬೇಕು. ಕಾಡುಗಳಿದ್ದರೆ ನಾಡು ಸುರಕ್ಷತವಾಗಿರಲು ಸಾಧ್ಯ. ಹೆಚ್ಚು ಹೆಚ್ಚು ಗಿಡಗಳನ್ನು ಬೆಳೆಸಬೇಕು. ನೀರಿನ ಮಿತಬಳಕೆ, ವಾಹನಗಳ ಮಿತಬಳಕೆ , ಕಾರ್ಖಾನೆಗಳಿಂದ ಮಾಲಿನ್ಯವಾಗದಂತೆ ಪರ್ಯಾಯ ವ್ಯವಸ್ಥೆಗಳನ್ನು ಕೈಗೊಳ್ಳುವುದು. ನೀರು, ಪ್ಲಾಸ್ಟಿಕ್, ಕಬ್ಬಿಣದಂತಹ ವಸ್ತುಗಳನ್ನು ಮರುಬಳಕೆಮಾಡುವ ವ್ಯವಸ್ಥೆಯನ್ನು ರೂಪಿಸುವುದು.

**ಉಪಸಂಹಾರ : 'ಕಾಡಿದ್ದರೆ ನಾಡು-ನಾಡಿದ್ದರೆ ನಾವು'.** ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ. ವಿದ್ಯಾರ್ಥಿಗಳಾದ ನಾವು ಪರಿಸರ ಸಂರಕ್ಷಣೆ ಅರಿವನ್ನು ಮೂಡಿಸಿಕೊಂಡು ಪ್ರತಿಯೊಬ್ಬರಲ್ಲೂ ಜಾಗೃತಿಯನ್ನು ತರಬೇಕು. ಮೊದಲು ನಮ್ಮಸುತ್ತ-ಮುತ್ತ.ಮನೆ,ಶಾಲಾ-ಕಾಲೇಜು,ಗ್ರಾಮಗಳಲ್ಲಿ ಹೆಚ್ಚಿನ ಗಿಡಗಳನ್ನು ನೆಟ್ಟು ಬೆಳೆಸಬೇಕು. ಇತರರಿಗೂ ಬೆಳೆಸಲೂ ಪ್ರೇರಕರಾಗಬೇಕು. ಅಂದಾಗ ಪರಿಸರ ಉಳಿಯಲು,ಬೆಳೆಯಲು ಸಾಧ್ಯವಾಗುತ್ತದೆ ಎಂಬುದೆ ನಮ್ಮೆಲ್ಲರ ಆಶಯವಾಗಬೇಕಿದೆ.

**ಮನೆಗೊಂದು ಮಗು ಮಗುವಿಗೊಂದು ಮರ**

## 26. ಕರ್ನಾಟಕದ ನದಿ ನೀರಿನ ಸಮಸ್ಯೆ

**ಪೀಠಿಕೆ:** ಒಂದು ರಾಜ್ಯದಲ್ಲಿ ಹುಟ್ಟಿದ ನದಿ ಸಮುದ್ರ ಸೇರುವ ಹಾದಿಯಲ್ಲಿ ಮತ್ತೊಂದು ರಾಜ್ಯದಲ್ಲಿ ಹರಿದು ಹೋಗುವುದು ಸಹಜ. ಆದರೆ ಆ ನದಿಗಳ ನೀರಿನ ಬಳಕೆಗಾಗಿ ಮತ್ತು ಹಂಚಿಕೆಯ ವಿಚಾರದಲ್ಲಿ ಹಲವು ರಾಜ್ಯಗಳ ನಡುವೆ ಸಮಸ್ಯೆಯುಂಟಾಗಿ ವ್ಯಾಜ್ಯಗಳಾಗಿ ಉಳಿದಿವೆ.

**ವಿಷಯ ನಿರೂಪಣೆ :** ನೀರು ಪ್ರತಿಯೊಂದು ಜೀವಿಗೂ ಅತಿಅವಶ್ಯಕ. ಕೇವಲ ಕರ್ನಾಟಕವೊಂದೆ ಅಲ್ಲ ಇಡಿ ಪ್ರಪಂಚದಾದ್ಯಂತ ನೀರಿನ ಸಮಸ್ಯೆ ಬಹಳವಾಗಿ ಕಾಡುತ್ತಿದೆ. ಭಾರತ -ಪಾಕಿಸ್ತಾನ, ಭಾರತ-ಚೀನಾ ದೇಶಗಳ ನಡುವೆಯೂ ಜಲವಿವಾದಗಳಿರುವುದನ್ನು ನೋಡಬಹುದು. ಕರ್ನಾಟಕದಲ್ಲಿ ಸಾಕಷ್ಟು ನದಿಗಳು ಹುಟ್ಟಿ ಹರಿದರೂ ನದಿ ನೀರಿನ ಸಮಸ್ಯೆ ಕಾಡುತ್ತಿದೆ. ಕರ್ನಾಟಕ ಮತ್ತು ತಮಿಳುನಾಡು, ಆಂಧ್ರಪ್ರದೇಶ, ಕೇರಳ, ಮಹಾರಾಷ್ಟ್ರ,ಗೋವ ರಾಜ್ಯಗಳ ನಡುವೆ ನದಿ ನೀರಿನ ಸಮಸ್ಯೆ ಬಹಳ ದಿನಗಳಿಂದ ಮುಂದುವರಿದಿದೆ. ಮುಖ್ಯವಾಗಿ ಕರ್ನಾಟಕದಲ್ಲಿ ಕಾವೇರಿ ನದಿ ನೀರಿನ ಹಂಚಿಕೆಯಲ್ಲಿ ತಮಿಳುನಾಡು, ಕೇರಳ, ಪಾಂಡಿಚರಿ ರಾಜ್ಯಗಳೊಂದಿಗೆ ಸಮಸ್ಯೆ ಉದ್ಭವಿಸಿದೆ. ಕಾವೇರಿ ಕರ್ನಾಟಕದಲ್ಲಿ ಹುಟ್ಟಿ ಕನ್ನಡಿಗರ ಜೀವ ನದಿ ಎನಿಸಿದ್ದರೂ ಅದರ ನೀರಿನ ಉಪಯೋಗ ಬೇರೆ ರಾಜ್ಯಗಳದ್ದೆ ಹೆಚ್ಚು. ಹೀಗಾಗಿ ನದಿ ನೀರಿನ ಸಮಸ್ಯೆ ಎರಡು ರಾಜ್ಯಗಳ ನಡುವಿನ ವ್ಯಾಜ್ಯಕ್ಕೆ ಕಾರಣವಾಗಿದೆ. ಅದೇ ರೀತಿ ಕರ್ನಾಟಕದ ಪ್ರಮುಖ ನೀರಾವರಿ ಯೋಜನೆಗಳಲ್ಲಿ ಒಂದಾದ ಕೃಷ್ಣಾ ನದಿಯೋಜನೆಯೂ ಕೂಡ ಮಹಾರಾಷ್ಟ್ರ ಮತ್ತು ಕರ್ನಾಟಕದ ನಡುವಿನ ವ್ಯಾಜ್ಯಕ್ಕೆ ಕಾರಣವಾಗಿದೆ. ಅದೇ ರೀತಿ ಹೊಗೆನಕಲ್ ವಿವಾದ, ಮೇಕೆದಾಟು ವಿವಾದ ಇವುಗಳೆಲ್ಲ ನದಿ ನೀರಿನ ಸಮಸ್ಯೆಯಿಂದಲೆ ಉದ್ಭವವಾಗಿರುವ ಸಮಸ್ಯೆಗಳಾಗಿವೆ. ನದಿ ನೀರಿನ ಸೂಕ್ತವಾದ ಹಂಚಿಕೆಯಾಗದೆ ಕುಡಿಯುವ ನೀರಿಗೂ ಕೂಡ ಸಮಸ್ಯೆಯಾಗಿದೆ. ಮೇಕೆದಾಟು ಯೋಜನೆ ಬೆಂಗಳೂರು ನಗರಕ್ಕೆ ಕುಡಿಯುವ ನೀರಿನ ಯೋಜನೆಯಾಗಿದ್ದರೂ ತಮಿಳುನಾಡು ಇದಕ್ಕೆ ಕ್ಯಾತೆ ತೆಗೆದಿದೆ. ಈ ಹಿನ್ನೆತಲ್ಲಿ ಕೋರ್ಟ್‌ಗಳಲ್ಲಿ ಕೂಡ ವ್ಯಾಜ್ಯ ಪ್ರಕರಣಗಳು ದಾಖಲಾಗಿವೆ.

ಅದೇ ರೀತಿ ಮಹಾದಾಯಿ ಯೋಜನೆ ಉತ್ತರ ಕರ್ನಾಟಕದ ಜನರ ಕೂಡಿಯುವ ನೀರಿನ ಯೋಜನೆಯಾಗಿದೆ. ಆದರೆ ಇದಕ್ಕೆ ಗೋವ ಸರ್ಕಾರ ಅಡಚಣೆವುಂಟುಮಾಡಿರುದರಿಂದ ಕುಡಿಯುವ ನೀರಿನ ಸಮಸ್ಯೆಗೆ ಪರಿತಪಿಸುವಂತಾಗಿದೆ. ಅಲ್ಲದೆ ಮಹಾರಾಷ್ಟ್ರ ರಾಜ್ಯವೂ ಕೂಡ ತಡೆಗೋಡೆ ನಿರ್ಮಿಸಿ ಸಮಸ್ಯೆಯನ್ನು ತಂದೊಡ್ಡಿದೆ. ಹೀಗಾಗಿ ಕರ್ನಾಟಕದಲ್ಲಿ ಸಾಕಷ್ಟು ನದಿ ಹುಟ್ಟಿದರೂ ನೀರಿನ ಸಮಸ್ಯೆ ಬಗೆಹರಿದಿಲ್ಲ.

**ಉಪಸಂಹಾರ :** ದಿನದಿಂದ ದಿನಕ್ಕೆ ಇಡಿ ಪ್ರಪಂಚದಾದ್ಯಂತ ನೀರಿನ ಸಮಸ್ಯೆ ಉಂಟಾಗುತ್ತಿದೆ. ಮಳೆ ಉತ್ತಮವಾಗಿ ಸುರಿದರೆ ಸಮಸ್ಯೆ ಇರಲಾರದು. ಆದರೆ ಅನಾವೃಷ್ಟಿಯಾದಾಗ ನೀರಿನ ಸಮಸ್ಯೆ ಉಂಟಾಗುತ್ತದೆ. ಆದ್ದರಿಂದ ನೀರಿನ ಬಳಕೆಯಲ್ಲಿ ಪ್ರತಿಯೊಬ್ಬರೂ ಎಚ್ಚರಿಕೆಯಿಂದ ಇರಬೇಕೆಂದು ಹೇಳಬಹುದು.

## 27. ವಿದ್ಯಾರ್ಥಿಗಳ ಜ್ಞಾನಾಭಿವೃದ್ಧಿಯಲ್ಲಿ ಸಾಮಾಜಿಕ ಜಾಲತಾಣಗಳ ಮಹತ್ವ

**ಪೀಠಿಕೆ:** ಆಧುನಿಕ ಯುಗದಲ್ಲಿ ಸಾಮಾಜಿಕ ಜಾಲತಾಣಗಳ ಬಳಕೆ ಅತಿಯಾಗಿದೆ. ಅದರ ಬಳಕೆಯಿಂದ ಉಪಯೋಗ ಮತ್ತು ದುರುಪಯೋಗಗಳು ಕೂಡ ಇವೆ. ಹಾನಿಗಳಿದ್ದರೂ ಔಚಿತ್ಯಪೂರ್ಣವಾಗಿ ಬಳಸಿಕೊಳ್ಳುವಲ್ಲಿ ಇವುಗಳ ಮಹತ್ವ ಅಡಗಿದೆ.

**ವಿಷಯ ನಿರೂಪಣೆ :** ವಾಟ್ಸಪ್ , ಟ್ವಿಟರ್ , ಫೇಸ್ ಬುಕ್ , ಹೈಕ್ , ಟೆಲಿಗ್ರಾಮ್, ಯೂಟೂಬ್ ,

ಇಮೇಲ್ , ಬ್ಲಾಗರ್, ವೆಬ್ ಸೈಟ್ ಗಳಂತಹ ಸಾಮಾಜಿಕ ಸಂಪರ್ಕದ ಜಾಲತಾಣಗಳು ಬಳಕೆಯಾಗುತ್ತಿವೆ. ಸಾಮಾಜಿಕ ಜಾಲತಾಣಗಳು ವಿದ್ಯಾರ್ಥಿಗಳಿಗೆ ಹಲವಾರು ವಿಷಯಗಳನ್ನು ಕಲಿಸುತ್ತವೆ. ಹಲವಾರು ವಿಷಯಗಳ ಅನುಭವವಾಗುತ್ತದೆ. ಮಾಹಿತಿಗಳನ್ನು ಹಂಚಿಕೊಳ್ಳಲು ಮತ್ತು ಪಡೆದುಕೊಳ್ಳಲು ಸಹಾಯಕವಾಗಿವೆ. ಗೂಗಲ್‌ನಂತಹ ವೆಬ್‌ಸೈಟ್ ಗಳಲ್ಲಿ ಸಾಕಷ್ಟು ಜ್ಞಾನಪೂರಕ ಮಾಹಿತಿಗಳು ಇವೆ. ಅವುಗಳನ್ನು ವಿದ್ಯಾರ್ಥಿಗಳ ಬಳಸಿಕೊಂಡು ಜ್ಞಾನ ವಿಕಾಸ ಮಾಡಿಕೊಳ್ಳಬಹುದು. ಕಲೆ , ಸಾಹಿತ್ಯ , ಸಂಗೀತ , ಇತಿಹಾಸ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ಮಾಹಿತಿಗಳು ಲಭ್ಯವಿರುತ್ತವೆ.

ಇಂದಿನ ಕಾಲದಲ್ಲಿ ವಿದ್ಯಾರ್ಥಿಗಳ ಬೆರಳ ತುದಿಯಲ್ಲಿ ಇಡಿ ಜಗತ್ತೆ ಹುದುಗಿರುತ್ತದೆ. ಸುಮಾರು ಪ್ರತಿಶತ 50 ರಷ್ಟು ವಿದ್ಯಾರ್ಥಿಗಳು ಪ್ರಾಯೋಜಿತ ಕಾರ್ಯಗಳಿಗೆ ಮತ್ತು ಅಧ್ಯಯನಕ್ಕಾಗಿ ಜಾಲತಾಣಗಳನ್ನು ಜಾಲಾಡುತ್ತಾರೆ. ವಿದ್ಯಾರ್ಥಿಗಳು ಪ್ರಚಲಿತ ವಿದ್ಯಮಾನಗಳನ್ನು ಅರಿಯುವಲ್ಲಿ ಮತ್ತು ಹೊಸ ಮಾಹಿತಿಯನ್ನಿ ಪಡೆಯುವಲ್ಲಿ ಜಾಲತಾಣಗಳಿಂದ ತುಂಬಾ ಅನುಕೂಲವಿದೆ. ಅಗತ್ಯವೆನಿಸಿದ ಚಿತ್ರಗಳು , ವೀಡೀಯೋಗಳು , ಸಾಹಿತ್ಯಗಳನ್ನು ಬಳಸಿಕೊಂಡು ಜ್ಞಾನಾಭಿವೃದ್ಧಿಯನ್ನು ಮಾಡಿಕೊಳ್ಳುವುದು ಮಹತ್ವವಾದ ವಿಷಯವಾಗಿದೆ. ಹೈಕ್ ನಂತಹ ಸಾಮಾಜಿಕ ಜಾಲತಾಣವೊಂದು ಸಿರಿ ಕನ್ನಡ ನುಡಿ ಬಳಗ ಎಂಬ ಹೆಸರಿನಲ್ಲಿ ಗುಂಪು ರಚಿಸಿಕೊಂಡು ಕರ್ನಾಟಕದ ಸಾವಿರಾರು ಶಿಕ್ಷಕರನ್ನು ಒಗ್ಗೂಡಿಸಿ ಆ ಮೂಲಕ ವಿದ್ಯಾರ್ಥಿಗಳ ಜ್ಞಾನ ವಿಕಾಸಕ್ಕೆ ಕಾರಣವಾಗಿದೆ. ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗಾಗಿ ಜ್ಞಾನಪೂರಕ ಆ್ಯಪ್‌ಗಳು ಕೂಡಿ ಹುಟ್ಟಿಕೊಂಡಿವೆ. ಆದ್ದರಿಂದ ಸಾಮಾಜಿಕ ಜಾಲತಾಣಗಳನ್ನು ಉಪಯೋಗಿಸಿಕೊಂಡು ವಿದ್ಯಾರ್ಥಿಗಳು ತಮ್ಮ ಜ್ಞಾನವನ್ನು ಅಭಿವೃದ್ಧಿಪಡಿಸಿಕೊಳ್ಳಬಹುದು.

**ಉಪಸಂಹಾರ :** ಸಾಮಾಜಿಕ ಜಾಲತಾಣಗಳು ಸಾಕಷ್ಟು ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಮಾರಕವಾಗಿದ್ದರೂ ಅವುಗಳಲ್ಲಿನ ಜ್ಞಾನವಿಷಯಕ ಅಂಶಗಳನ್ನು ಪಡೆದುಕೊಂಡರೆ ಜ್ಞಾನವಿಕಾಸವಾಗುವುದರಲ್ಲಿ ಸಂದೇಹವೇ ಇಲ್ಲ ಎಂದು ಹೇಳಬಹುದು.

---

## ಖಾಸಗಿ ಪತ್ರಗಳು

**ಸಂಬೋಧನಾ ವಾಕ್ಯಗಳು**

→ ತಂದೆಗೆ ಪತ್ರ ಬರೆಯುವಾಗ – ಪೂಜ್ಯ ತೀರ್ಥರೂಪುರವರಿಗೆ

→ ತಾಯಿಗೆ ಪತ್ರ ಬರೆಯುವಾಗ – ಪೂಜ್ಯ ಮಾತೃಶ್ರೀಯವರಿಗೆ

→ ಅಣ್ಣನಿಗೆ ಪತ್ರ ಬರೆಯುವಾಗ – ಪೂಜ್ಯ ತೀರ್ಥರೂಪು ಸಮಾನರಾದ ಅಣ್ಣನವರಿಗೆ

→ ಅಕ್ಕನಿಗೆ ಪತ್ರ ಬರೆಯುವಾಗ – ಪೂಜ್ಯ ಮಾತೃಶ್ರೀ ಸಮಾನರಾದ ಅಕ್ಕನವರಿಗೆ

→ ಸ್ನೇಹಿತರಿಗೆ ಪತ್ರ ಬರೆಯುವಾಗ – ನನ್ನ ಪ್ರೀತಿಯ ಸ್ನೇಹಿತ/ತೆ.. (ಸ್ನೇಹಿತರ ಹೆಸರು ಬರೆಯಬೇಕು)

→ ದೊಡ್ಡಪ್ಪ, ಚಿಕ್ಕಪ್ಪ, ಮಾವ ಇತ್ಯಾದಿ ಹಿರಿಯ ರಕ್ತಸಂಬಂಧಿಗಳಿಗೆ (ಪುರುಷರಿಗೆ) ಪತ್ರ ಬರೆಯುವಾಗ – ಪೂಜ್ಯ ತೀರ್ಥರೂಪು ಸಮಾನರಾದ ದೊಡ್ಡಪ್ಪನವರಿಗೆ.ಚಿಕ್ಕಪ್ಪನವರಿಗೆ.ಮಾವನವರಿಗೆ......

→ ದೊಡ್ಡಮ್ಮ, ಚಿಕ್ಕಮ್ಮ, ಅತ್ತೆಯವರು ಹಿರಿಯ ರಕ್ತಸಂಬಂಧಿಗಳಿಗೆ (ಸ್ತ್ರೀಯರು) ಪತ್ರ ಬರೆಯುವಾಗ – ಪೂಜ್ಯ ಮಾತೃಶ್ರೀ ಸಮಾನರಾದ ದೊಡ್ಡಮ್ಮನವರಿಗೆ,ಚಿಕ್ಕಮ್ಮನವರಿಗೆ,ಅತ್ತೆಯವರಿಗೆ.....

**1) ನಿಮ್ಮನ್ನು ಬಳ್ಳಾರಿಯ ಶ್ರೀದುರ್ಗಾಂಭಿಕ ಪ್ರೌಢಶಾಲೆಯಲ್ಲಿ ಓದುತ್ತಿರುವ ಸುಮಂತ ಎಂದು ಭಾವಿಸಿಕೊಂಡು ನಿಮ್ಮಶಾಲೆಯಲ್ಲಿ ನಡೆಯುವ ಶಾಲಾ ವಾರ್ಷಿಕ್ಕೋತ್ಸವಕ್ಕೆ ಬರುವಂತೆ ಆಹ್ವಾನಿಸಿ ಮೈಸೂರಿನಲ್ಲಿರುವ ನಿಮ್ಮ ತಂದೆಗೊಂದು ಪತ್ರಬರೆಯಿರಿ.**

ಸುಮಂತ
10ನೇತರಗತಿ
ಶ್ರೀದುರ್ಗಾಂಭಿಕ ಪ್ರೌಢಶಾಲೆ
ರಾಯಲ್ ವೃತ್ತ ಬಳ್ಳಾರಿ
ದಿನಾಂಕ:15-02-2019

ಪೂಜ್ಯ ತೀರ್ಥರೂಪುರವರಿಗೆ ನಿಮ್ಮ ಮಗ/ಳು ಸುಮಂತ ಮಾಡುವ ಶಿರಸಾಷ್ಟಾಂಗ ಪ್ರಣಾಮಗಳು.

ನಾನು ಇಲ್ಲಿ ಆರೋಗ್ಯವಾಗಿದ್ದೇನೆ. ಅಲ್ಲಿ ನೀವೆಲ್ಲರೂ ಕ್ಷೇಮವಾಗಿದ್ದೀರಿ ಎಂದು ಭಾವಿಸಿರುತ್ತೇನೆ. ನನ್ನ ವಿದ್ಯಾಭ್ಯಾಸವು ಉತ್ತಮವಾಗಿ ನಡೆಯುತ್ತಿದೆ. ತಾಯಿಯವರಿಗೆ ನಮಸ್ಕಾರಗಳು.ದಿನಾಂಕ 30-02-2019 ರಂದು ನಮ್ಮ ಶಾಲೆಯಲ್ಲಿ ಶಾಲಾ ವಾರ್ಷಿಕ್ಕೋತ್ಸವವನ್ನು ಅದ್ದೂರಿಯಿಂದ ಮಾಡಲು ಸಿದ್ದತೆ ಮಾಡುತ್ತಿದ್ದಾರೆ. ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದ್ದು ನಾನೂ ಕೂಡ ಭಾಗವಹಿಸುತ್ತಿದ್ದೇನೆ. ಆದ್ದರಿಂದ ತಾಯಿಯವರೊಂದಿಗೆ ನೀವು ತಪ್ಪದೆ ಬರಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಪ್ರಣಾಮಗಳೊಂದಿಗೆ

ಇಂತಿ ನಿಮ್ಮ ಪ್ರೀತಿಯ ಮಗ/ಳು

ಸುಮಂತ

**<u>ಅಂಚೆ ವಿಳಾಸ</u>**

ಶ್ರೀರವಿಭೂಷಣ.ಎಸ್
ಕುವೆಂಪು ನಗರ 3ನೇ ಮುಖ್ಯರಸ್ತೆ
ಮನೆ ನಂ-625
ಮೈಸೂರು
ಅಂಚೆಪೆಟ್ಟಿಗೆ ಸಂಖ್ಯೆ-563421

**2) ನಿಮ್ಮನ್ನು ಮೈಸೂರಿನ ಶ್ರೀವಿವೇಕಾನಂದ ಪ್ರೌಢಶಾಲೆಯಲ್ಲಿ ಓದುತ್ತಿರುವ ನಂದನ ಎಂದು ಭಾವಿಸಿಕೊಂಡು ನಿಮ್ಮಶಾಲೆಯಲ್ಲಿ ನಡೆಯುವ ಶಾಲಾ ಸ್ವಾತಂತ್ರ್ಯ ದಿನಾಚರಣೆಗೆ ಬರುವಂತೆ ಆಹ್ವಾನಿಸಿ ಬಳ್ಳಾರಿಯಲ್ಲಿರುವ ನಿಮ್ಮ ತಾಯಿಗೊಂದು ಪತ್ರಬರೆಯಿರಿ.**

ನಂದನ
10ನೇತರಗತಿ
ಶ್ರೀವಿವೇಕಾನಂದ ಪ್ರೌಢಶಾಲೆ
ಕುವೆಂಪುನಗರ ಮೈಸೂರು
ದಿನಾಂಕ: 01-02-2019

ಪೂಜ್ಯ ಮಾತೃಶ್ರೀಯವರಿಗೆ ನಿಮ್ಮ ಮಗ/ಳು ನಂದನ ಮಾಡುವ ಶಿರಸಾಷ್ಟಾಂಗ ಪ್ರಣಾಮಗಳು.

ನಾನು ಇಲ್ಲಿ ಆರೋಗ್ಯವಾಗಿದ್ದೇನೆ. ಅಲ್ಲಿ ನೀವೆಲ್ಲರೂ ಕ್ಷೇಮವಾಗಿದ್ದೀರಿ ಎಂದು ಭಾವಿಸಿರುತ್ತೇನೆ. ನನ್ನ ವಿದ್ಯಾಭ್ಯಾಸವು ಉತ್ತಮವಾಗಿ ನಡೆಯುತ್ತಿದೆ. ತಂದೆವರಿಗೆ ಪ್ರಣಾಮಗಳು.ದಿನಾಂಕ 15-02-2019 ರಂದು ನಮ್ಮ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲು ಮಾಡಲು ಸಿದ್ದತೆ ಮಾಡುತ್ತಿದ್ದಾರೆ. ಅಂದು ಬೆಳಿಗ್ಗೆ 8 ಗಂಟೆಗೆ ಧ್ವಜಾರೋಹಣ ಕಾರ್ಯಕ್ರಮವಿರುತ್ತದೆ. ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದ್ದು ನಾನೂ ಕೂಡ ಭಾಗವಹಿಸಿದ್ದೇನೆ. ದೇಶಭಕ್ತಿಗೀತೆಗೆ ನೃತ್ಯ ಮಾಡುತ್ತಿದ್ದೇನೆ. ಆದ್ದರಿಂದ ತಂಗಿ,ತಂದೆಯವರೊಂದಿಗೆ ನೀವು ತಪ್ಪದೆ ಬರಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಪ್ರಣಾಮಗಳೊಂದಿಗೆ

ಇಂತಿ ನಿಮ್ಮ ಪ್ರೀತಿಯ ಮಗ/ಳು
ನಂದನ

**<u>ಅಂಚೆ ವಿಳಾಸ</u>**

ಶ್ರೀಮತಿ ಸರೋಜಮ್ಮ
ವಿದ್ಯಾನಗರ 5ನೇ ಮುಖ್ಯರಸ್ತೆ
ಅನಂತಪುರ ರಸ್ತೆ
ಮನೆ ನಂ-125
ಬಳ್ಳಾರಿ, ಅಂಚೆಪೆಟ್ಟಿಗೆ ಸಂಖ್ಯೆ-583136

**3) ನಿಮ್ಮನ್ನು ಬೆಳಗಾವಿಯ ಶ್ರೀಕಿತ್ತೂರುರಾಣಿ ಚೆನ್ನಮ್ಮ ಪ್ರೌಢಶಾಲೆಯಲ್ಲಿ ಓದುತ್ತಿರುವ ನಮನ ಎಂದು ಭಾವಿಸಿಕೊಂಡು ನಿಮ್ಮಶಾಲೆಯಲ್ಲಿ ನಡೆಯುವ ಕ್ರೀಡಾಕೂಟಕ್ಕೆ ಬರುವಂತೆ ಆಹ್ವಾನಿಸಿ ಬೆಂಗಳೂರಿನಲ್ಲಿರುವ ನಿಮ್ಮ ಅಣ್ಣನಿಗೊಂದು ಪತ್ರಬರೆಯಿರಿ.**

ನಮನ
10ನೇತರಗತಿ
ಶ್ರೀಕಿತ್ತೂರುರಾಣಿ ಚೆನ್ನಮ್ಮಪ್ರೌಢಶಾಲೆ
ರಾಯಣ್ಣ ವೃತ್ತ ಬೆಳಗಾವಿ
ದಿನಾಂಕ:16–02–2019

ಪೂಜ್ಯ ತೀರ್ಥರೂಪುಸಮಾನರಾದ ಅಣ್ಣನವರಿಗೆ ನಿಮ್ಮ ತಮ್ಮ/ತಂಗಿ ನಮನ ಮಾಡುವ ಶಿರಸಾಷ್ಟಾಂಗ ಪ್ರಣಾಮಗಳು.

ಅಣ್ಣ ನಾನು ಇಲ್ಲಿ ಆರೋಗ್ಯವಾಗಿದ್ದೇನೆ. ಅಲ್ಲಿ ನೀವು ಕ್ಷೇಮವಾಗಿದ್ದೀರಿ ಎಂದು ಭಾವಿಸಿರುತ್ತೇನೆ. ನಿಮ್ಮ ಕೆಲಸ ಉತ್ತಮವಾಗಿ ಸಾಗಿದೆ ಎಂದು ತಂದೆಯವರು ಪತ್ರಬರೆದಾಗ ತಿಳಿಸಿದರು. ನನ್ನ ವಿದ್ಯಾಭ್ಯಾಸವು ಕೂಡ ಉತ್ತಮವಾಗಿ ನಡೆಯುತ್ತಿದೆ. ದಿನಾಂಕ 25-02-2019 ರಂದು ನಮ್ಮ ಶಾಲೆಯಲ್ಲಿ ವಲಯಮಟ್ಟದ ಕ್ರೀಡಾಕೂಟ ಏರ್ಪಡಿಸಲಾಗಿದೆ. ನಾನೂ ಕೂಡ ಖೋಖೋ ಆಟದಲ್ಲಿ ಭಾಗವಹಿಸುತ್ತಿದ್ದೇನೆ. ಆದ್ದರಿಂದ ನೀವು ಅತ್ತಿಗೆಯವರೊಂದಿಗೆ ತಪ್ಪದೆ ಬರಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಪ್ರಣಾಮಗಳೊಂದಿಗೆ
ಇಂತಿ ನಿಮ್ಮ ಪ್ರೀತಿಯ ತಮ್ಮ/ತಂಗಿ
ನಮನ

**ಅಂಚೆ ವಿಳಾಸ**

ಶ್ರೀಶಿವಾನಂದ.ಬಿ
ಕೆಂಪೇಗೌಡ ಬಡಾವಣೆ
8ನೇ ಮುಖ್ಯರಸ್ತೆ2ನೇ ಅಡ್ಡರಸ್ತೆ
ಮನೆ ನಂ–100
ಬೆಂಗಳೂರು
ಅಂಚೆಪೆಟ್ಟಿಗೆ ಸಂಖ್ಯೆ–743421

**4) ನಿಮ್ಮನ್ನು ಚಿತ್ರದುರ್ಗದ ಶ್ರೀವೀರಮದಕರಿ ಪ್ರೌಢಶಾಲೆಯಲ್ಲಿ ಓದುತ್ತಿರುವ ಚೈತನ್ಯ ಎಂದು ಭಾವಿಸಿಕೊಂಡು ನಿಮ್ಮಶಾಲೆಯಲ್ಲಿ ನಡೆಯುವ ಪ್ರತಿಭಾ ಕಾರಂಜಿ ಕಾರ್ಯಕ್ರಮಕ್ಕೆ ಬರುವಂತೆ ಆಹ್ವಾನಿಸಿ ಮಡಿಕೇರಿಯಲ್ಲಿರುವ ನಿಮ್ಮ ಅಕ್ಕನಿಗೊಂದು ಪತ್ರಬರೆಯಿರಿ.**

ಚೈತನ್ಯ
10ನೇತರಗತಿ
ಶ್ರೀವೀರಮದಕರಿ ಪ್ರೌಢಶಾಲೆ
ಬೃಂದಾವನ ಬಡಾವಣೆ
ಚಿತ್ರದುರ್ಗ
ದಿನಾಂಕ:13–1–2019

ಪೂಜ್ಯ ಮಾತೃಶ್ರೀ ಸಮಾನರಾದ ಅಕ್ಕನವರಿಗೆ ನಿಮ್ಮ ತಮ್ಮ/ತಂಗಿ ಚೈತನ್ಯ ಮಾಡುವ ಶಿರಸಾಷ್ಟಾಂಗ ಪ್ರಣಾಮಗಳು.

ನಾನು ಇಲ್ಲಿ ಕ್ಷೇಮವಾಗಿದ್ದೀನಿ ಅಲ್ಲಿ ನೀವು ಆರೋಗ್ಯವಾಗಿದ್ದೀರಿ ಎಂದು ಭಾವಿಸಿರುತ್ತೇನೆ. ಓದು ಉತ್ತಮವಾಗಿ ನಡೆಯುತ್ತಿದೆ ಎಂದು ಭಾವಿಸಿರುತ್ತೇನೆ. ನನ್ನ ವಿದ್ಯಾಭ್ಯಾಸವು ಕೂಡ ಉತ್ತಮವಾಗಿ ನಡೆಯುತ್ತಿದೆ. ದಿನಾಂಕ 26–1–2019 ರಂದು ನಮ್ಮ ಶಾಲೆಯಲ್ಲಿ ಪ್ರತಿಭಾ ಕಾರಂಜಿ ಕಾರ್ಯಕ್ರಮ ಏರ್ಪಡಿಸಲಾಗಿದೆ. ನಾನು "ಸ್ವಚ್ಛಭಾರತ" ಎಂಬ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದೇನೆ. ಆದ್ದರಿಂದ ನೀವು ತಪ್ಪದೆ ಬರಬೇಕು ಮತ್ತು ಮಾರ್ಗದರ್ಶನ ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಪ್ರಣಾಮಗಳೊಂದಿಗೆ
ಇಂತಿ ನಿಮ್ಮ ಪ್ರೀತಿಯ ತಮ್ಮ/ತಂಗಿ
ಚೈತನ್ಯ

**ಅಂಚೆ ವಿಳಾಸ**

ಶ್ರೀಲಕ್ಷ್ಮಿದೇವಿ
ಶ್ರೀವೀರರಾಜೇಂದ್ರ ಪದವಿ ಕಾಲೇಜು
ರಾಜಸೀಟ್ ಹತ್ತಿರ
ಮಡಿಕೇರಿ
ಅಂಚೆಪೆಟ್ಟಿಗೆ ಸಂಖ್ಯೆ–593421

**5) ನಿಮ್ಮನ್ನು ಹಾಸನದ ಶ್ರೀಹೊಯ್ಸಳ ಪ್ರೌಢಶಾಲೆಯಲ್ಲಿ ಓದುತ್ತಿರುವ ರಕ್ಷಿತ ಎಂದು ಭಾವಿಸಿಕೊಂಡು ನಿಮ್ಮಶಾಲೆಯಲ್ಲಿ ನಡೆದ ಪ್ರತಿಭಾ ಕಾರಂಜಿ ಕಾರ್ಯಕ್ರಮ ಕುರಿತು ತುಮಕೂರಿನ ಶ್ರೀಸಿದ್ಧಗಂಗ ಮಠದಲ್ಲಿ 10ನೇ ತರಗತಿ ಓದುತ್ತಿರುವ ನಿಮ್ಮ ಸ್ನೇಹಿತ/ತೆಗೊಂದು ಪತ್ರಬರೆಯಿರಿ.**

ರಕ್ಷಿತ
10ನೇತರಗತಿ
ಶ್ರೀಹೊಯ್ಸಳ ಪ್ರೌಢಶಾಲೆ
ಹಾಸನಾಂಬ ಬಡಾವಣೆ,
ಹಾಸನ
ದಿನಾಂಕ:28-1-2019

ನನ್ನ ಪ್ರೀತಿಯ ಸ್ನೇಹಿತ/ತೆ ವಸಂತ

ಗೆಳಯ/ತಿ ನಾನು ಇಲ್ಲಿ ಆರೋಗ್ಯವಾಗಿದ್ದೇನೆ. ಅಲ್ಲಿ ನೀನು ಕ್ಷೇಮವಾಗಿದ್ದೀ ಎಂದು ಭಾವಿಸಿರುತ್ತೇನೆ. ನಿನ್ನ ವಿದ್ಯಾಭ್ಯಾಸ ಚೆನ್ನಾಗಿ ನಡೆಯುತ್ತಿದೆ ಎಂದು ಭಾವಿಸಿದ್ದೇನೆ. ನನ್ನ ವಿದ್ಯಾಭ್ಯಾಸವು ಕೂಡ ಉತ್ತಮವಾಗಿ ನಡೆಯುತ್ತಿದೆ. ದಿನಾಂಕ 26-1-2019 ರಂದು ನಮ್ಮ ಶಾಲೆಯಲ್ಲಿ ಪ್ರತಿಭಾಕಾರಂಜಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ನಾನು "ಸ್ವಚ್ಛಭಾರತ" ಎಂಬ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದೆ. ನನಗೆ ಪ್ರಥಮ ಸ್ಥಾನ ಬಂದಿದೆ. ತುಂಬಾ ಖುಷಿಯಾಯ್ತು. ನಿಮ್ಮ ಶಾಲೆಯಲ್ಲಿ ಪ್ರತಿಭಾ ಕಾರಂಜಿ ಹೇಗೆ ನಡೆಯಿತು ಮತ್ತು ನೀನು ಯಾವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೆ . ಫಲಿತಾಂಶ ಏನಾಯ್ತು ತಿಳಿಸು. ನಿನ್ನ ಪತ್ರಕ್ಕೋಸ್ಕರ ಕಾಯುತ್ತಿರುತ್ತೇನೆ.

ಇಂತಿ ನಿನ್ನ ಪ್ರೀತಿಯ ಸ್ನೇಹಿತ/ತೆ
ರಕ್ಷಿತ

**<u>ಅಂಚೆ ವಿಳಾಸ</u>**

ವಸಂತ
10ನೇ ತರಗತಿ 'ಎ'ವಿಭಾಗ
ಶ್ರೀಸಿದ್ಧಗಂಗ ಪ್ರೌಢಶಾಲೆ
ತುಮಕೂರು
ಅಂಚೆಪೆಟ್ಟಿಗೆ ಸಂಖ್ಯೆ-543428

**6) ನಿಮ್ಮನ್ನು ಹಾವೇರಿಯ ಶ್ರೀಕನಕದಾಸ ಪ್ರೌಢಶಾಲೆಯಲ್ಲಿ ಓದುತ್ತಿರುವ ಸೃಜನ ಎಂದು ಭಾವಿಸಿಕೊಂಡು ನಿಮ್ಮ ಪರೀಕ್ಷಾ ಸಿದ್ಧತೆಯನ್ನು ಕುರಿತು ಚಿಕ್ಕಬಳ್ಳಾಪುರದಲ್ಲಿರುವ ನಿಮ್ಮ ದೊಡ್ಡಪ್ಪನವರಿಗೆಒಂದು ಪತ್ರ ಬರೆಯಿರಿ.**

ಸೃಜನ
10ನೇತರಗತಿ
ಶ್ರೀಕನಕದಾಸ ಪ್ರೌಢಶಾಲೆ
ಆದಿಕೇಶವ ನಗರ, ಹಾವೇರಿ
ದಿನಾಂಕ:28-1-2019

ಪೂಜ್ಯ ತೀರ್ಥರೂಪುಸಮಾನರಾದ ದೊಡ್ಡಪ್ಪನವರಿಗೆ ನಿಮ್ಮ ಮಗ/ಳು ಸೃಜನ ಮಾಡುವ ಶಿರಸಾಷ್ಟಾಂಗ ಪ್ರಣಾಮಗಳು.

ನಾನು ಇಲ್ಲಿ ಆರೋಗ್ಯವಾಗಿದ್ದೇನೆ. ಅಲ್ಲಿ ನೀವು ಕ್ಷೇಮವಾಗಿದ್ದೀರಿ ಎಂದು ಭಾವಿಸಿರುತ್ತೇನೆ. ದೊಡ್ಡಮ್ಮನವರಿಗೆ ನಮಸ್ಕಾರಗಳು. ನನ್ನ ವಿದ್ಯಾಭ್ಯಾಸವು ಕೂಡ ಉತ್ತಮವಾಗಿ ನಡೆಯುತ್ತಿದೆ. ದಿನಾಂಕ 21-03-2019 ರಿಂದ ನನ್ನ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಗಳು ಆರಂಭವಾಗುತ್ತಿದ್ದು ಅದಕ್ಕೆ ಅತ್ಯುತ್ತಮವಾಗಿ ಸಿದ್ಧತೆ ಮಾಡಿಕೊಳ್ಳುತ್ತದ್ದೇನೆ. ಪ್ರತಿದಿನ ಬೆಳಿಗ್ಗೆ 5 ಗಂಟೆಗೆ ಎದ್ದು ಓದುತ್ತಿದ್ದೇನೆ.ನೀವು ಅಂದುಕೊಂಡಂತೆ 100% ಫಲಿತಾಂಶ ಪಡೆಯುವ ಭರವಸೆಯನ್ನು ನೀಡುತ್ತಿದ್ದೇನೆ. ನಿಮ್ಮ ಆಶೀರ್ವಾದ ಇರಲಿ. ತಂಗಿಯಾದ ಕೃತಿಕಾಗೆ ನನ್ನ ಆಶೀರ್ವಾದಗಳು. ಅವಳನ್ನು ಚೆನ್ನಾಗಿ ಓದಿಕೊಳ್ಳಲು ತಿಳಿಸಿ. ನಾವಿಬ್ಬರೂ ನಿಮಗೆ ಒಳ್ಳೆಯ ಹೆಸರನ್ನು ತಂದುಕೊಡುತ್ತವೆ.
ಆಶೀರ್ವಾದ ಬಯಸುತ್ತಾ ಪ್ರಣಾಮಗಳೊಂದಿಗೆ

ಇಂತಿ ನಿಮ್ಮ ಪ್ರೀತಿಯ ಮಗ/ಳು
ಸೃಜನ

**<u>ಅಂಚೆ ವಿಳಾಸ</u>**

ಶ್ರೀಯುತ ಶ್ರೀನಿವಾಸರವರು
ಮಾರುತಿ ನಿಲಯ
ಶಬರಿ ನಗರ
ಮನೆ ನಂ-599
ಚಿಕ್ಕಬಳ್ಳಾಪುರ-654355

# ವ್ಯವಹಾರಿಕ ಪತ್ರಗಳು

**1) ನಿಮ್ಮನ್ನು ದಾವಣಗೆರೆಯ ಶ್ರೀಭಾರತಮಾತಾ ಪ್ರೌಢಶಾಲೆಯಲ್ಲಿ ಓದುತ್ತಿರುವ ಧನುಷ್ ಎಂದು ಭಾವಿಸಿಕೊಂಡು ನಿಮ್ಮಶಾಲೆಯಲ್ಲಿ ನಡೆಯುವ ಕ್ರೀಡಾಕೂಟ ಕಾರ್ಯಕ್ರಮಕ್ಕೆ ಉದ್ಘಾಟಕರಾಗಿ ಆಹ್ವಾನಿಸಿ ನಿಮ್ಮ ಜಿಲ್ಲಾಧಿಕಾರಿಗಳಿಗೊಂದು ಪತ್ರಬರೆಯಿರಿ.**

**ಇವರಿಂದ,**

ಧನುಷ್
10ನೇತರಗತಿ
ಶ್ರೀಭಾರತಮಾತಾ ಪ್ರೌಢಶಾಲೆ
ಸ್ವರ್ಣನಗರ, ದಾವಣಗೆರೆ

**ಇವರಿಗೆ,**

ಮಾನ್ಯ ಜಿಲ್ಲಾಧಿಕಾರಿಗಳು
ದಾವಣಗೆರೆ ಜಿಲ್ಲೆ

ಮಾನ್ಯರೇ

ವಿಷಯ: ಕ್ರೀಡಾಕೂಟದ ಉದ್ಘಾಟನಾ ಕಾರ್ಯಕ್ರಮಕ್ಕೆ ಆಗಮಿಸುವಂತೆ ಆಹ್ವಾನ

ಸರ್, ನಮಸ್ಕಾರ ನಮ್ಮ ಶಾಲೆಯಲ್ಲಿ ದಿನಾಂಕ 21-03-2019 ರಂದು ವಲಯಮಟ್ಟದ ಕ್ರೀಡಾಕೂಟಗಳನ್ನು ಆಯೋಜಿಸಲಾಗಿದೆ. ಅಂದು ಬೆಳಿಗ್ಗೆ 7 ಗಂಟೆಗೆ ಉದ್ಘಾಟನಾ ಕಾರ್ಯಕ್ರಮವಿದ್ದು ದಯಾಮಾಡಿ ತಾವುಗಳು ಈ ಕಾರ್ಯಕ್ರಮಕ್ಕೆ ಆಗಮಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿ ನಮ್ಮ ಕ್ರೀಡಾಕೂಟಕ್ಕೆ ಪ್ರೇರಣೆ ನೀಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಧನ್ಯವಾದಗಳೊಂದಿಗೆ

ದಿನಾಂಕ:20-03-2019 ತಮ್ಮ ವಿಶ್ವಾಸಿ

ಸ್ಥಳ:ದಾವಣಗೆರೆ ಧನುಷ್

**2) ನಿಮ್ಮನ್ನು ಬಿಜಾಪುರದ ಗೋಳಗೊಮ್ಮಟ ಪ್ರೌಢಶಾಲೆಯಲ್ಲಿ ಓದುತ್ತಿರುವ ಮಧು ಎಂದು ಭಾವಿಸಿಕೊಂಡು ನಿಮ್ಮ ಊರಿಗೊಂದು ಗ್ರಂಥಾಲಯ ನಿರ್ಮಿಸಿಕೊಡುವಂತೆ ನಿಮ್ಮರಾಜ್ಯದ ಶಿಕ್ಷಣ ಸಚಿವರಿಗೊಂದು ಮನವಿ ಪತ್ರಬರೆಯಿರಿ.**

**ಇವರಿಂದ,**

ಮಧು
10ನೇತರಗತಿ
ಗೋಳಗೊಮ್ಮಟ ಪ್ರೌಢಶಾಲೆ
ಬಿಜಾಪುರ

**ಇವರಿಗೆ,**

ಮಾನ್ಯ ಶಿಕ್ಷಣ ಸಚಿವರು
ಕರ್ನಾಟಕ ರಾಜ್ಯ ಸರ್ಕಾರ

ಮಾನ್ಯರೇ

ವಿಷಯ:ಗ್ರಂಥಾಲಯ ನಿರ್ಮಿಸಿಕೊಡುವಂತೆ ಮನವಿ

ಸರ್, ನಮಸ್ಕಾರ ನಮ್ಮ ಊರಿನಲ್ಲಿ ಸಾಕಷ್ಟು ವಿದ್ಯಾವಂತರಿದ್ದಾರೆ. ಆದರೆ ಸಮಯದ ಸದುಪಯೋಗ ಮಾಡಿಕೊಳ್ಳಲು ಹಾಗೂ ಹೆಚ್ಚಿನ ಜ್ಞಾನ ಸಂಪಾದಿಸಲು, ಓದಲೂ ನಮ್ಮ ಊರಿನಲ್ಲಿ ಗ್ರಂಥಾಲವೇ ಇಲ್ಲವಾಗಿದೆ. ನಾನೂ ಕೂಡ 10ನೇ ತರಗತಿಯಲ್ಲಿ ಓದುತ್ತಿದ್ದೇನೆ. ನನ್ನ ವಿದ್ಯಾಭ್ಯಾಸಕ್ಕೆ ಪೂರಕವಾದ ಮಾಹಿತಿ ಸಂಗ್ರಹಿಸಲು ಸಾಧ್ಯವಾಗುತ್ತಿಲ್ಲ. ದಯಮಾಡಿ ನಮ್ಮ ಊರಿಗೊಂದು ಗ್ರಂಥಾಲಯವನ್ನು ನಿರ್ಮಿಸಿಕೊಟ್ಟು ಹೆಚ್ಚಿನ ಜ್ಞಾನಸಂಪಾದಿಸಲು ಅನುವು ಮಾಡಿಕೊಡಬೇಕೆಂದು ತಮ್ಮಲ್ಲಿ ಕಳಾಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಧನ್ಯವಾದಗಳೊಂದಿಗೆ

ದಿನಾಂಕ : 18-04-2019 ತಮ್ಮ ವಿಶ್ವಾಸಿ

ಸ್ಥಳ : ಬಿಜಾಪುರ ಮಧು

**3) ನಿಮ್ಮನ್ನು ಉಡುಪಿ ಶ್ರೀಕೃಷ್ಣಪ್ರೌಢಶಾಲೆಯಲ್ಲಿ ಓದುತ್ತಿರುವ ಕಿರಣ ಎಂದು ಭಾವಿಸಿಕೊಂಡು ನಿಮ್ಮಶಾಲೆಯಲ್ಲಿ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದ ಕುರಿತು ಪತ್ರಿಕೆಯಲ್ಲಿ ಪ್ರಕಟಿಸುವಂತೆ ಪ್ರಜಾವಾಣಿ ಪತ್ರಿಕೆಯ ಸಂಪಾದಕರಿಗೊಂದು ಪತ್ರಬರೆಯಿರಿ.**

**ಇವರಿಂದ,**

ಕಿರಣ
10ನೇತರಗತಿ
ಶ್ರೀಕೃಷ್ಣಪ್ರೌಢಶಾಲೆ, ಉಡುಪಿ

**ಇವರಿಗೆ,**

ಸಂಪಾದಕರು, ಪ್ರಜಾವಾಣಿ ದಿನಪತ್ರಿಕೆ
ಕಲ್ಲುಕಟ್ಟಡ ರೂಮ್ ನಂ-5
ಸದಾಶಿವ ನಗರ,ಬೆಂಗಳೂರು-658432

ಮಾನ್ಯರೇ

ವಿಷಯ: ಗಣರಾಜ್ಯೋತ್ಸವದ ವರದಿ ಪ್ರಕಟಿಸುವಂತೆ ಮನವಿ

ನಮ್ಮಶಾಲೆಯಲ್ಲಿ ದಿನಾಂಕ 26-01-2019 ರಂದು ಗಣರಾಜ್ಯೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಯಿತು ಅದರ ವರದಿಯನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಮನವಿ ಮಾಡಿಕೊಳ್ಳುತ್ತಿದ್ದೇನೆ.

ದಿನಾಂಕ 26-01-2019 ರಂದು ಉಡುಪಿಯ ಶ್ರೀಕೃಷ್ಣಪ್ರೌಢಶಾಲೆಯಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಗಣರಾಜ್ಯೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀಯುತ ಎ.ಪಿ.ಜೆ.ಅಬ್ದುಲ್‌ಕಲಾಂರವರು ಧ್ವಜಾರೋಹಣ ನೆರವೇರಿಸಿ ಸಂವಿಧಾನದ ಆದರ್ಶಗಳನ್ನು ಎಲ್ಲರ ಮನಮುಟ್ಟುವಂತೆ ವಿವರಿಸಿದರು. ಇನ್ನೊಬ್ಬ ಅತಿಥಿಗಳಾಗಿದ್ದ ಶ್ರೀಯುತ ಡಿ.ವಿ.ಜಿ ಯವರು ಸಂವಿಧಾನನ ಮಹತ್ವಗಳನ್ನು ಕುರಿತು ಭಾಷಣ ಮಾಡಿದರು. ಜಿಲ್ಲಾಧಿಕಾರಿಗಳು ತಮ್ಮ ಅಧ್ಯಕ್ಷಿಯ ಭಾಷಣದಲ್ಲಿ ಸಂವಿಧಾನದ ನಿರ್ಮಾತೃಗಳ ಕುರಿತು ಮತ್ತು ಭಾರತ ಗಣರಾಜ್ಯವಾದ ಬಗ್ಗೆ ತಿಳಿಸಿದರು. ಕನ್ನಡ ಶಿಕ್ಷಕರು ದೇಶಭಕ್ತಿಯ ಸ್ಲೋಗನ್ನುಗಳೊಂದಿಗೆ ಸ್ವಾಗತ ಮಾಡಿ ಎಲ್ಲರ ಗಮನ ಸೆಳೆದರು. ಸಮಾಜ ಶಿಕ್ಷಕರು ನಿರೂಪಿಸಿದರು. ವಿದ್ಯಾರ್ಥಿಗಳು ದೇಶಭಕ್ತಿ ಮೂಡಿಸುವ ಸಾಂಸ್ಕೃತಿಕ ಕಾರ್ಯಕ್ರಗಳನ್ನು ಮಾಡಿದರು. ಮುಖ್ಯಗುರುಗಳು ಸಮಾರಂಭದಲ್ಲಿ ಭಾಗವಹಿಸಿದ್ದ ಎಲ್ಲರಿಗೂ ವಂದನಾರ್ಪಣೆ ಅರ್ಪಿಸಿದರು.

ಧನ್ಯವಾದಗಳೊಂದಿಗೆ

ದಿನಾಂಕ : 26-01-2019 ತಮ್ಮ ವಿಶ್ವಾಸಿ
ಸ್ಥಳ : ಉಡುಪಿ ಕಿರಣ

**4) ನಿಮ್ಮನ್ನು ಮಂಗಳೂರಿನ ರಾಣಿಅಬ್ಬಕ್ಕ ಪ್ರೌಢಶಾಲೆಯಲ್ಲಿ ಓದಿರುವ ಅರುಣ ಎಂದು ಭಾವಿಸಿಕೊಂಡು ನಿಮ್ಮ ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿ ಕೋರಿ ಮುಖ್ಯೋಪಾಧ್ಯರಿಗೊಂದು ಪತ್ರಬರೆಯಿರಿ.**

**ಇವರಿಂದ,**

ಅರುಣ
10ನೇತರಗತಿ
ರಾಣಿಅಬ್ಬಕ್ಕ ಪ್ರೌಢಶಾಲೆ
ಮಂಗಳೂರು-02

**ಇವರಿಗೆ,**

ಮುಖ್ಯೋಪಾಧ್ಯಾಯರು
ರಾಣಿಅಬ್ಬಕ್ಕ ಪ್ರೌಢಶಾಲೆ
ಮಂಗಳೂರು-02

ಮಾನ್ಯರೇ

ವಿಷಯ: ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿ ಕೋರಿ

ಸರ್, ನಾನು ಅರುಣ ನಿಮ್ಮ ಶಾಲೆಯಲ್ಲಿ 8ನೇ ತರಗತಿಯಿಂದ 10ನೇ ತರಗತಿಯವರೆಗೆ ಓದಿದ್ದು 2015-16 ನೇಸಾಲಿನಲ್ಲಿ ನಡೆದ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದೇನೆ. ನನ್ನ ಮುಂದಿನ ವಿದ್ಯಾಭ್ಯಾಸಕ್ಕಾಗಿ ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿ ಕೊಡ ಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಧನ್ಯವಾದಗಳೊಂದಿಗೆ

ದಿನಾಂಕ : 21-03-2019 ಇಂತಿ ತಮ್ಮ ವಿದ್ಯಾರ್ಥಿ
ಸ್ಥಳ : ಮಂಗಳೂರು. ಅರುಣ

**5) ನಿಮ್ಮನ್ನು ಶಿವಮೊಗ್ಗದ ಕುವೆಂಪು ಪ್ರೌಢಶಾಲೆಯಲ್ಲಿ ಓದುತ್ತಿರುವ ಸಾನ್ವಿತ ಎಂದು ಭಾವಿಸಿಕೊಂಡು ನಿಮ್ಮ ಅಕ್ಕನ ಮದುವೆಗೆ ಹೋಗಲು 3 ದಿನ ರಜೆಕೋರಿ ಮುಖ್ಯೋಪಾಧ್ಯರಿಗೊಂದು ಪತ್ರಬರೆಯಿರಿ.**

**ಇವರಿಂದ,**

ಸಾನ್ವಿತ
10ನೇತರಗತಿ 'ಎ' ವಿಭಾಗ
ಕುವೆಂಪು ಪ್ರೌಢಶಾಲೆ
ತೀರ್ಥಹಳ್ಳಿ ರಸ್ತೆ
ಶಿವಮೊಗ್ಗ–07

**ಇವರಿಗೆ,**

ಮುಖ್ಯೋಪಾಧ್ಯಾಯರು
ಕುವೆಂಪು ಪ್ರೌಢಶಾಲೆ
ತೀರ್ಥಹಳ್ಳಿ ರಸ್ತೆ
ಶಿವಮೊಗ್ಗ–07

ಮಾನ್ಯರೇ

ವಿಷಯ: ಮೂರು ದಿನಗಳ ರಜೆ ಕೋರಿ

ಸರ್, ಈ ಮೂಲಕ ತಿಳಿಸುವುದೇನೆಂದರೆ ದಿನಾಂಕ 21–04–2019 ರಿಂದ 23–03–2019 ವರೆಗೆ ಹಾವೇರಿಯಲ್ಲಿ ನನ್ನ ಅಕ್ಕನ ಮದುವೆ ನಡೆಯುತ್ತಿದ್ದು ಮದುವೆಗೆ ಹೋಗಲು ಮೂರು ದಿನಗಳ ಕಾಲ ರಜೆ ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ಆ ದಿನಗಳಲ್ಲಿ ನಡೆದ ಪಾಠಗಳ ಬಗ್ಗೆ ಬಂದ ನಂತರ ಸ್ನೇಹಿತರಿಂದ ತಿಳಿದುಕೊಳ್ಳುತ್ತೇನೆ ಎಂಬ ಭರವಸೆ ನೀಡುತ್ತಿದ್ದೇನೆ. ದಯಮಾಡಿ ಅನುಮತಿ ನೀಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಧನ್ಯವಾದಗಳೊಂದಿಗೆ

ದಿನಾಂಕ : 21–03–2019 ಇಂತಿ ತಮ್ಮ ವಿದ್ಯಾರ್ಥಿ

ಸ್ಥಳ : ಶಿವಮೊಗ್ಗ ಸಾನ್ವಿತ

**6) ನಿಮ್ಮನ್ನು ಮಂಡ್ಯದ ಶ್ರೀಕಾವೇರಿ ಪ್ರೌಢಶಾಲೆಯಲ್ಲಿ 10ನೇ ತರಗತಿ ಓದುತ್ತಿರುವ ಸುಮನ ಎಂದು ಭಾವಿಸಿಕೊಂಡು ಕನ್ನಡ ವಿಶ್ವಕೋಶ ಕಳಿಸಿಕೊಡುವಂತೆ ಜ್ಞಾನದೀಪಿಕಾ ಪುಸ್ತಕ ಭಂಡಾರಕ್ಕೆ ಒಂದು ಪತ್ರ ಬರೆಯಿರಿ.**

**ಇವರಿಂದ,**

ಸುಮನ
10ನೇ ತರಗತಿ
ಶ್ರೀಕಾವೇರಿ ಪ್ರೌಢಶಾಲೆ
ಮಂಡ್ಯ–09

**ಇವರಿಗೆ,**

ಮುಖ್ಯಸ್ಥರು
ಜ್ಞಾನದೀಪಿಕಾ ಪುಸ್ತಕ ಭಂಡಾರ
ಮೋತಿ ಸರ್ಕಲ್
ಬಳ್ಳಾರಿ–576523

ಮಾನ್ಯರೇ

ವಿಷಯ: ಕನ್ನಡ ವಿಶ್ವಕೋಶ ಕಳಿಸಿಕೊಡುವಂತೆ

ಸರ್, ಈ ಮೂಲಕ ತಿಳಿಸುವುದೇನೆಂದರೆ ನಾನು 10ನೇ ತರಗತಿ ಓದುತ್ತಿದ್ದು , ನನ್ನ ವಿದ್ಯಾಭ್ಯಾಸಕ್ಕೆ ಪೂರಕವಾದ ಮಾಹಿತಿ ಸಂಗ್ರಹಿಸಲು ಕನ್ನಡ ವಿಶ್ವಕೋಶ ಬೇಕಾಗಿದೆ. ಆದ್ದರಿಂದ ದಯಮಾಡಿ ಆ ಪುಸ್ತಕ ಕಳುಹಿಸಿಕೊಡಲು ಮನವಿ ಮಾಡಿಕೊಳ್ಳುತ್ತಿದ್ದೇನೆ. ಅಂಚೆಯ ಮೂಲಕ ಕಳುಹಿಸಿದರೆ ಹಣ ಸಂದಾಯ ಮಾಡಿ ಬಿಡಿಸಿಕೊಳ್ಳುತ್ತೇನೆ ಎಂದು ತಿಳಿಸುತ್ತೇನೆ. ಅಂಚೆ ವಿಳಾಸ: ಸುಮನ,10ನೇ ತರಗತಿ ಶ್ರೀಕಾವೇರಿ ಪ್ರೌಢಶಾಲೆ,ಮಂಡ್ಯ ಜಿಲ್ಲೆ ಅಂಚೆಪೆಟ್ಟಿಗೆ ಸಂಖ್ಯೆ–657435.

ಧನ್ಯವಾದಗಳೊಂದಿಗೆ

ದಿನಾಂಕ : 21–03–2019 ತಮ್ಮ ವಿಶ್ವಾಸಿ

ಸ್ಥಳ : ಮಂಡ್ಯ ಸುಮನ